ಚಿತ್ರಗುಪ್ತನ ದಪ್ತರ.

THE DETECTIVE'S RECORD, No. 5-6

ಮಾಯಾವಿನಿಯ

ಅತ್ಯಾಚಾರ ಮತ್ತು ಪರಿಣಾಮ.

ವಿದ್ವಾನ್ ಬಾಲಸರಸ್ವತಿಯವರಿಂದ
ವಿರಚಿತವಾದುದು.

ವಿದ್ವಾನ್ ಬಾಲಸರಸ್ವತೀ,
ಸರಸ್ವತೀ ಪೀಠಂ,
ಬೆಂಗಳೂರು ಸಿಟಿ.

ಜುಲೈ. ೧೯೧೪.] [ಕ್ರಯ ೪ ಆಣೆ

ಎಂ. ಎಸ್. ರಾವ್ ಕಂಪೆನಿ,
ಪುಸ್ತಕ ವ್ಯಾಪಾರಿಗಳು, ಬೆಂಗಳೂರು ಸಿಟಿ

ಚಿತ್ರಗುಪ್ತನ ದಪ್ತರ

(The Detective's record)

No. 5.

ಮಾಯಾವಿನಿಯ ಅತ್ಯಾಚಾರ.

ವಿದ್ವಾನ್ ಬಾಲಸರಸ್ವತಿ ಯವರಿಂದ

ವಿರಚಿತವಾದುದು.

ಪ್ರಥಮ ಮುದ್ರಣ, ೧೦೦೦.

ಸರಸ್ವತೀ ಪೀಠಂ

ಬೆಂಗಳೂರು ಸಿಟಿ.

ಐರಿಷ್ ಮುದ್ರಾಲಯ

೧—೫—೧೯೧೪

ವಿಜ್ಞಾಪನೆ.

'ಆಲಸ್ಯದೋಷಾದಮೃತಂ ವಿಷಾಯತೆ, — ಆಲಸ್ಯದಿಂದ ಅಮೃತವಾದರೂ ವಿಷವಾಗುವುದು—ಎಂಬ ಗಾದೆಗೆ ಸರಿಯಾಗಿ ನಾನೀಗ ನನ್ನ ಸೋಮಾರಿತನಕ್ಕೆ ತಕ್ಕ ಪ್ರತಿಫಲವನ್ನು ಹೊಂದಿದೆನು. ಬಂಗಾಳಾದಲ್ಲಿ ಪ್ರಸಿದ್ಧೋಪನ್ಯಾಸಲೇಖಕರೆನಿಸಿದ ಶ್ರೀ ಪಾಂಚಕೋರಿದೇಯೆಂಬ ಮಹಾಶಯರು ನಿರ್ಮಿಸಿದ್ದ ಮಾಯಾವಿನಿಯೆಂಬ ಚಮತ್ಕಾರವಾದ ಪತ್ತೇದಾರಿಯ ಉಪನ್ಯಾಸವನ್ನು ೧೯೧೦ನೆಯ ಇಸವಿಯಲ್ಲಿಯೇ ಕನ್ನಡಕ್ಕೆ ಪರಿವರ್ತನಮಾಡಿ, ಸಮುದ್ರದ ಅಲೆಗಳು ಶಾಂತವಾದಮೇಲೆ ಸ್ನಾನಮಾಡಬೇಕೆಂದು ಕಾಲವನ್ನು ನಿರೀಕ್ಷಿಸಿಕೊಂಡು ಕುಳಿತಿದ್ದ ಮೂಢನಂತೆ ಕಾಲಹರಣ ಮಾಡಿಬಿಟ್ಟೆನು. ಅದಕ್ಕೆ ತಕ್ಕ ಶಿಕ್ಷೆಯು ನನಗಾದರೂ ಬಹುಕಾಲ ಪಟ್ಟಶ್ರಮವು ನಿರರ್ಥಕವಾಗಿ ಹೋಗುವುದೆಂಬ ವ್ಯಸನದಿಂದ ಮಾಯಾವಿನಿಯೆಂಬ ಗ್ರಂಥವನ್ನು 'ಮಾಯಾವಿನಿಯ ಅತ್ಯಾಚಾರ' 'ಮಾಯಾವಿನಿಯ ಪರಿಣಾಮ' ಎಂಬದಾಗಿ ಎರಡು ಭಾಗವಾಗಿ ವಿಂಗಡಿಸಿ ನನ್ನ ದಪ್ತರದಲ್ಲಿ ಸೇರಿಸಿರುವೆನು — ಮಹನೀಯರನೇಕರು ಗ್ರಂಥಗಳನ್ನು ಭಾಗಗಳಾಗಿ ವಿಂಗಡಿಸಿ ಪ್ರಚಾರಪಡಿಸುವುದು ಸರಿಯಲ್ಲವೆಂದು ಅಭಿಪ್ರಾಯಪಟ್ಟಿರುವರು. ಇದು ನನಗೆ ತಿಳಿಯದೇ ಇರತಕ್ಕ ವಿ

ಷಯುವಲ್ಲವಾದರೂ, ಅನೇಕ ಸಂಕಟಕ್ಕೆ ಒಳಗಾಗಿ ಈ ರೀತಿಯಲ್ಲಿ ನಾನು ಪ್ರಚಾರಪಡಿಸಬೇಕಾಗಿರುವುದು — ಗುಣಜ್ಞರು ದೋಷಗಳನ್ನೂ ಗುಣಗಳನ್ನಾಗಿ ಮಾಡಿಕೊಂಡು ಸಂತೋಷಪಡುವರು—ದೋಷಜ್ಞರು ಗುಣಗಳನ್ನೂ ದೋಷಗಳನ್ನಾಗಿ ಎಣಿಸಿ ದೂಷಿಸುವುದಾದರೂ ನಾನೇ ಧನ್ಯನು. ಇತಿ ಬಾಲಸರಸ್ವತೀ.

ಜಯಮಂಗಳಭಗವಾನ್

ಮಾಯಾವಿನಿಯ ಅತ್ಯಾಚಾರ.

ಒಂದನೆಯ ಸಂಧಿ.

(ಹೊಸಸಮಾಚಾರ)

ಒಂದು ದಿನ ಬೆಳಗಿನಜಾವದಲ್ಲಿ ದೇವೇಂದ್ರ ವಿಜಯನು ಹತ್ತಿರದಲ್ಲಿದ್ದ ಪೋಲೀಸ್ ಠಾಣೆಗೆ ಹೋಗಿ ಅಲ್ಲಿದ್ದ ಇನ್‌ಸ್ಪೆಕ್ಟರು ರಾಮಕೃಷ್ಣನನ್ನು ನೋಡಿದನು.

ಮಹಾರಾಜ ಶ್ರೀ ಬಿ. ವೆಂಕಟಾಚಾರ್ಯರಿಂದ ಕನ್ನಡಕ್ಕೆ ಪರಿವರ್ತಿತವಾಗಿರುವ ಮನೋರಮೆಯನ್ನು ಅನೇಕರು ಓದಿರಬಹುದಾದುದರಿಂದ; ದೇವೇಂದ್ರವಿಜಯನ ಪರಿಚಯವನ್ನು ನಾನಿಲ್ಲಿ ಪುನಃ ಮಾಡಿಕೊಡಬೇಕಾದ ಆವಶ್ಯಕತೆಯೇನೂ ಇರುವುದಿಲ್ಲ. ನಾವು ಯಾವ ಕಾಲವನ್ನು ಅವಲಂಬಿಸಿ ಈ ಗ್ರಂಥವನ್ನು ಬರೆಯಲು ಉಪಕ್ರಮಿಸಿರುವೆವೋ, ಆ ಕಾಲದಲ್ಲಿ ದೇವೇಂದ್ರನು ಬಹುಸಮರ್ಥನಾದ ಪ್ರಸಿದ್ಧನಾದ ಪತ್ತೇದಾರನಾಗಿದ್ದನು. ಆತನ ಹೆದರಿಕೆಯಿಂದ ಅನೇಕರು ತಮ್ಮ ತಮ್ಮ ಕಳ್ಳತನವನ್ನು ಬಿಟ್ಟು ಗೃಹಸ್ಥರಾಗಿದ್ದರು. ದರೋಡೆಗಳ್ಳರನೇಕರು ಇದ್ದಕ್ಕಿದ್ದಹಾಗೆಯೇ ಮಾಯವಾಗಿಬಿಟ್ಟರು. ಅನೇಕಜನ ಮೋಸಗಾರರು ಸಭ್ಯರಾದರು, ದುಷ್ಟರು ತಮ್ಮ ದುಷ್ಟಗುಣಗಳನ್ನು ದೂರಮಾಡಿ ಯೋಗ್ಯರಂತೆ ದಿನಗಳನ್ನು ಕಳೆಯುತ್ತಿದ್ದರೂ, ಏಕಾಂತದಲ್ಲಿ ದೇವರ ಮುಂದೆ ಕುಳಿತುಕೊಂಡು, ದೇವೇಂದ್ರನಿಗೆ ಬೇಗ ಮರಣ ಸಂಭವಿಸ

ಲೆಂದು ಹಾರೈಸುತಿದ್ದರು. ದೇವೇಂದ್ರನನ್ನು ಕಂಡರೆ ಎ ಲ್ಲರೂ ಹೆದರುವರು; ಜುಮೇಲಿಯಾ ಮಾತ್ರ ಹೆದರಳು. ಆಕೆಯು ತನ್ನ ಇಷ್ಟದೇವತೆಯು ತೋರಿಸಿದ ಫಲವಿ ಲ್ಲದ ಉಪಕಾರದಲ್ಲಿ ತೃಪ್ತಿಪಡದೆ, ತನ್ನ ಕೈಯಿಂದಲೇ ದೇವೇಂದ್ರನನ್ನು ಖೂನಮಾಡಬೇಕೆಂದೆಣಿಸಿ ಸತ್ತಿದ್ದವಳು ಪುನಃ ಬದುಕಿಬಂದಳು. ಆಕೆಗೆ ಆತನನ್ನು ಕಂಡರೆಮಾ ತ್ರ ಸರ್ವಾಂಗವೂ ಉರಿದು ಹೊಗುವುದು. ದೇವೇಂದ್ರ ನು ಶಕ್ತಿಇಲ್ಲದ ಬುದ್ಧಿಹೀನನಾದ ಪತ್ತೇದಾರನಾಗಿದ್ದಿ ದ್ದರೆ, ಜುಮೆಲೆಯು ಆತನನ್ನು ತಿಗಣೆಯಂತೆ ಕಾಲಿನಿಂದ ಹಿಸಿಕಿಬಿಡುತಿದ್ದಳು; ಆದರೆ ಯತ್ನವಿಲ್ಲದೆ ಹೋಯಿತು. ಹೀಗಾದುದೇ ಆಕೆಯ ಕೋಪವು ಮತ್ತಷ್ಟು ಹೆಚ್ಚುವು ದಕ್ಕೆ ಕಾರಣವಾಯಿತು. ಈರೀತಿಯಲ್ಲಿ ದಿನೇ ದಿನೇ ಹೆಚ್ಚುತಲಿದ್ದ ಕೋಪಾಗ್ನಿಯಲ್ಲಿ ದೇವೇಂದ್ರನನ್ನು ಆಹು ತಿಯಾಗಿಮಾಡಿ ತಾನು ಸಂತೋಷವಾಗಿ ಸಾಯಬೇಕೆಂದು ಜುಮೆಲೆಯು ಎಣಿಸಿ ತನ್ನ ಸಾಹಸವೆಲ್ಲವನ್ನೂ ಉಪಯೋ ಗಿಸಲಾರಂಭಿಸಿದಳು. ಆಕೆಯು ತೋರಿಸಿದ ಸಾಹಸವೆ ಲ್ಲವೂ ಈಗ್ರಂಥದಲ್ಲಿ ವಿಶದವಾಗಿ ವರ್ಣಿತವಾಗಿರುವುವು ಈ ಗ್ರಂಥವನ್ನು ಓದಬೇಕೆಂದು ಅಪೇಕ್ಷಿಸತಕ್ಕವರು, ಮ ನೋರಮೆಯನ್ನೊಂದುಸಲ ಓದಿದರೆ ನಮ್ಮ ಪ್ರಕೃತಕಥೆ ಯು ಸ್ಪಷ್ಟವಾಗಿ ಗೊತ್ತಾಗುವುದು. ನಮ್ಮ ಈಗ್ರಂಥ ವು ಮನೋರಮೆಯ ಪರಿಶಿಷ್ಟವೆಂದು ಹೇಳದರೂ ಹೇಳ ಬಹುದು.

ದೇವೇಂದ್ರವಿಜಯನು ಯಾವಾಗ ರಾಮಕೃಷ್ಣನ ನ್ನು ನೋಡಿದನೋ, ಆಗ ಆತನು ನಿಶ್ಚಿಂತನಾಗಿ ಹೊ ಗೆಯ ಬತ್ತಿಯೊಂದನ್ನು ಬಾಯಲ್ಲಿ ಕಚ್ಚಿಕೊಂಡು ಹೊಗೆ

ಯನ್ನು ಒಳಗೆ ಸೇದುತಲೂ, ಆಮೇಲೆ ಹೊರಗೆಬಿ ಡುತಲೂ ಇದ್ದನು. ಹೊಗೆಯು ಸುತ್ತಿಸುತ್ತಿಕೊಂಡು ಮೇಲಕ್ಕೆ ಏರುತ್ತಲೂ, ಒಂದೊಂದುವೇಳೆ ಹಠಾತ್ತಾಗಿ ಕೆಳಗೆ ಜಾರಿಬೀಳುತ್ತಲೂ, ಇದ್ದಕ್ಕಿದ್ದಹಾಗೆಯೇ ' ಸು ಯ್', ಎಂದು ಕಿಟಕಿಯ ಮುಖಾಂತರವಾಗಿ ಓಡಿಹೋ ಗುತ್ತಲೂ ಆಟವಾಡುತಿದ್ದಿತು. ರಾಮಕೃಷ್ಣನು ಈ ಲೀ ಲಾವಿಲಾಸವನ್ನು ನೋಡುತ ನೋಡುತ ತನ್ನನ್ನು ತಾನೇ ಮರೆತು ಕುಳಿತಿದ್ದನು. ಅಷ್ಟುಹೊತ್ತಿಗೆ ಮುಂಚೆ ದೇ ವೇಂದ್ರನು ಅಕಸ್ಮಾತ್ತಾಗಿ ತಾನು ಕುಳಿತಿದ್ದ ಕೋಣೆ ಯೊಳಗೆ ಬಂದುದನ್ನು ನೋಡಿ, ರಾಮಕೃಷ್ಣನು ಕೊಂಚ ಅಚ್ಚರಿಗೊಂಡು, ಮರ್ಯಾದೆಯೊಡನೆ ಆತನನ್ನು ತನ್ನ ಪ ಕ್ಕದಲ್ಲಿದ್ದ ಕುರ್ಚಿಯಮೇಲೆ ಕುಳಿತುಕೊಳ್ಳುವಂತೆ ಹೇ ಳಿ,—ಮಹಾಶಯ ! ಇದೇನು ಇಷ್ಟುಹೊತ್ತಿಗೆ ಮುಂಚೆ ದಯಮಾಡಿಸಿದುದು ! ಹೆಚ್ಚುಸಮಾಚಾರವೇನೂ ಇಲ್ಲವ ಷ್ಟೇ? ಎಂದನು.

ದೇವೇಂದ್ರವಿಜಯ— ಹೆಚ್ಚುಸಮಾಚಾರವಿಲ್ಲದೆ ಏ ನು? ಕೇಳದರೆ, ನಡೆದಸಂಗತಿಯು ಮನುಷ್ಯಮಾತ್ರದವ ರಿಗೆ ಸಾಧ್ಯವಲ್ಲವೆಂದು ನಿಮಗೇ ಗೊತ್ತಾಗುವುದು. ಅನಂತ ರ ಇಂತಹ ವ್ಯಾಪಾರವನ್ನು ನಾನೆಂದಿಗೂ ನೋಡಿಯೂ ಇಲ್ಲ—ಕೇಳಿಯೂ ಇಲ್ಲವೆಂದು ನೀವೇ ಅಭಿಪ್ರಾಯ ಪಡು ವಿರಿ.

ರಾಮಕೃಷ್ಣ—ಏನು ! ಅಂತಹ ಘಟನೆಯು ಸಂಘ ಟಿಸಿರುವುದೇ?

ದೇವೇಂದ್ರ—ಬಹಳ ಆಶ್ಚರ್ಯವಾದ ಸಂಗತಿ ದೈವಿ ಕವೇ ಹೊರತು ಮಾನುಷಿಕವಲ್ಲವೇ ಅಲ್ಲ. ನೀವು ಕೇ

ಇದ್ದೇ ಆದರೆ, ನಿಮ್ಮ ಆಶ್ಚರ್ಯಕ್ಕೆ ಪಾರವೇ ಇರು ವುದಿಲ್ಲ.

ರಾಮು—ಹಾಗೆಯೋ! ಹಾಗಾದರೆ ನಾನೂ ಆಶ್ಚ ರ್ಯಪಡಬೇಕೆಂದಪೇಕ್ಷಿಸುವೆನು. ಸುಮಾರು ಹತ್ತು ವರುಷ ಗಳಿಂದೀಚೆಗೆ ನಾನು ಆಶ್ಚರ್ಯಪಟ್ಟೆನೋ ಇಲ್ಲವೋ ಖಂಡಿ ತವಾಗಿಯೂ ತಿಳಿದು ಹೇಳುವುದಕ್ಕಾಗುವುದಿಲ್ಲ. ನೀವು ಆಶ್ಚರ್ಯವೆಂದು ಹೇಳುವುದುನೋಡಿದರೆ ಅದರಲ್ಲಿ ಏನೋ ಹೊಸಸಮಾಚಾರವು ಇದ್ದೇ ಇರಬೇಕು.

ದೇವೇಂದ್ರ—ಫೂಲ್‌ಸಾಹೇಬನು ತಮ್ಮ ಜ್ಞಾಪಕ ದಲ್ಲಿರುವನೋ?

ರಾಮು—ಆತನನ್ನು ಮರೆವುದೆಂದರೇನು?

ದೇವೇಂದ್ರ—ಇಲ್ಲಿನವರೆಗೂ ಮನೋರಮೆಯೆಂದು ಸುಳ್ಳುವೇಷವನ್ನು ಧಾರಣಮಾಡಿ ಇಲ್ಲದವೋಸವನ್ನು ತೋರಿಸಿ, ಕೊನೆಗೆ ತೋಟದ ಮನೆಯಲ್ಲಿ ಆತ್ಮಹತ್ಯವನ್ನು ಮಾಡಿಕೊಂಡ ಆ ಜುಮೆಲೆಯೋ?

ರಾಮು—ಆ ಪಿಶಾಚಿಯೋ!

ದೇವೇಂದ್ರ—ನಿಜವಾಗಿಯೂ ಅವಳು ಪಿಶಾಚಿ ಯೇ ಸರಿ.

ರಾಮು—ಅವಳಿಗೇನಾಗಿದೆ?

ದೇವೇಂದ್ರ—ಆಕೆಯು ಸತ್ತವಿಷಯುವೆಲ್ಲವೂ ತಮ ಗೆ ಚೆನ್ನಾಗಿಯೂ ಗೊತ್ತೇ ಇರುವುದಷ್ಟೆ?

ರಾಮು—ಓಹೋ! ಚೆನ್ನಾಗಿಯೂ ಗೊತ್ತಿರು ವುದು.

ದೇವೇಂದ್ರ—ಜುಮೆಲೆಯು ಶವವು ಎಲ್ಲಿನವರೆಗೂ ಗೋರಿಯಲ್ಲಿ ಇಡಲ್ಪಡಲಿಲ್ಲವೋ, ಅಲ್ಲಿನವರೆಗೂ ನಾನು

ಆಕೆಯನ್ನು ಒಂದೇ ದೃಷ್ಟಿಯಿಂದ ನೋಡುತಿದ್ದೆನೆಂದು ನೀವೂ, ಕಾಳೀಘಟ್ಟದ ಇನ್‌ಸ್ಪೆಕ್ಟರೂ ಇಬ್ಬರೂ ಸೇರಿ ಕೊಂಡು ನನ್ನನ್ನು ಲೇವಡಿಮಾಡಿದುದು ನಿಮಗೆ ಇನ್ನೂ ಜ್ಞಾಪಕದಲ್ಲಿದೆಯೋ?

ರಾಮ—ಗೋರಿಯಲ್ಲಿಡುವವರೆಗೆ ಏಕೆ, ಆಕೆಯನ್ನು ಗೋರಿಯಲ್ಲಿಟ್ಟು ಮಣ್ಣುಮುಚ್ಚುವವರೆಗೂ, ನೀವು ಆಕೆಯನ್ನು ಒಂದೇ ದೃಷ್ಟಿಯಿಂದ ನೋಡುತಿದ್ದಿರಿ. ಅದನ್ನು ಜ್ಞಾಪಿಸಿಕೊಂಡರೆ ನನಗೆ ಇನ್ನೂ ನಗೆ ಬರುವುದು. ದೇವೇಂದ್ರ!

ದೇವೇಂದ್ರ—ನಾನು ಆಗ ಹಾಗೆ ನೋಡುತಿದ್ದುದು ನಿಷ್ಫಲವೆನ್ನುವುದಕ್ಕೆ ಅನೇಕಪ್ರಮಾಣಗಳುಂಟು. ಆದರೆ ಎಷ್ಟುದೂರ ದೃಷ್ಟಿಯಿಟ್ಟಿದ್ದರೆ ಪ್ರಯೋಜನವಿರುತಿದ್ದಿತೋ, ಅಷ್ಟುದೂರಮಾತ್ರ ದೃಷ್ಟಿಯಿಡಲು ಸಾಧ್ಯವಾಗಲಿಲ್ಲ. ಇನ್ನೂ ಕೊಂಚಕಾಲ ಅದೇ ಗೋರಿಯ ಮೇಲೆ ನಾನು ವಿಶೇಷ ದೃಷ್ಟಿಯಿಟ್ಟಿದ್ದರೆ ಬಹಳ ಚೆನ್ನಾಗಿರುತ್ತಿತ್ತು.

ರಾಮ—ಸರಿ ಸರಿ, ಅದೇನು ಹೇಳಿರಿ. ನಿಮ್ಮ ಬುದ್ಧಿಯಲ್ಲಿ ಏನೋ ವಿಕಲ್ಪವುಂಟಾಗಿರುವಂತೆ ಕಾಣುವುದು. ಸ್ಮಶಾನದ ಗೋರಿಯನ್ನು ನೀವು ಇಷ್ಟು ಎಚ್ಚರಿಕೆಯಿಂದ ನೋಡಿಕೊಳ್ಳಲು ಕಾರಣವೇನು? ಇದರ ಮೇಲೂ ನೀವು ಗೋರಿಯ ಮೇಲೆ ಪಹರೆಯನ್ನು ಇಡಿಸಿರಲಿಲ್ಲವೇ?

ದೇವೇಂದ್ರ—ಅಹುದು, ಒಂದುವಾರ ಮಾತ್ರ.

ರಾಮ—ಯಾವಳು ಸತ್ತುಹೋಗಿರುವಳೋ, ಯಾವಳನ್ನು ಐದುಗಜ ಆಳವಿರುವ ಗುಂಡಿಯಲ್ಲಿ ಹೂತು ಮೇಲೆ ಮಣ್ಣು ಮುಚ್ಚಿರುವರೋ, ಅಂತಹವಳ ಮೇಲೆ ನೀವು ಒಂದುವಾರ ದೃಷ್ಟಿಯಿಟ್ಟಿದ್ದಿರಿ. ಇನ್ನೂ ಕೆಲವು ದಿನಗಳ

ಮಟ್ಟಿಗಾದರೂ ದೃಷ್ಟಿಯಿಟ್ಟಿದ್ದರೆ ಚೆನ್ನಾಗಿತ್ತೆಂದು ಈಗ ಹೇಳುತ್ತಿರುವಿರಿ. ನಿಮ್ಮ ಈ ಮಾತುಗಳಿಗೆಲ್ಲ ಅರ್ಥವೇನು ? ನೆಲದೊಳಗೆ, ಅದರಲ್ಲಿಯೂ ಒಂದು ವಾರ, ಮನುಷ್ಯನಾದವನು ಬದುಕಿರಬಲ್ಲನೆಂಬುದು, ನನ್ನ ಬುದ್ಧಿಗೆ ಗೋಚರವಲ್ಲದ ವಿಷಯವಾಗಿರುವುದು.

ದೇವೇಂದ್ರ—ನಾನು ತಮಗೆ ಸುಳ್ಳುಹೇಳಲು ಬಂದವನಲ್ಲ. ನಮ್ಮ ದೇಶದಲ್ಲಿ ಸಾಧಾರಣರಾದ ಜನರು ಈ ಸ್ಥಿತಿಯಲ್ಲಿ ಬದುಕಿರುವುದು ಅಸಂಭವವೇ ಸರಿ.

ರಾಮ—ದೇವೇಂದ್ರ, ಮೃತ್ಯುವಿಗೆ ಸಾಧಾರಣ ಜನರೇನು? ಅಸಾಧಾರಣ ಜನರೇನು?

ದೇವೇಂದ್ರ—ಅರಬಿಸ್ಥಾನ (Arabia) ದ ಫಕೀರರನೇಕರು ಗೋರಿ ಮಾಡಲ್ಪಟ್ಟು, ಮತ್ತೆ ಎದ್ದುಬಂದಿರುವ ಸಂಗತಿಗಳು ನಿಮ್ಮ ಕಿವಿಗೆ ಯಾವಾಗಲೂ ಬಿದ್ದಂತೆ ತೋರುವುದಿಲ್ಲ.

ರಾಮ—ಹಾಗೆಂದರೇನು ! ನಾನು ಎಷ್ಟೋ ಸಂಗತಿಗಳನ್ನು ಕೇಳಿರುವೆನು.

ದೇವೇಂದ್ರ—ಅವರೇನು ಮಾಡುವರೆಂಬುದು ?

ರಾಮ—ಅದೂ ಕೊಂಚ ಕೊಂಚ ಗೊತ್ತುಂಟು.

ಎರಡನೆಯ ಸಂಧಿ

ದೇವೇಂದ್ರ ವಿಜಯನು ಹೇಳತೊಡಗಿದನು:—

ಅರಬಿಸ್ಥಾನದ ಫಕೀರರು ಪದಾರ್ಥಗಳ ಗುಣಗಳ

ನ್ನರಿತು ರಸಾಯನಗಳನ್ನು ತಯಾರುಮಾಡಿ, ಅವುಗಳ ಪ್ರಯೋಗದಿಂದ ನಿಮ್ಮಂತಹ ಎಷ್ಟೋ ಜನರನ್ನು ಚೈತನ್ಯವಿಲ್ಲದವರನ್ನಾಗಿ ಮಾಡಿರುವರು. ದೊಡ್ಡ ದೊಡ್ಡ ಡಾಕ್ಟರುಗಳು ಎಷ್ಟೋ ಪರೀಕ್ಷೆಮಾಡಿ ನೋಡಿದರೂ ಅವರಿಗೆ ಯಾವುದೂ ಗೊತ್ತಾಗುವುದೇ ಇಲ್ಲ.

ಒಂದು ದಿನ ಎಲ್ಲರ ಎದುರಿಗೂ ಫಕೀರನೊಬ್ಬನು ಗೋರಿಯಲ್ಲಿಡಲ್ಪಟ್ಟನು. ಫಕೀರನು ಅವಧಿಯ ದಿನದ—ಅಂದರೆ ಒಂದು ತಿಂಗಳ—ವರೆಗೂ ಗೋರಿಯನ್ನು ಬಹಳ ಜಾಗರೂಕತೆಯಿಂದ ನೋಡಿಕೊಂಡಿರಬೇಕೆಂದು ತನ್ನ ಶಿಷ್ಯರಿಗೆ ಪ್ಪಣೆಮಾಡಿ ಸಮಾಧಿಸ್ಥನಾದನು. ಒಂದು ತಿಂಗಳು ಕಳೆದ ಕೂಡಲೆ ಫಕೀರನನ್ನು ಗೋರಿಯಿಂದ ಹೊರಗೆ ತೆಗೆದರು. ಆ ಕೂಡಲೆ ಸತ್ತಂತಿದ್ದ ಫಕೀರನ ದೇಹದಲ್ಲಿ ಪ್ರಾಣವಾಯು ಸಂಚರಿಸಲಾರಂಭವಾಯಿತು. ಅನಂತರ ಫಕೀರನು ಏಳುವುದು, ಕೂಡುವುದು, ಮಾತನಾಡುವುದು, ತನಗೆ ಮನಬಂದಂತೆ ಅಲ್ಲಿಗೆ ಇಲ್ಲಿಗೆ ತಿರುಗಾಡುವುದು, ಇವೇ ಮೊದಲಾದ ಕೆಲಸವನ್ನು ಮಾಡತೊಡಗಿದನು. ಬಹುಮಾತಿನಿಂದೇನು. ಫಕೀರನು ಮೊದಲು ಹೇಗಿದ್ದನೋ, ಹಾಗೆಯೇ ಆಗಿಬಿಟ್ಟನು.

ರಾಮ—(ನಗುತ) ಯಾರ ಇದಿರಿಗೆ ಇದೆಲ್ಲವೂ ನಡೆದಿರುವುದೋ ಅವರೆಲ್ಲರೂ ಕತ್ತೆಗಳಾಗಿರಬೇಕು.

ದೇವೇಂದ್ರ—ನಾವೇ ಕತ್ತೆಗಳು ! ನಾನು ನೋಡಿದ ಸಂಗತಿಗಳೆಲ್ಲವನ್ನೂ ನನ್ನ ಕಣ್ಣಾರ ನೋಡಿರುವುದರಿಂದ ನನಗೆ ಅದರಲ್ಲಿ ನಂಬುಗೆಯುಂಟು. ಪ್ರತ್ಯಕ್ಷವಾಗಿ ನೋಡಿದುದು ಸುಳ್ಳೆಂದಿಗೂ ಆಗಲಾರದು.

ರಾಮು—ಅದಂತಿರಲಿ, ಪ್ರಕೃತವಿಷಯವೇನು ? ತಿಳಿಸಿರಿ. ನಿಮ್ಮ ಹೃದಯಾರಾಧ್ಯದೇವತೆಯು ಹಿಂತಿರುಗಿ ಬರಲಿಲ್ಲವಷ್ಟೆ ?

ದೇವೇಂದ್ರ—ಡಾಕ್ಟರು ಫ್ರಾಲ್ ಸಾಹೇಬನು ಅನೇಕ ದಿವಸ ಆರಭಿಸ್ಥಾನದಲ್ಲಿದ್ದು ಅಲ್ಲಿಂದ ಸುತ್ತಿಕೊಂಡು ಕಾಮರೂಪಕ್ಕೆ ಬಂದನು. ಅವನು ಅನೇಕ ವಿಧವಾದ ಮಣಿಮಂತ್ರೌಷಧಗಳನ್ನು ಬಲ್ಲನು. ಅವನು ಬಹಳ ಹೃಷ್ಟಪುಷ್ಟಾಂಗನಾಗಿಯೂ ಇದ್ದನು.

ರಾಮು—ಅದನ್ನು ಅವನು ಅನೇಕರಿಗೆ ತೋರಿಸಿಯೇ ಸತ್ತಿದಾನೆ.

ದೇವೇಂದ್ರ—ಜುಮೇಲಿಯಾ ಆತನ ಶಿಷ್ಯಳು-ಶಿಷ್ಯಳು ಮಾತ್ರವೇ ಅಲ್ಲ, ಹೆಂಡತಿ.

ರಾಮು—ನಾನು ಬಲ್ಲೆನು. ಜುಮೇಲಿಯಾ ಸಾಮಾನ್ಯ ಹೆಂಗಸಲ್ಲ.

ದೇವೇಂದ್ರ— ಗುರುವಿಗಿಂತ ಶಿಷ್ಯಳೇ ಬಹಳ ಸಮರ್ಥಳು.

ರಾಮು—ಇದ್ದರೂ ಇರಬಹುದು. ಈಗ ನಡೆದಿರುವುದೇನು?

ದೇವೇಂದ್ರ—ಆ ಮನುಷ್ಯರೂಪದ ಪಿಶಾಚಿ- - ಜುಮೇಲಿಯಾ ಇನ್ನೂ ಸತ್ತಿಲ್ಲ.

ರಾಮು—(ಆಶ್ಚರ್ಯದಿಂದ) ಸತ್ತಿಲ್ಲ ! ಅದು ಹೇಗೆ ಹೇಳಿರಿ?

ದೇವೇಂದ್ರ—ನಾನು ಆ ಸಂಗತಿಯನ್ನು ನಿಮಗೆ ಹೇಳುವುದಕ್ಕಾಗಿಯೇ ಬಂದೆನು. ಅವಳು ಬದುಕಿರುವುದಾದರೆ ಬೇಗನೆ ಅದು ತಮಗೆ ಗೊತ್ತಾಗದೇ ಇರದು. ಅವ

ಳುಸಾಮಾನ್ಯಳಲ್ಲ. ಅವಳು ತನ್ನ ಕೈಯಿಂದಲೇ ಲೆಕ್ಕವಿಲ್ಲದ ಷ್ಟು ನರಹತ್ಯೆಯನ್ನುಮಾಡಿರುವಳು. ಅವಳು ಈಗ ಬ ದುಕಿರುವಳೋ ಇಲ್ಲವೋ ಎಂಬುದು ಗೋರಿಯನ್ನು ಅಗೆ ದು ನೋಡಿದರೆ ತಾನಾಗಿಯೇ ಗೊತ್ತಾಗುವುದು.

ರಾಮು—ಆಕೆಯನ್ನು ಮಣ್ಣುಮಾಡಿ ಎಷ್ಟುದಿನ ಗಳಾದುವು?

ದೇವೇಂದ್ರ—ಇಂದಿಗೆ ೪೯ ದಿನಗಳು ಕಳೆದು ಹೋದುವು.

ರಾಮು—ಆಕೆಯ ಮೃತದೇಹವನ್ನು ಮಣ್ಣುಮಾಡಿ ಇಷ್ಟುದಿವಸಗಳಾದಮೇಲೆ, ಅದನ್ನು ಹೊರಗೆ ತೆಗೆಯುವು ದೆಂಬುದು ಯುಕ್ತಿಯಾಗಿಲ್ಲ.

ದೇವೇಂದ್ರ—ಮೃತದೇಹ! ಮೃತದೇಹವೆಲ್ಲಿಂದ ಬರ ಬೇಕು. ಗೋರಿಯನ್ನು ಅಗೆದು ನೋಡಿದರೆ ಗೊತ್ತಾ ಗುವುದು.

ರಾಮು—ನಿಮ್ಮ ಬುದ್ಧಿಯಲ್ಲಿ ಉಂಟಾಗಿರುವ ವಿಕಾ ರವು ನಿಮ್ಮನ್ನು ಹೀಗೆಲ್ಲ ಕುಣಿಸುವುದು.

ದೇವೇಂದ್ರ—ಈಗ ಹಾಗೆಯೇ ಸರಿ.

ರಾಮು—ದೇವೇಂದ್ರಬಾಬು! ಪ್ರಕೃತಸಂಗತಿಗಳು ಹೇಗೆ ನಡೆದಿರುವುವು? ತಿಳಿಸಿರಿ.

ದೇವೇಂದ್ರ—ಶ್ರೀಶಚಂದ್ರನೆಂಬ ಚಾಲಾಕಾದ ಹುಡು ಗನೊಬ್ಬನು ನನ್ನ ಹತ್ತಿರ ಉಮೇದವಾರಿಮಾಡಿಕೊಂಡಿರು ವನು. ಅವನು '೧೭, ಕ' ಪುಲಿಂದದ ಕೇಸಿನಲ್ಲಿ ನನಗೆ ಬಹ ಳವಾಗಿ ಸಹಾಯಮಾಡಿರುವನು. ಅವನು ನಿನ್ನೆಯ ದಿನ ಜುಮೆಲೆಯ ಗೋರಿಯಿದ್ದ ಸ್ಥಳಕ್ಕೆ ತಿರುಗಾಡಿಕೊಂಡು ಬ ರುವುದಕ್ಕೆ ಹೋಗಿದ್ದು ಹಿಂತಿರುಗಿ ಬರುವಾಗ ಜುಮೆಲೆ

ಯ ಗೋರಿಯನ್ನು ನೋಡಬೇಕೆಂಬ ಆಸೆಯಿಂದ ಆದರ ಹತ್ತಿರಕ್ಕೆ ಹೋದನು. ಅಲ್ಲಿ ಜುಮೆಲೆಯು ಆತನನ್ನು ವಿಪತ್ತಿನಲ್ಲಿ ಯಾವ ರೀತಿ ಸಿಕ್ಕಿಸಿ ನರಳಾಡಿಸಿದಳೋ, ಅದನ್ನು ಅವನೆಂದಿಗೂ ಮರೆಯುವ ಹಾಗಿಲ್ಲ. ಶ್ರೀಶಚಂದ್ರನು ವಯಸ್ಸಿನಲ್ಲಿ ಬಹಳ ಚಿಕ್ಕವನಾಗಿದ್ದರೂ ಬಲು ಚತುರನು, ಆತನ ದೃಷ್ಟಿಯೂ ಬಹಳ ತೀಕ್ಷ್ಣವಾಗಿರುವುದು, ಇದನ್ನು ಒಪ್ಪಿಕೊಂಡೇ ತೀರಬೇಕು. ಅವನು ಜುಮೆಲೆಯ ಗೋರಿಯ ಮೇಲೆ ಮಣ್ಣು ಕೆದಕಿದ್ದುದನ್ನು ನೋಡಿ ಅವನಿಗೆ ಏನೋ ಸಂಶಯವುಂಟಾಯಿತು.ಅನಂತರ ಅವನು ಅಲ್ಲಿಬಂದು ಕಾಗದದಚೂರು ಬಿದ್ದಿದ್ದುದನ್ನು ಕಂಡನು. ಅದನ್ನು ನೋಡಿ ಅವನಸಂಶಯವು ಮತ್ತಷ್ಟುಹೆಚ್ಚಿತು. ಅವನು ಕಾಗದವನ್ನು ತೆಗೆದುನೋಡುವಲ್ಲಿ ಅದರಲ್ಲಿ ಜುಮೆಲೆಯ ಹೆಸರು ಬರೆದಿದ್ದಿತು. ಆ ಕೂಡಲೇ ಅವನು ಕಾಗದದ ಬಾಕಿ ಚೂರುಗಳನ್ನು ಹುಡುಕಲಾರಂಭಿಸಿದನು. ಅನೇಕ ಚೂರುಗಳು ದೂರದೂರ ಬಿದ್ದಿದ್ದವು. ಅವನು ಅವುಗಳೆಲ್ಲವನ್ನೂ ಒಂದೂ ಬಿಡದೆ ಆರಿಸಿಕೊಂಡು ಮನೆಗೆ ಬಂದನು. ಆಗ ಅವನು ನಡೆದ ಯಾವ ವಿಷಯವನ್ನೂ ತಿಳಿಸದೆ ತಾನು ತಂದಿದ್ದ ಸಣ್ಣ ಸಣ್ಣ ಕಾಗದದ ಚೂರುಗಳನ್ನು ಸರಿಯಾಗಿ ಜೋಡಿಸಿ ಮತ್ತೊಂದು ಕಾಗದದ ಮೇಲೆ ಗೋಂದು ಹಾಕಿ ಅಂಟಿಸಿಟ್ಟನು.

ರಾಮ—ಶ್ರೀಶಚಂದ್ರನು ಕಾಗದದ ಚೂರುಗಳನ್ನು ಸರಿಯಾಗಿ ಜೋಡಿಸಿಟ್ಟಿದ್ದನೋ ?

ದೇವೇಂದ್ರ—ಜೋಡಿಸಿಟ್ಟಿದ್ದನು.

ರಾಮ—ಅವನು ಶಿಷ್ಯನೆಂದರೇನು? ಒಳ್ಳೆಯದು ಆಮೇಲೆ?

ದೇವೇಂದ್ರ—ನಿನ್ನೆಯರಾತ್ರಿ ಆ ಕಾಗದವನ್ನು ಅವನು ನನ್ನ ಕೈಯಲ್ಲಿ ತಂದು ಕೊಟ್ಟನು. ಅಂತಹ ಆಶ್ಚರ್ಯವನ್ನುಂಟುಮಾಡುವ ಕಾಗದವನ್ನು ನಾನೆಲ್ಲಿಯೂ ನೋಡಿಲ್ಲ.

ರಾಮು—ಅದೇನು ಆಶ್ಚರ್ಯವೋ ಅದನ್ನು ನಾನು ಕೇಳಬಾರದೆ?

ದೇವೇಂದ್ರ - ಆ ಕಾಗದವು ನನ್ನಹತ್ತಿರವೇ ಇರುವುದು. ಶ್ರೀಶನು ಕಾಗದದ ಚೂರುಗಳನ್ನು ಸುಖವಾಗಿ ಓದುವುದಕ್ಕೆ ಅನುಕೂಲಿಸುವ ಕಾಗದವನ್ನಾಗಿ ಮಾಡಿಕೊಟ್ಟಿರುವನು. ಮೊದಲಲ್ಲಿ ಕೆಲವುಚೂರುಗಳೂ,ಮಧ್ಯದಲ್ಲಿ ಒಂದೆರಡು ಚೂರುಗಳೂ ಗೈರ್‌ವಿಲ್ಲೆಯಾಗಿದ್ದುದರಿಂದ, ಆ ಸ್ಥಳಗಳಲ್ಲಿ ಶ್ರೀಶನು ತನ್ನ ಬುದ್ಧಿಯನ್ನು ಉಪಯೋಗಿಸಿ, ಸರಿಯಾಗಿ ಅರ್ಥವಾಗುವಂತೆ ಮಾತುಗಳನ್ನು ಸೇರಿಸಿರುವನು, ಓದಿ ನೋಡಿರಿ

ಹೀಗೆಹೇಳಿ ದೇವೇಂದ್ರ, ವಿಜಯಮಿತ್ರನು ರಾಮಕೃಷ್ಣಬಾಬುವಿನ ಕೈಯಲ್ಲಿ ಆ ಕಾಗದವನ್ನುಕೊಟ್ಟನು

ಮೂರನೆಯ ಸಂಧಿ

(ಹೊಸಕಾಗದ)

ಕಾಗದದಲ್ಲಿ ಈರೀತಿಯಾಗಿ ಬರೆದಿದ್ದಿತು........ಆಗಲಿಲ್ಲ. ನಿರೀಕ್ಷಿಸಿಕೊಂಡಿರುವುದಕ್ಕೆ ಅವಕಾಶವಿಲ್ಲ. ಇದ್ದಿದ್ದರೆಮಾಡುತಿದ್ದೆ. ಏನುಮಾಡಲಿ. ನನ್ನ ದುರದೃಷ್ಟದಿಂದ ನಿನ್ನನ್ನು ನೋಡಲಾಗಲಿಲ್ಲ. ನಾನುಯಾವುದೋ ಒಂದು ಕೆಲಸವನ್ನು ನಿಮಿತ್ತಮಾಡಿಕೊಂಡು ಬಾಲಿಗಂಜಿನ ಕಡೆಗೆಹೊರಟಿರುವೆನು. ನಾನು ಅಲ್ಲಿ ಸಿಕ್ಕಿಬಿದ್ದರೂ ಬೀಳಬಹು

ದು, ಒಂದುವೇಳೆ ಸಿಕ್ಕಿಬಿದ್ದರೆ ನಾನು ಆರೀತಿಯಲ್ಲಿ ಆತ್ಮಹತ್ಯೆಯನ್ನು ಮಾಡಿಕೊಳ್ಳುವೆನು. ಇದು ನಿನಗೆ ತಿಳದಿರಲಿ. ನಾನುಸತ್ತದಿನ ಮೊದಲ್ಗೊಂಡು ಮೂವತ್ತು ದಿನಗಳವರೆಗೆ ಗೋರಿಯಲ್ಲಿ ಜೀವಂತಳಾಗಿಯೇ ಇರುವೆನು. ಅಷ್ಟರೊಳಗಾಗಿ ನನ್ನನ್ನು ಉದ್ಧಾರಮಾಡಬೇಕು. ನಿಜವಾಗಿಯೂ ನನ್ನನ್ನು ಉದ್ಧಾರಮಾಡಬೇಕು. ನಿನಗೆಇಚ್ಛೆಯಿರುವುದಾದರೆ, ನನ್ನ ಅವಧಿಯಒಂದುದಿನ ಮುಂಚಿತವಾಗಿಯೇ ಯತ್ನಮಾಡು, ಅವಧಿಯದಿನ ಮೀರಿಕೆಲಸ ಮಾಡುವುದಾದರೆ ಪ್ರಯತ್ನವು ನಿಷ್ಫಲವಾಗುವುದು.

ನನ್ನನ್ನು ಗೋರಿಯಿಂದ ಹೊರಗೆ ತೆಗೆದು ನೋಡಿದರೆ ನನ್ನ ಹಲ್ಲುಗಳು ಗಿಟಕರಿಸಿಕೊಂಡಿರುತ್ತವೆ. ಅವನ್ನು ಶ್ರಮದಿಂದ ಬಿಡಿಸಬೇಕು. ಅದಾದಮೇಲೆ ಆದೇಸೀಸೆಯಿಂದ ಎಂಟುತೊಟ್ಟು ಔಷಧವನ್ನು ನನ್ನಬಾಯಿಯಲ್ಲಿ ಬಿಡು. ಈ ಎಂಟು ತೊಟ್ಟುಗಳಲ್ಲಿ ಕೊಂಚವೂ ಹೆಚ್ಚುಕಡಿಮೆ ಯಾಗಕೂಡದು ಎಚ್ಚರಿಕೆ.

ಅದಾದಮೇಲೆ ಮತ್ತೇನೂ ಮಾಡಬೇಕಾದುದಿಲ್ಲ, ಅರ್ಧಗಂಟೆಯಕಾಲಮಾತ್ರ ನಿರೀಕ್ಷಿಸಿಕೊಂಡಿರಬೇಕು. ನೀನು ಉಪೇಕ್ಷೆಮಾಡದೆ, ನನ್ನಿಷ್ಟದಂತೆ ನಡೆವುದಾದರೆ, ಅರ್ಧಗಂಟೆಯ ಬಳಿಕ ನಾನು ನಿನ್ನೊಡನೆ ಮಾತನಾಡಲು ಶಕ್ತಳಾಗುವೆನು. ನೀನು ನನ್ನನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿಪ್ರೀತಿಸುವುದಾಗಿಯೂ--ಹಾಗೇಕೆ ಹೇಳಬೇಕು--ನಾನು ನಿನ್ನ ಹೆಂಡತಿಯಾಗುವುದಾದರೆ, ನನ್ನ ಕೈಯಿಂದಲೇ ನಾನು ಸಂಪಾದಿಸಿಕೊಂಡಿರುವ ಲೆಕ್ಕವಿಲ್ಲದ ಪಾಪಗಳನ್ನು ನೀನು ಗಮನಕ್ಕೆ ತರುವುದಿಲ್ಲವೆಂದೂ, ನನಗೆತಿಳಿಸಿರುವೆ.

ಬದುಕಿಸು-ನನ್ನನ್ನು ರಕ್ಷಿಸು-ನಾನು ನಿನ್ನವಳೇ ಆಗು

ವೆನು - ಹುಣ್ಣಿಮೆಗೆ ೩೦ ದಿನಗಳಾಗುವುವು. ಅದರಮೇಲೆ ಒಂದು ಕ್ಷಣ ಕಳೆವುದಾದರೂ ನೀನು ನನ್ನನ್ನು ಬದುಕಿಸಿ ಕೊಳ್ಳಲಾರೆ. ನಾನು ಸಾಯುವೆನು.

ನೀನು ನನಗೆ ಪ್ರಾಣದಾನವನ್ನು ಮಾಡು. ನನ್ನ ಈ ಜೀವನವು ಬಹುಕಾಲ ನಿನ್ನ ಅಧಿಕಾರದಲ್ಲಿಯೇ ಇರುವುದು. ನಿನ್ನ ಪ್ರೇಮಕಾಂಕ್ಷಿಣಿ, ಜುಮೆಲೆ.

ನಾಲ್ಕನೆಯ ಸಂಧಿ.

(ಸನ್ನಾಹ)

ರಾಮಕೃಷ್ಣನು ಮೇಲ್ಕಂಡಂತೆ ಕಾಗದವನ್ನು ಓದಿ, ಆಶ್ಚರ್ಯದಿಂದ—ಇದೇನಾಶ್ಚರ್ಯ! ದೇವೇಂದ್ರ, ಅವಳು ನಿಜ ವಾಗಿಯೂ ಗೋರಿಯಿಂದೆದ್ದು ಹೊರಟುಹೋಗಿರುವಳೇ ! ಎಂದು ಕೇಳಿದನು.

ದೇವೇಂದ್ರ—ನನಗೂ ಹಾಗೆಯೇ ತೋರುವುದು

'ಯಾವಾಗಲಾದರೂ ಹೀಗಾಗುವುದುಂಟೆ?'

'ಹೀಗಾಗುವುದುಂಟೇನು ! ಹೀಗೆಯೇ ಆಗಿದೆ'

''ಶ್ರೀಶಚಂದ್ರನು ಒಂದು ದೊಡ್ಡ ತಪ್ಪುಮಾಡಿದನು. ಯಾರಹೆಸರಿನಲ್ಲಿ ಕಾಗದವು ಬರೆಯಲ್ಪಟ್ಟದೆಯೋ ಆ ಹೆಸರಿದ್ದ ಕಾಗದದ ಚೂರುಗಳನ್ನು ಹುಡುಕಿತಂದಿದ್ದರೆ ಬಲುಚನ್ನಾಗಿರುತ್ತಿದ್ದಿತು.

'ಎಷ್ಟೋ ಹುಡುಕಿನೋಡಿದನು ; ಸಿಕ್ಕಲಿಲ್ಲ. ರಾಮ ಕೃಷ್ಣಬಾಬು,ಈಗೊಂದು ಸಂಗತಿಯನ್ನು ತಿಳಿಸಬೇಕೆಂ ದಿರುವೆನು.

''ಅದೇನು?,,

,,ನಾವು ಮೊದಲು ಜುಮೆಲೆಯ ಗೋರಿಯನ್ನು ಅಗೆಯಿಸಿ ಏನಾಗಿದೆಯೆಂಬುದನ್ನು ನೋಡಿಕೊಂಡು ಬರೋಣ-ಆಮೇಲೆ ಬಾಕಿವಿಷಯ

,,ಒಳ್ಳೆಯದು ; ನಾನು ಸಿದ್ಧನಾಗಿರುವೆನು,,

,,ಈ ದಿನ ಸಾಯಂಕಾಲ?,,

,,ಆಗಲಿ,,

,,ಸಾಯಂಕಾಲ ಮೂರು ಗಂಟೆಯ ಸಮಯದಲ್ಲಿ ಇಲ್ಲಾಗಲಿ ಅಥವಾ ಅಲ್ಲೇ ಆಗಲಿ ನನ್ನನ್ನು ತಾವು ನೋಡಬಹುದು.

,,ಇಲ್ಲೇಆಗಲಿ. ನೀವು ಇಲ್ಲಿಗೆ ಎರಡುಗಂಟೆ ಸುಮಾರಿಗೆ ಬರೋಣಾಗಲಿ, ಹೊಗಡುವಾಗ ಗಂಗಾಧರನನ್ನು ಜತೆಯಲ್ಲಿ ಕರೆದುಕೊಂಡು ಹೋಗಬೇಕು. ದಾರಿಯಲ್ಲಿ ಸೂಪರಿಂಟೆಂಡೆಂಟ್ ಸಾಹೇಬರನ್ನೂ ಗಾಡಿಯಲ್ಲಿ ಕುಳ್ಳಿರಿಸಿಕೊಂಡು ಎಲ್ಲರೂ ಸೇರಿ ಸ್ಮಶಾನಕ್ಕೆ ಹೋಗಿ ಬರೋಣ.

ನಾನು ನನ್ನ ಗಾಡಿಯನ್ನು ತೆಗೆದುಕೊಂಡು ಬರುವೆನು. ಅದಕ್ಕಾಗಿ ತಾವು ಕಾದಿರಬೇಕಾದುದಿಲ್ಲ. ನಾನು ಕಾಲಕ್ಕೆ ಸರಿಯಾಗಿ ಬರುವೆನು. ಸಾಧ್ಯವಾದರೆ ಶಚೀಂದ್ರನನ್ನೂ ಜತೆಯಲ್ಲಿ ಕರೆದುಕೊಂಡು ಬರುವೆನು. ಅಷ್ಟರಲ್ಲಿ ತಾವು ತಕ್ಕ ಏರ್ಪಾಟನ್ನು ಮಾಡಿಟ್ಟುಕೊಳ್ಳಿ.

,,ನನಗೆ ಸಂಬಂಧಪಟ್ಟ ಕೆಲಸವೆಲ್ಲವನ್ನೂ ನಾನು ಸರಿಯಾಗಿಯೇ ಇಟ್ಟುಕೊಳ್ಳುವೆನು.

,,ನನ್ನ ಮಾತು ಜ್ಞಾಪಕವಿರಲಿ, ನಿಜವಾಗಿಯೂ ಗೋರಿಯಲ್ಲಿ ಹೆಣವಿಲ್ಲವೆಂಬುದು ಗೊತ್ತಾಗುವುದು.,,

,,ಒಳ್ಳೆಯದು, ಒಳ್ಳೆಯದು, ದೇವೇಂದ್ರ ಬಾಬು ! ಗೊತ್ತಾಗುವುದು.,,

,,ಜುಮೆಲೆಯು ತನ್ನ ಮರಣಾನಂತರವೂ ನನ್ನನ್ನು ಬೆನ್ನಟ್ಟುವಳೆಂದು ಹೆದರಿಸಿದ್ದಳು. ಆ ಸಂಗತಿಯನ್ನು ನಾನು ನಿಮಗೆ ಮೊದಲೇ ತಿಳಿಸಿರಲಿಲ್ಲವೇ?,,

,,ತಿಳಿಸಿರಲಿಲ್ಲ.,,

,,ನಾನು ಅವಳ ಗೋರಿಯಮೇಲೆ ದೃಷ್ಟಿಯಿಡುವುದಕ್ಕೆ ಅದೊಂದು ಕಾರಣ. ಅದಕ್ಕಾಗಿಯೇ ನಾನು ಆಕೆಯ ಗೋರಿಯನ್ನು ಹೆಚ್ಚಾದ ಎಚ್ಚರಿಕೆಯಿಂದ ನೋಡುತ್ತಿದ್ದುದು. ಆಗ ಅವಳು ತೋರಿಸಿದ ಭಯಕ್ಕೆ ಈಗ ಕಾರಣವು ಗೊತ್ತಾಯಿತು. ಇದಕ್ಕಾಗಿಯೇ ಅವಳು, ತನ್ನ ಮರಣವಾದಮೇಲೆಯಾದರೂ ತನ್ನ ಪ್ರತಿಜ್ಞೆಯನ್ನು ಸಾರ್ಥಕಗೊಳಿಸಿಕೊಳ್ಳುವೆನೆಂದು ಹೇಳಿದ್ದಳು.

,,ಮೊದಲು ನಿಮಗೆ ಇದು ಗೊತ್ತಾಗಲಿಲ್ಲವೇನೋ! ಈಗ ಮಾತ್ರ ಆಕೆಯ ಮನದ ಅಭಿಪ್ರಾಯವು ನನಗೆ ತೋರಿಬಂದಂತೆ ಕಂಡುಬರುವುದು.,,

---

ಐದನೆಯ ಸಂಧಿ

(ಶ್ಮಶಾನದಲ್ಲಿ)

ಮಧ್ಯಾಹ್ನಾತ್ ಪರ ಎರಡು ಗಂಟೆಗೆ ಸರಿಯಾಗಿ ಮೊದಲು ತಿಳಿಸಿದ್ದ ಪೋಲೀಸ್ ಠಾಣೆಯ ಇದಿರಿನಲ್ಲಿ ಒಂದು ಗಾಡಿಬಂದು ನಿಂತಿತು. ಅದರಲ್ಲಿ ದೇವೇಂದ್ರವಿಜಯ

ಮತ್ತು ಅವನ ಸೋದರಳಿಯು ಶಚೀಂದ್ರ, ಇವರಿಬ್ಬರೂ ಕುಳಿತಿದ್ದರು.

ಆಗ ರಾಮಕೃಷ್ಣನು ಸಾಮಾನ್ಯವಾದ ವೇಷವನ್ನು ಧರಿಸಿಕೊಂಡು, ಗಂಗಾಧರನು (ಮತ್ತೊಬ್ಬ ಪೋಲೀಸ್ ಇನ್ಸ್ಪೆಕ್ಟರು) ಪೋಲೀಸಿನ ಯೂನಿಫಾರವನ್ನು ಹಾಕಿಕೊಂಡು ದೇವೇಂದ್ರವಿಜಯನ ಗಾಡಿಯಲ್ಲಿ ಕುಳಿತರು. ಗಾಡಿಯವನು ಗಾಡಿಯನ್ನು ಮುಂದಕ್ಕೆ ಓಡಿಸಿದನು. ದಾರಿಯಲ್ಲಿ ಹೋಗುತ್ತಾ ಸೂಪರಿಂಟೆಂಡೆಂಟ್ ಸಾಹೇಬರನ್ನೂ ಗಾಡಿಯಲ್ಲಿ ಕುಳ್ಳಿರಿಸಿಕೊಂಡು ಹೊರಟರು.

ಯಥಾಕ್ರಮದಲ್ಲಿ ಎಲ್ಲರೂ ಸ್ಮಶಾನಕ್ಕೆ ಬಂದು ಸೇರಿದರು. ಎಲ್ಲಿ ನಾರೀ ರೂಪದಲ್ಲಿನ ಪಿಶಾಚಿಯೆನಿಸಿದ ಜುಮೆಲೆಯು ಮಣ್ಣುಮಾಡಲ್ಪಟ್ಟಿದ್ದಳೋ, ಅಲ್ಲಿಗೆ ಎಲ್ಲರೂ ಗಾಡಿಯಿಂದಿಳಿದು ನಡೆದುಕೊಂಡು ಹೋದರು.

ಅಷ್ಟು ಹೊತ್ತಿಗೆ ಇಬ್ಬರು ಕೆಲಸಗಾರರು ಗುದ್ದಲಿ ಪಿಕಾಸಿ ಮುಂತಾದ ಸಾಮಾನುಗಳನ್ನು ತೆಗೆದುಕೊಂಡು ಅಲ್ಲಿಗೆ ಬಂದು ಸೇರಿದರು.

ಸೂಪರಿಂಟೆಂಡೆಂಟ್ ಸಾಹೇಬರು ಅಪ್ಪಣೆಯನ್ನು ಕೊಡಲಾಗಿ ಕೂಲಿಯವರು ಗೋರಿಯನ್ನು ಅಗೆಯಲು ಪ್ರಾರಂಭಮಾಡಿದರು.

ಶವದ ಪೆಟ್ಟಿಗೆಯು ಗೋರಿಯಿಂದ ಹೊರಗೆ ತೆಗೆಯಲ್ಪಟ್ಟು ಅದರ ಬಾಗಿಲು ತೆರೆಯಲ್ಪಟ್ಟಾಗ ಒಳಗೆ ಎಂತಹ ನೂತನವಾದ ನೋಟವನ್ನು ನಾವು ನೋಡುವೆವೋ ಎಂದು ಮೂರು ಜನ ಪೋಲೀಸಿನವರೂ, ಇಬ್ಬರು ಪತ್ತೇದಾರರೂ ಯೋಚಿಸಿ, ಪ್ರತಿಯೊಬ್ಬನೂ ತುಟಿ ಪಿಟಕ್ಕೆನ್ನದೆ ಅತ್ಯಾದರದಿಂದ ಕುತ್ತಿಗೆಯನ್ನೆತ್ತಿ ಬಿರುಗಣ್ಣುಗಳಿಂದ

ನಿರೀಕ್ಷಿಸಿಕೊಂಡಿದ್ದನು.

ಕೊಂಚ ಹೊತ್ತಾದ ಮೇಲೆ ಭೂಮಿಯಿಂದ ಶವದ ಪೆಟ್ಟಿಗೆಯು ಹೊರಗೆ ತೆಗೆಯಲ್ಪಟ್ಟಿತು. ಅದು ಬಹುಭಾರವಾಗಿದ್ದಿತು. ಆದರಿಂದ ಅವರೆಲ್ಲರೂ ಶವದ ಪೆಟ್ಟಿಗೆಯು ಬರಿದಾಗಿಲ್ಲ, ಅದರಲ್ಲಿ ಜ್ಯಾನೆಟಳ ಮೃತದೇಹವು ಇರುವುದು, ಎಂದು ತಿಳಿದುಕೊಂಡರು. ದೇವೇಂದ್ರನು ಅಷ್ಟು ಜನರ ಇದಿರಿಗೆ ತನಗೆ ಎಲ್ಲಿ ಅಪಮಾನವಾಗುವುದೋ ಎಂದು ಬಹಳವಾಗಿ ಯೋಚನೆಯಿಂದ ತಲ್ಲಣಿಸಿ ಹೋದನು. ಇನ್ಸ್‌ಪೆಕ್ಟರ್ ರಾಮಕೃಷ್ಣನು ದೇವೇಂದ್ರನ ಮುಖವನ್ನೇ ನೋಡಿಕೊಂಡು ಪರಿಹಾಸವನ್ನು ಸೂಚಿಸುವಂತೆ ಹುಬ್ಬನ್ನು ಕುಣಿಸುತ್ತಿದ್ದನು.

ದೇವೇಂದ್ರವಿಜಯನು ಈ ರಹಸ್ಯದ ವಿಷಯವಾಗಿ ಅನುಮಾನದಿಂದ ಅನೇಕ ಸಂಗತಿಗಳನ್ನು ತಿಳಿದುಕೊಂಡಿದ್ದನು. ಉತ್ತರಕ್ಷಣದಲ್ಲಿಯೇ ಶವದ ಪೆಟ್ಟಿಗೆಯು ಬಾಗಿಲು ತೆರೆಯಲ್ಪಟ್ಟಿತು. ಆಗ ದೇವೇಂದ್ರನ ಬತ್ತಿ ಹೋಗಿದ್ದ ಮುಖವು ವಿಕಸಿತವಾಗಲಾರಂಭಿಸಿತು. ಎಲ್ಲರ ಬಾಯಿಂದಲೂ ಒಂದು ವಿಧವಾದ ಆಶ್ಚರ್ಯದಿಂದೊಡಗೂಡಿದ ಶಬ್ದವು ಹೊರಟಿತು. ಎಲ್ಲರೂ ಚಮತ್ಕಿತರಾಗಿ ರೆಪ್ಪೆ ಹಾಕದ ದೃಷ್ಟಿಯಿಂದ ಶವದ ಪೆಟ್ಟಿಗೆಯೊಳಗೆ ನೋಡಿದರು. ಅವರೆಲ್ಲರೂ ಪೆಟ್ಟಿಗೆಯಲ್ಲಿ ಶವವನ್ನೇನೋ ನೋಡಿದರು, ಆದರೆ ಆ ಶವವಾದರೋ, ಜ್ಯಾನೆಟಳದಲ್ಲ-ಹೆಂಗಸಿನದೇ ಅಲ್ಲ-ಅದು ಗಂಡಸಿನ ಶವವಾಗಿದ್ದಿತು. ದೊಡ್ಡ ಮನುಷ್ಯನಿಗೆ ತಕ್ಕ ವೇಷವನ್ನು ಧಾರಣಮಾಡಿದ ಸುಂದರನಾದ ಯುವಕನೊಬ್ಬನು ಮೃತನಾಗಿ ಬಿದ್ದಿದ್ದನು. ಇದೇನು ಹೀಗಾಗಿ ಹೋಯಿತು ?

ದೇವೇಂದ್ರವಿಜಯನೊಬ್ಬನು ಹೊರತಾಗಿ ಉಳಿದವರೆಲ್ಲರೂ ಬಂದೇ ತಡವೆಗೆ ಕಲ್ಲಿನ ಪ್ರತಿಮೆಯಂತೆ ಸ್ತಂಭಿತರಾಗಿಯೂ, ಚೈತನ್ಯವಿಲ್ಲದವರಾಗಿಯೂ, ಪರಿಣಮಿಸಿದರು.

ಬಹಳ ಹೊತ್ತಾದಮೇಲೆ ರಾಮಕೃಷ್ಣನು ಚೇತರಿಸಿಕೊಂಡು, ದೇವೇಂದ್ರನನ್ನು ಕುರಿತು—ದೇವೇಂದ್ರ! ಇದೆಂತಹ ವ್ಯಾಪಾರವೆಂಬುದು ನೀನೇನಾದರೂ ಬಲ್ಲೆಯ? ಎಂದನು.

ದೇ--ಆವುದು ಸಂಭವಿಸಿರುವುದೋ,ಅದು ಸಹಜವೆಂದೇ ನಾನು ತಿಳಿದಿರುವೆನು.

ರಾ—ನೀವೇನೋತಿಳಿದಿರುವಿರಿ.ಈಗ ನಮ್ಮೆಲ್ಲರಿಗೂ ತಿಳಿಸಿ ನೋಡೋಣ. ನಮಗಾದರೋ ಇದು ಸ್ವಪ್ನವೆಂದೇ ಬೋಧೆಯಾಗುತ್ತಿರುವುದು.

ದೇ—(ಹೆಣವನ್ನುತೋರಿಸುತ್ತಾ) ಈ ಮನುಷ್ಯನಿಗೇ ಜುಮೇಲೆಯು ಆ ಕಾಗದವನ್ನು ಬರೆದಿರಬೇಕು, ಈ ಮನುಷ್ಯನಿಗೇ ಆಕೆಯು ಹೆಂಡತಿಯಾಗುವುದಾಗಿ ಅಪೇಕ್ಷಿಸಿದ್ದಳು. ಅವಳ ಇಷ್ಟದಂತೆಯೇ ಈ ಯುವಕನು ಕೆಲಸಮಾಡಿರುವನು. ಜುಮೇಲೆಯು ಇವನಿಗೆ ಏನೇನನ್ನು ಹೇಗೆ ಹೇಗೆ ಹೇಳಿದ್ದಳೋ, ಅವನದನ್ನು ಹಾಗೆ ಹಾಗೆಯೇ ನೆರವೇರಿಸಿ, ಈತನು ಆವಳನ್ನು ಉದ್ಧಾರಮಾಡಿರಬೇಕು, ಅನಂತರ ಆ ಪಿಶಾಚಿಯು ತನ್ನನ್ನು ಉದ್ಧಾರಮಾಡಿದವನನ್ನೇ ಕೊಂದು ತಾನಿದ್ದ ಶವದ ಪೆಟ್ಟಿಗೆಯಲ್ಲಿ ಇವನನ್ನು ಮಲಗಿಸಿ, ಮೊದಲಿನಂತೆಯೇ ಗೋರಿಯಲ್ಲಿ ಹೂತು ಕೊನೆಗೆ

ಪಲಾಯನವಾಗಿರುವಳು. ಜುಮೆಲೆಯು ಈಗ ಈ ದೇಶ ದಲ್ಲಿಯೇ ಇರುವಳೆಂದು ನನಗೆ ನಂಬುಗೆಯುಂಟು. ಕಾರಣ ವೇನೆಂದರೆ-ಈ ವ್ಯಕ್ತಿಯು ಜುಮೆಲೆಯನ್ನು ಉದ್ಧರವಾ ಡುವುದಕ್ಕೆ ಬಂದನೆಂಬುದರಲ್ಲಿ ಕಿಂಚಿತ್ತೂ ಸಂದೇಹವಿರು ವುದಿಲ್ಲ, ಇವನು ಅವಳ ಈ ಗುಪ್ತರಹಸ್ಯವನ್ನೂ, ಅವಳು ಜೀವದಿಂದಿರುವಳೆಂಬುದನ್ನೂ, ತಿಳಿದವನಾಗಿದ್ದನು. ಒಂ ದು ವೇಳೆ ಈ ಮನುಷ್ಯನು ಬದುಕಿರುವುದೇ ಆದರೆ ಈ ವಿಷಯವೆಲ್ಲವನ್ನೂ ಇತರರಿಗೆ ತಿಳಿಸುವನು, ಎಂಬ ಭಯ ದಿಂದ ಜುಮೆಲೆಯು ಇವನನ್ನು ಕೊಂದುಬಿಟ್ಟಿರುವಳು. ಈಗ ಅವಳಿಗೆ ಯಾವ ವಿಧವಾದ ಅಪಾಯವೂ ಇಲ್ಲವೆಂ ದೂ, ಜುಮೆಲೆಯು ಸತ್ತು ಹೋದಳೆಂದು ಎಲ್ಲರೂ ಅಭಿಪ್ರಾ ಯ ಪಡುವರೆಂದೂ ಅವಳು ತಿಳಿದುಕೊಂಡಿರುವಳು. ಆ ದುದರಿಂದಲೇ ಜುಮೆಲೆಯು ದೂರ ಓಡಿ ಹೋಗಲು ಕಾರ ಣವೇನೂ ಇರಲಾರದು.

ದೇವೇಂದ್ರನು ಹೀಗೆ ಹೇಳುವುದನ್ನು ಕೇಳಿ ಎಲ್ಲರೂ ಬಹಳವಾಗಿ ಕಳವಳಗೊಂಡರು.

ರಾ—ದೇವೇಂದ್ರ! ನಿಮ್ಮ ಕಾಗದದಲ್ಲಿ ಒಂದು ಅಂಶ ಮಾತ್ರ ಸರಿಹೋಗುವುದಿಲ್ಲ. ನಿಮ್ಮ ಕಾಗದದಂತೆ ಲೆಕ್ಕ ಹಾಕಿ ನೋಡಿದರೆ, ಈ ಶವವು ಏಳೆಂಟು ದಿನಗಳಿಂದ ಇಲ್ಲಿ ರುವಂತೆ ತೋರುವುದಿಲ್ಲವೆ?

ದೇ—ತೋರುವುದು.

ರಾ—ಈ ಶವವು ಏಳೆಂಟು ದಿನಗಳದೆಂದು ಹೇ ಳುವುದಕ್ಕಾಗುವುದಿಲ್ಲ. ಇದು ತುಂಬ ಹೊಸದಿದ್ದಹಾಗೆ ಕಾಣುವುದು.

ದೇ—ಇದಕ್ಕೆ ಎರಡು ಕಾರಣಗಳುಂಟು.

ಸೂಪರಿಂಟೆಂಡೆಂಟ್—ಏಳೆಂಟು ದಿವಸದ ಹೆಣವು ಇಷ್ಟು ಹೊಸದಾಗಿರಲು ಕಾರಣವೇನು ? ಹೇಳಿ, ನೋಡೋಣ.

ದೇ—ಮೊದಲನೆಯು ಕಾರಣ - ಈ ಮನುಷ್ಯನು ಹಠಾತ್ತಾಗಿ ಕೊಲ್ಲಲ್ಪಟ್ಟಿರುವನು. ಇವನ ಶರೀರದ ರಕ್ತವೆಲ್ಲವೂ ಹೊರಗೆ ಹೋಗಲು ಅವಕಾಶವಿಲ್ಲ. ಎರಡನೆಯು ಕಾರಣ—ಮರಣವಾದ ಕೂಡಲೆ ಕೊಂಚವೂ ಸಾವಕಾಶವಿಲ್ಲದೆ ಹೆಣವು ಗೋರಿಯೊಳಗೆ ಹೂಳಲ್ಪಟ್ಟಿತಾದ ಕಾರಣ, ಈ ದೇಹದಲ್ಲಿ ಗಾಳಿಯ ಸಂಚಾರಕ್ಕೆ ಅವಕಾಶವೇ ಇಲ್ಲ.

ಸೂಪ—ಅದೇನೋ ಆಗಿ ಹೋಯಿತು. ಪ್ರಕೃತ ಈ ಖೂನನ್ನು ಪತ್ತೇ ಮಾಡುವುದು ಆವಶ್ಯಕವು. ಈ ಖೂನ್ ಜುಮೇಲೆಯಿಂದ ಹೇಗೆ ನಡೆಯಿತು, ಅವಳನ್ನು ಗೋರಿಯಲ್ಲಿಟ್ಟಾಗ, ಅವಳ ಪಕ್ಕದಲ್ಲಿಯೇ ಶಾಸ್ತ್ರಸ್ತ್ರಗಳನ್ನು ಇಟ್ಟಿದ್ದರೇನು ?

ದೇ—ಇರಲಿಲ್ಲವೆಂದು ಒಪ್ಪಿಕೊಳ್ಳುವೆನು, ಆದರೆ ಈ ಭಾಗ್ಯಹೀನನು ಜುಮೇಲೆಯನ್ನು ಉದ್ಧಾರಮಾಡಲು ಬಂದಾಗ, ಈತನ ಬಳಿಯಲ್ಲಿ ಯಾವ ಶಸ್ತ್ರವೂ ಇರಲಿಲ್ಲವೆಂಬುದು ಒಪ್ಪುವುದಕ್ಕಾಗುವುದಿಲ್ಲ. ಡಾಕಿನಿಯು ತನ್ನ ಇಷ್ಟಾರ್ಥಸಿದ್ಧಿಗೋಸ್ಕರ ಇವನಲ್ಲಿದ್ದ ಶಸ್ತ್ರವನ್ನು ಉಪಾಯಾಂತರದಿಂದ ತೆಗೆದುಕೊಂಡಿರಬೇಕು.

ರಾ--ಬನ್ನಿರಿ, ಈ ಮನುಷ್ಯನು ಯಾರೆಂಬುದನ್ನು ಮೊದಲು ತಿಳಿದುಕೊಳ್ಳೋಣ, ಆದಾದಮೇಲೆ ಹೇಗೆ ಖೂನ್ ನಡೆದಿರುವುದೆಂಬುದನ್ನು ಜಿಜ್ಞಾಸೆ ಮಾಡಬಹುದು.

ಶವದ ಪೆಟ್ಟಿಗೆಯಿಂದ ಶವವು ಮೇಲಕ್ಕೆ ಎತ್ತಲ್ಪಟ್ಟಿತು. ಶಚೀಂದ್ರನು ಅದನ್ನು ಪರೀಕ್ಷಿಸುವುದಕ್ಕೆ ತೊಡಗಿದನು. ಮಿಕ್ಕವರೆಲ್ಲರೂ ನೋಡುತ್ತ ನಿಂತಿದ್ದರು.

ಮೃತನಾದ ಯುವಕನು ಉಟ್ಟಿದ್ದುದು ತೆಳ್ಳಗಿದ್ದ ಸ್ವದೇಶದ ಪಂಚೆ, ತೊಟ್ಟಿದ್ದುದು ಬೇಲುದಾರಿ ಮೊಗಲಾಯಿ ಜುಬ್ಬಾ, ತಲೆಯ ಮೇಲೆ ಸಾಚಾ ಕಲಾಪತ್ತಿನ ಟೋಪಿ ಬಲಗೈಯ ಮಧ್ಯದ ಬೆರಳಿನಲ್ಲಿಯೂ, ಅನಾಮಿಕೆಯಲ್ಲಿಯೂ ವಜ್ರದಉಂಗುರಗಳು. ಗಡಿಯಾರದ ಜೇಬಿನಲ್ಲಿ ಒಂದು ಭಂಗಾರದ ಗಡಿಯಾರ ಮತ್ತು ಸರಪಳಿ. ಒಳಗಿನ ಜೇಬಿನಲ್ಲಿ ಸೀಸದ ಕಡ್ಡಿಯನ್ನು ಬರೆಯುವ ಒಂದು ಸಣ್ಣ ಚಾಕು, ಒಂದು ಬೀಗದ ಕೈಗಳ ಗೊಂಚಲು, ಇಪ್ಪತ್ತು ರೂಪಾಯಿಗಳ ನೋಟುಗಳು, ನಾಲ್ಕು ರೂಪಾಯಿಗಳು, ನಾಲ್ಕಾಣೆಗಳು, ಮೂರು ದೊಡ್ಡಾಣೆಗಳು, ಎರಡು ರೇಷ್ಮೆ ಚೌಕಗಳು, (ಒಂದು ಬಣ್ಣದ್ದು; ಒಂದು ಬಣ್ಣವಿಲ್ಲದ್ದು) ಒಂದು ಸಣ್ಣ ಪಿಸ್ತೂಲ್, ಮತ್ತು ಕೆಲವು ಕಾಗದ ಪತ್ರಗಳು.

ಕಾಗದದಲ್ಲಿ ಏನೇನೋ ಬರೆದಿದ್ದುವು. ಅವುಗಳ ಮೇಲಿನ ವಿಳಾಸವು ಈ ರೀತಿಯಾಗಿದ್ದಿತು.

ಷೇಕ್ ಕಬೀರುದ್ದೀನ್

ನಂ······ಗಲ್ಲಿ·······ಸೂಳೆಗೇರಿ, ಬಿದರಪುರ.

ಈರೀತಿಯಾಗಿದ್ದ ಮೇಲುವಿಳಾಸವನ್ನು ನೋಡಿದಮೇಲೆ, ಅಲ್ಲಿದ್ದವರಾರಿಗೂ ಮೃತಯುವಕನ ಹೆಸರು, ವಾಸಸ್ಥಾನ, ಇವುಗಳ ವಿಷಯವಾಗಿ ಯಾವವಿಧದಿಂದ ಸಂಶಯವೂ ಇರಲಿಲ್ಲ. ಬಳಿಕ ದೇವೇಂದ್ರನು - ರಾಮಕೃಷ್ಣಬಾಬು, ಜುಮೆಲೆಯು ಈಗ ಎಲ್ಲಿ ಸಿಕ್ಕುವಳು ಎಂಬು

ದನ್ನು ನಾನೀಗ ಅನುಮಾನದಿಂದ ತಿಳಿದುಕೊಂಡಿರುವೆನು ಎಂದನು.

ರಾಮು—ಎಲ್ಲಿ?

ದೇ—ಖಿರೋಜಾ ಬೀಬಿಯ ಮನೆಯಲ್ಲಿ. ಆ ಸ್ಥಳದಲ್ಲಿಯೇ ಖಿರೋಜಾ ಬೀಬಿಯ ಮನೆಯಿರುತ್ತದ ರಾಮಬಾಬು! ಈಗಿನ ಸಂದರ್ಭವು ಯಾವ ರೀತಿಯುಳ್ಳದ್ದಿರುವುದೆಂಬುದು ಗೊತ್ತೋ?

ರಾ—ಬಹಳ ಅದ್ಭುತವಾದ ವಿಷಯ! ನನ್ನ ಬುದ್ಧಿಯೇ ಲುಪ್ತವಾಗಿ ಹೋಗಿರುವುದು.

ದೇ—ಜುಮೇಲೆಯು ಈಗಲಾದರೂ ಎಂಥವಳೆಂಬುದನ್ನು ಯೋಚಿಸಿರುವಿರಿ? ಇಂಥ ಅದ್ಭುತಳಾದ ಹೆಂಗಸನ್ನು ಮತ್ತೆಲ್ಲಿಯಾದರೂ ನೋಡಿರುವಿರಾ?

ರಾ—ಇಲ್ಲ. ಇಂತಹ ಹೆಂಗಸನ್ನು ನಾನೆಂದಿಗೂ ನೋಡಲಾರೆ. ದೇವೇಂದ್ರ! ಸ್ತ್ರೀ ಕೂಡ ಆಕೆಗೆ ಕೊಂಚವಾದರೂ ಭಯಪಡುವಂ-ಥ ಸ್ವಭಾವವೇ ಏನು!

ದೇ—ಆಕೆಯ ಪರಾಕ್ರಮ ಮತ್ತು ಸಾಹಸ ಇವುಗಳನ್ನು ನೋಡಿ ನಾನು ಅಂತರ್ಯದಲ್ಲಿ ಶ್ಲಾಘಿಸುವೆನು, ಮತ್ತು ನನ್ನ ಹೆಂಡತಿಯ ಮೇಲೆ ಆಕೆಯು ನಡೆಯಿಸಬೇಕೆಂದಿರುವ ಗೂಢವಾದ ದುರಭಿಸಂಧಿಯು ಮುಂದೆ ಮಹಾ ವಿಪತ್ತನ್ನು ಸೂಚಿಸುವುದೇನೋ ನಿಜ. ಆದರೆ, ಭಯ! ಜನರು ಯಾವುದಕ್ಕೆ ಭಯವೆನ್ನುವರೋ ಅದನ್ನು ಮಾತ್ರ ನಾನು ಕಾಣೆನು. ಭಯವೆಂಬುದು ನನ್ನ ಜಾತಕದಲ್ಲಿ ಬರದೇ ಇಲ್ಲ.

ರಾ—ಈಗ ನೀವೇನು ಮಾಡುವಿರಿ?

ದೇ—ಅವಳನ್ನು ಹುಡುಕಿಕೊಂಡು ಹೋಗುವೆನು.

ರಾ—ಅವಳು ಸಿಕ್ಕುವಳೋ?

ದೇ—ಸಿಕ್ಕುವ ಸಂಭವವುಂಟು. ಅವಳು ಸಿಕ್ಕದೇ ಹೋದಲ್ಲಿ, ನನ್ನ ಜನ್ಮದಲ್ಲಿ ಕಾರ್‍ಯಹಾನಿಯೆಂಬುದು ಇದೇ ಮೊದಲನೆಯದಾಗುವುದು.

ಆರನೆಯ ಸಂಧಿ

(ಖಿರೋಜಾ ಬೀಬಿ)

ಮರುದಿನ ಬೆಳಗ್ಗೆ ಸುಮಾರು ಹತ್ತು ಗಂಟೆಯ ಸಮಯದಲ್ಲಿ ದೇವೇಂದ್ರನು ಮುದುಕನಾದ ಮುಸಲಮಾನನ ವೇಷವನ್ನು ಹಾಕಿಕೊಂಡು ಕೈಯಲ್ಲಿ ಒಂದು ರೈಲ್ ಚೀಲವನ್ನು ಹಿಡಿದುಕೊಂಡು, ಸೂಳೆಗೇರಿಯಲ್ಲಿದ್ದ ಖಿರೋಜಾಬಾಯಿಯ ಮನೆಗೆ ಹೋದನು.

ಅವನು ಬಾಗಿಲನ್ನು ಎರಡು ಸಲ ಕೈಯಿಂದ ತಟ್ಟತಲೆ, ಸುಂದರಿಯೊಬ್ಬಳು ಬಾಗಿಲನ್ನು ತೆರೆದು ಇದಿರಿಗೆ ಕಾಣಿಸಿಕೊಂಡಳು. ಆಕೆಗೆ ಸುಮಾರು ಇಪ್ಪತ್ತಾರು ಇಪ್ಪತ್ತೇಳು ವರ್ಷದ ವಯಸ್ಸಾಗಿದ್ದಿತು. ಅವಳ ಅಂಗಾಂಗಗಳ ಸಂಘಟನೆಯು ಬಹಳ ಸುಂದರವಾಗಿದ್ದಿತು. ಏತಕೆಂದರೆ-ರಮಣಿಯು ಪರಮ ಸುಂದರಿಯಾಗಿದ್ದಳು. ಕರಿಯ ಗುಡ್ಡೆಗಳಿಂದ [illegible]ವಾದ ಕಣ್ಣುಗಳ ಕೆಳಭಾಗದಲ್ಲಿ ಅತಿಸೂಕ್ಷ್ಮವಾಗಿ ಹಚ್ಚಿದ್ದ ಕಾಡಿಗೆಯು, ಆಕೆಯ ವಿಶಾಲವಾದ ಕಣ್ಣುಗಳ ಕಾಂತಿಯನ್ನು ಹೆಚ್ಚಿಸುತಿದ್ದಿತು. ಆಕೆಯು ಸಂಬಾ ಕಲಾಬತ್ತಿನ ಕೆಲಸದಿಂದ ತುಂಬಿದ್ದ ಲಂಗವನ್ನುಟ್ಟಿದ್ದಳು. ಅಲ್ಲಲ್ಲಿ ಚಮಕೀ ಕೆಲಸಮಾಡಿದ್ದ ಮೇಲು

ಹೊದಿಕೆಯನ್ನು ಹೊದ್ದಿದ್ದಳು. ದಪ್ಪನಾಗಿಯೂ, ಉನ್ನತವಾಗಿಯೂ ಇದ್ದ ಕುಚಗಳಿಂದ ಪರಿಪೂರ್ಣವಾದ ವಕ್ಷಸ್ಥಳದಲ್ಲಿ ಮಖಮಲ್ಲಿನ ಕುಪ್ಪಸವನ್ನು ತೊಟ್ಟಿದ್ದಳು. ಮೂಗಿನಲ್ಲಿ ಥಳ ಥಳಿಸುವ ವಜ್ರದ ಮೂಗುತಿ. ಆಕೆಯ ದೇಹದಲ್ಲಿ ಭಂಗಾರದ ಕಾಂತಿಯು ಪ್ರಕಾಶಿಸುತಿದ್ದಿತು. ಆಕೆಯ ಅನಂತರೂಪದಲ್ಲಿ ಸೌಂದರ್ಯದ ರಾಶಿಯು ಮೇಲೆ ಮೇಲೆ ಉಕ್ಕಿ ಬರುತಿದ್ದಿತು. ಈ ಸುಂದರಿಯ ಹೆಸರೇ ಖಿರೋಜಾಬೀಬಿ.

ಖಿರೋಜೆಯು ಕಪಟವೇಷಧಾರಿಯಾದ ದೇವೇಂದ್ರನ ಇದಿರಿಗೆ ಬಂದುನಿಂತು-ತಾವು ಯಾರು? ಮಹಾಶಯ ಯಾರನ್ನು ಹುಡುಕಿಕೊಂಡು ಬಂದಿರುವಿರಿ ? ಎಂದು ಕೇಳಿದನು.

ದೇ—ಇಲ್ಲಿ ಕಬೀರುದ್ದೀನ್ ಎಂಬುವರು ಯಾರಾದರೂ ಇರುವರೇ?

ಖಿ—ಅಹುದು ಮಹಾಶಯ, ಇರುವುದೇನೋ ನಿಜ.

ದೇ—ಆತನನ್ನು ನಾನು ಈಗ ನೋಡಲು ಸಾಧ್ಯವೇ ?

ಖಿ—ಆಗಲಾರದು. ಅವನು ಎಲ್ಲಿಗೋ ಹೋಗಿ ಐದಾರು ದಿನಗಳಾದುವು. ಆತನು ಇನ್ನೂ ಹಿಂದಿರುಗಿ ಬಂದಿಲ್ಲ. ಆತನು ಹೊರಟು ಹೋದಮೇಲೆ ಆತನ ತಂಗಿಯೊಬ್ಬಳು ಇಲ್ಲಿಗೆ ಬಂದಿರುವಳು; ಆಕೆಯು ತನ್ನ ಅಣ್ಣನನ್ನು ನೋಡಬೇಕೆಂದು ಇಂದಿನವರೆಗೂ ನಿರೀಕ್ಷಿಸಿಕೊಂಡಿರುವಳು.

ದೇ—ಕಬೀರನು ಆವಾಗ ಹಿಂದಿರುಗಿ ಬರುವನೆಂಬು

ದನ್ನು ಆಕೆಯು ಬಲ್ಲಳೇ?

ಖಿ—ನಾನು ಹೇಳಲಾರೆನು.

ದೇ—ಆಕೆಯನ್ನು ಒಂದು ಸಲ ಕೇಳನೋಡು.

ಖಿ—ತಾವು ಇಲ್ಲಿಯೇ ನಿಂತಿರೋಣವಾಗಲಿ. ನಾನು ಹೋಗಿ ಕೇಳಿಕೊಂಡು ಬರುವೆನು.

ದೇ—ಎಲ್ಲಿ, ಕಬೀರನು ಯಾವ ಮನೆಯಲ್ಲಿರುವನು?

ಖಿ—ಮೂರನೆಯ ಮಹಡಿಯ ಮೇಲುಭಾಗದಲ್ಲಿ ಒಂದು ದೊಡ್ಡ ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡಿರುವನು.

ದೇ—ಕಬೀರನ ತಂಗಿಯು ನನಗೆ ದೂರದವಳಲ್ಲ. ನಾನವಳಿಗೆ ಚಿಕ್ಕಪ್ಪನಾಗಬೇಕು. ನಾನು ಅವಳನ್ನು ನೋಡಲು ಮಹಡಿಯಮೇಲೆ ಹೋಗುವುದಕ್ಕೆ ಅಡ್ಡಿಯೇನಾದರೂ ಉಂಟೆ? ನೀನೂ ನನ್ನ ಜತೆಯಲ್ಲಿಯೇ ಬಾ.

ಏಳನೆಯ ಸಂಧಿ.

(ಕಪಟವೇಷ)

ಖಿರೋಜಾಬಾಯಿಯು ದೇವೇಂದ್ರವಿಜಯನನ್ನು ಜತೆಯಲ್ಲಿ ಕರೆದುಕೊಂಡು ಮೂರನೆಯ ಮಹಡಿಯ ಮೇಲೆ ಹತ್ತಿಹೋಗಿ, ಕಬೀರುದ್ದೀನನು ವಾಸವಾಗಿರುತ್ತಿದ್ದ ಕೋಣೆಯನ್ನು ದೂರದಿಂದಲೇ ತೋರಿಸಿ ತಾನು ಹೊರಗಡೆ ನಿಂತಳು.

ದೇವೇಂದ್ರವಿಜಯನು ಆ ಕೋಣೆಯೊಳಗೆ ಪ್ರವೇಶ ಮಾಡಿ ನೋಡಲಾಗಿ ಮನೆಯೊಳಗೆ ಯಾರೂ ಇರಲಿಲ್ಲ.

ಒಂದು ಕಡೆಪಾತ್ರೆ ಒಂದು ಟೇಬಲ್ (Table) ಮತ್ತು ಒಂದು ಕುರ್ಚಿ ಬಿದ್ದಿದ್ದುವು. ಆ ಟೇಬಲಿನ ಮೇಲೆ ಒಂದೆರಡು ಕಾಗದಗಳು ಬಿದ್ದಿರುವುದನ್ನು ನೋಡಿ, ದೇವೇಂದ್ರವಿಜಯನು ಖಿರೋಜೆಯನ್ನು ಕುರಿತು,- ಇದೇನು ! ಮನೆಯಲ್ಲಿ ಯಾರೂ ಕಾಣುತ್ತಿಲ್ಲ! ಎಂದು ಕೇಳಿದನು.

,,ಯಾರೂ ಇಲ್ಲವೇ-ಯಾವಾಗ ಹೊರಟು ಹೋದರು! ಏನಾಶ್ಚರ್ಯ, ಇದೇನು [illegible] ! ನನಗೆ ಹೇಳಿಯೇ ಹೋಗಲಿಲ್ಲವಲ್ಲ,, ಎಂದು ಹೇಳುತ್ತಾ ಖಿರೋಜೆಯು ಆ ಕೋಣೆಯೊಳಗೆ ಪ್ರವೇಶ ಮಾಡಿ, ಆಕೆಯು ತನ್ನ ಅಣ್ಣನನ್ನು ನೋಡದೆ ಎಲ್ಲಿಗೆ ಹೊರಟುಹೋದಳೆಂದು ಹೇಳಿದ್ದಳು, ಎಂದು ಉಸುರಿದಳು.

ಟೇಬಲಿನ ಮೇಲೆ ಬಿದ್ದಿದ್ದ ಎರಡು ಕಾಗದಗಳಲ್ಲಿ ಒಂದರಮೇಲೆ ಖಿರೋಜೆಯ ಹೆಸರೂ, ಮತ್ತೊಂದರಮೇಲೆ ಪತ್ತೇದಾರ ದೇವೇಂದ್ರವಿಜಯನ ಹೆಸರೂ ಬರೆದಿದ್ದಿತು.

,,ಎರಡು ಕಾಗದಗಳನ್ನು ಬರೆದು ಇಟ್ಟು ಹೋಗಿದ್ದಾಳೆ. ಅವುಗಳಲ್ಲಿ ಒಂದು ನನ್ನದಾಗಿ ಕಾಣುತ್ತದೆ. ಮತ್ತೊಂದು ನಿಮ್ಮದು, ನೀವು ತೆಗೆದುಕೊಳ್ಳಿ,, ಎಂದು ದೇವೇಂದ್ರನು ಆಕೆಯ ಕಾಗದವನ್ನು ಆಕೆಗೆ ಕೊಟ್ಟು, ತನ್ನ ಕಾಗದವನ್ನು ತಾನು ತೆಗೆದುಕೊಂಡನು.

,,ಇದಕ್ಕಾಗಿಯೇ ತ[illegible] ಬಂ[illegible]ಗವನ್ನು ಬರೆದಿಟ್ಟಿರುವಳು, ತನ್ನನ್ನು [illegible] ವಿದ್ದರೆ ಈ ರೀತಿಯಲ್ಲಿ [illegible] ವನ್ನು [illegible] ಗಿರುವಳೆಂದು ತೋರುವುದು,, ಎಂದು ಖಿರೋಜೆಯು ಹೇಳಿದುದನ್ನು ದೇವೇಂದ್ರನು ಕೇಳಿ, ,, [illegible]ಬಹುದು, ಆದರೆ

ಆತನ ತಂಗಿಯು ನನಗೆ ಹೇಳಿ ಓಡಿಹೋಗಲು ಕಾರಣವೇ ನು? ಕಬೀರನು ಓಡಿ[illegible]ಗಲು ಕಾರಣವುಂಟು. ಕಬೀರನು ಅಸಲ್ ಹೊಸನೂರ ಸಾಹುಕಾರನಷ್ಟು ಬುದ್ಧಿ ದ್ವೇಗಳನ್ನು [illegible] ತಿಳಿಯುವವನು. [illegible] ಈಗಲೂ ನನಗೆ ತೊಂದರೆ [illegible] ಹೊಟ್ಟೆಯುರಿಸುತ್ತಿರುವನು,, [illegible]

ಖಿರೋಜಿ [illegible] ಆ [illegible] ತನ್ನಲ್ಲಿತಾನೇ ಓದಿಕೊಳ್ಳಲು [illegible] ತನ್ನ [illegible] ದವನ್ನು ತನ್ನ [illegible], ಕಣ್ಣುಗಳು ಮಾ[illegible] ಖಿರೋಜಿ [illegible] ಇದ್ದವು. ಖಿರೋಜಿಯು [illegible] ಬಾ [illegible] ಗಳು ಹೊರ ತಾಗಿ ವಿಶೇಷ [illegible] ಬರೆಯಲಿಲ್ಲ.

ಖಿರೋಜಿಯು [illegible] ಕಾ [illegible], [illegible] ಹಾಶಯ! ಆಕೆಯು ಕೇವ[illegible] ಬೇಕು ಏನು ಕೆಲಸವೋ! ಏನು ಕಥ[illegible]! ಯಾರಿಗೆ ಗೊತ್ತು. ಆಕೆಯು ಅ[illegible] ಕಬೀರನು [illegible] ಇಲ್ಲಿ [illegible] ಬರುವದಿಲ್ಲವೆಂದ [illegible] ಬರೆ[illegible]ದು, ಎಂದಳು.

ದೇವ[illegible] ಕೆಯ [illegible]ಗೆ [illegible] ದಳೆಂಬುದು ನಿನ್ನ ಕಾಗದದಲ್ಲಿ ಬರೆದಿಲ್ಲವೇ [illegible]?

,,ನನ್ನ ಕಾಗದದಲ್ಲಿ ಏನ[illegible]ದಿಲ್ಲ - ತಮ್ಮ ಕಾಗದ ದಲ್ಲಿ?,,

,,ಏನೂ ಇಲ್ಲ - ಏನೂ ಇಲ್ಲ,

,, ಅವಳ ಮನೋಭಿಪ್ರಾಯವೇನೋ ಯಾರು ಬಲ್ಲರು?,,

‘‘ನನ್ನ ಭಯದಿಂದಲೇ ಅವರು ಹೆದರಿ ಹೆದರಿ ಸಂಚರಿಸುತ್ತಿರುವರು,,

‘‘ ಅದೇನು, ಅವರು ತಮಗೆ ಅಷ್ಟು ಹೆದರಲು ಕಾರಣವೇನು ?,,

‘‘ ಕಾರಣವಿದೆ. ಕಬೀರನು ತಲೆ ಹೋಗುವ ಕೆಲಸವೊಂದನ್ನು ಮಾಡಿರುವನು,,

‘‘ಅದೆಂತಹದು-ಅದೆಂತಹದು ?

‘‘ಅವನು ಕೆಲವು ದಿನಗಳಿಂದೀಚೆಗೆ ಯೋಚನೆಯಿಂದ ತಲ್ಲಣಿಸುತ್ತಿರಲಿಲ್ಲವೇ ?,,

‘‘ನಿಜ, ಕೊಂಚಸುಟ್ಟಿಗೆ ಹಾಗೆಯೇ ಆಗಿದ್ದನು,,

‘‘ಮುಖವೆಲ್ಲವೂ ಬಾಡಿಹೋಗಿ ಸಿಪ್ಪೆಯಾಗಿ ಹೋಗಿತ್ತಲ್ಲವೆ ?,,

‘‘ಅಹುದು, ಮುಖವು ಬಾಡಿ ನಿಸ್ಸಾರವಾಗಿ ಕಾಣಿಸುತ್ತಿತ್ತು,,

‘‘ಅವನು ಯಾವ ವಿಷಯವನ್ನೂ ಯಾರೊಡನೆಯೂ ಮಾತನಾಡುತ್ತಿರಲಿಲ್ಲ,,

‘‘ಇಲ್ಲ, ಮಾತನಾಡುತ್ತಿರಲಿಲ್ಲ. ಅವನು ಯಾವಾಗಲೂ ಮುಖವನ್ನು ಮುಚ್ಚಿಕೊಂಡೇ ಇರುತಿದ್ದನು,,

‘‘ಎಷ್ಟು ದಿನದಿಂದ ನೀನು ಆತನನ್ನು ಈ ರೀತಿಯಲ್ಲಿ ನೋಡುತ್ತಿರುವೆ?’

‘‘ಸುಮಾರು ಇಪ್ಪತ್ತು ಇಪ್ಪತ್ತೆರಡು ದಿನಗಳಿಂದಲೂ,,

‘‘ಇದರಲ್ಲಿ ಅನೇಕ ಸಂದರ್ಭಗಳಿರುವುವು, ಹೇಳುವೆನು ಕೇಳು,,

‘‘ಹೇಳೋಣಾಗಲಿ,,

,,ಕಬೀರನು ಮೂರು ವಾರಗಳ ಹಿಂದೆ ಬಂದು ಪತ್ರ ವನ್ನು ಮತ್ತೊಬ್ಬನ ಹೆಸರಿನಲ್ಲಿ ಸೃಷ್ಟಿಮಾಡಿರುವನು.

,,ಫೋರ್ಜರಿ!

,,ಹೌದು, ಫೋರ್ಜರಿಯೇ; ಈಗ ಆ ವಿಷಯವೆಲ್ಲ ವೂ ಕೋರ್ಟಿಗೆ ಹಾಜರಾಗಿರುವುದು—ಕೆಲವು ದಿನಗಳೊಳ ಗಾಗಿ ಎಲ್ಲವೂ ತಾನಾಗಿಯೇ ಬಹಿರಂಗವಾಗುವುದು

,,ಹಾಗಾದರೆ, ಎಂತಹ ಸರ್ವನಾಶ!,,

,,ಸರ್ವನಾಶವೇ ಆದರೂ ಅದಕ್ಕೆ ಉಪಾಯವುಂಟು.

,,ಅದೇನು?

,,ಅವನು ಯಾವ ಹೆಸರನ್ನು ಫೋರ್ಜರಿ ಮಾಡಿರುವ ನೋ, ಅದು ನನ್ನ ಹೆಸರು.

,,ಆವೋಲ!

,,ಅದಕ್ಕಾಗಿಯೇ ನಾನು ಆತನನ್ನು ನೋಡಲು ಬಂ ದೆನು. ಆತನ ಅಪರಾಧವೆಲ್ಲವನ್ನೂ ಕ್ಷಮಿಸುವುದಕ್ಕಾಗಿ ಯೇ ನಾನೀಗ ಬಂದಿರುವುದು. ಅವನ ಕಳಂಕವೆಲ್ಲವನ್ನೂ ಹೋಗಲಾಡಿಸಬೇಕೆಂಬುದೇ ನನ್ನ ಮುಖ್ಯೋದ್ದೇಶ, ಆದುದರಿಂದಲೇ ನಾನು ಅವನನ್ನು ವಿಪತ್ತಿನಿಂದ ಉ ದ್ಧಾರಮಾಡಬೇಕೆಂದು ನೂರಾರು ರೂಪಾಯಿಗಳನ್ನು ತಂ ದಿರುವೆನು. ಈ ಹಣವೆಲ್ಲವನ್ನೂ ಅವನಿಗೆ ಕೊಟ್ಟು, ಮುಂ ದೆ ಇಂತಹ ನೀಚಕಾರ್ಯದಲ್ಲಿ ಕೈಹಾಕಬೇಡವೆಂದು ಹೇಳಿ ಹೋಗುವುದಕ್ಕಾಗಿ ನಾನು ಇಷ್ಟು ಶ್ರಮವನ್ನು ತೆಗೆ ದುಕೊಳ್ಳಬೇಕಾಗಿರುವುದು.

,,ತಾವೇ ಗುಣಾಢ್ಯರು, ತಾವೇ ಮಹಾದಯಾಳು ಗಳು,,

,,ದಯಾಳುವಾಗಿ ಫಲವೇನು? ಅವನು ನೀಚ, ಅವನು

ನನ್ನ ದಯೆಯನ್ನು ಅಪೇಕ್ಷಿಸುವನೇ ? ಅವನು ನನ್ನನ್ನು ಲಕ್ಷ್ಯವಮಾಡುವನೇ? ಬೇಕೂಫ್ - ಬೇಕೂಫ್ - ನಾನು ಅವನನ್ನು ಎಷ್ಟೇ ಪ್ರೀತಿಸಿದರೂ, ಅವನು ಮಾತ್ರ ಒಂದು ದಿನವಾದರೂ ಅದನ್ನು ಸ್ಮರಿಸುವುದಿಲ್ಲವೆಂಬುದೇ ನನಗೆ ಹೆಚ್ಚಾಗಿ ದುಃಖವನ್ನುಂಟುಮಾಡುವುದು. ಹೇಗಾದರೂ ಆಗಲಿ, ನೀನು ಕೊಂಚ ಅನುಗ್ರಹ........

" (ವಿನಯದಿಂದ) ಅನುಗ್ರಹವೆಂತಹದು? ಹೇಳೋಣಾಗಲಿ

" ಅವನಾಗಲಿ ಅಥವಾ ಅವನ ತಂಗಿಯಾಗಲಿ ಪುನಃ ಇಲ್ಲಿಗೆ ಬರಬಹುದು.

"ನನಗೆ ನಂಬುಗೆಯಿಲ್ಲ.

"ಕಾಗದವಾದರೂ ಬರೆಯಬಹುದು.

"ಬರೆದರೂ ಬರೆಯಬಹುದು-ಅನುಸಂಭವ.

"ಅವನು ಬರೆಯಲೇ ಬರೆಯುವನು.

"ಸರಿ ಸರಿ, ಹಾಗಾದರೆ ನಾನು ಅವರಿಗೆ ಕಾಗದ ಬರೆಯುವಾಗ ತಮ್ಮ ವಿಷಯವನ್ನು ಜ್ಞಾಪಿಸುವೆನು.

'ಬೇಡ, ಬೇಡ, ಖಿರೋಜಿ ! ನೀನು ನನ್ನ ವಿಷಯವನ್ನು ತಿಳಿಸಬೇಡ, ಕಂಡೆಯಾ. ಹಾಗೆ ತಿಳಿಸಿದರೆ ಕಷ್ಟಕ್ಕೆ ಬರುವುದು. ಅವನು ಭಾರಿ ಮೋಸಗಾರ, ಭಾರಿ ಕಳ್ಳ, ನನ್ನ ವಿಷಯವನ್ನು ಅವನಿಗೆ ಕೊಂಚವೂ ತಿಳಿಸಬೇಡ. ತಿಳಿಸಿದರೆ ತಲೆ ತಪ್ಪಿಸಿಕೊಳ್ಳುವನು. ಅವನಿರುವ ಸ್ಥಳವನ್ನು ಮಾತ್ರ ನನಗೆ ನೀನು ತಿಳಿಸು, ನಾನೇ ಹೋಗಿ ಅವನನ್ನು ನೋಡಿಕೊಂಡು ಬರುವೆನು. ಒಂದುವೇಳೆ ನನ್ನ ವಿಷಯವಾಗಿ ಅವನೇನಾದರೂ ನನ್ನನ್ನು ಕೇಳುವುದಾದರೆ, ನನಗಾವುದೂ ಗೊತ್ತಿಲ್ಲವೆಂದು ಹೇಳಿಬಿಡು. ನಿನ್ನ ಕಾಗದ

ವನ್ನು ಕೊಡು, ಅದರ ಒಂದು ಭಾಗದಲ್ಲಿ ನನ್ನ ವಿಳಾಸವನ್ನು ಬರೆದು ಕೊಡುವೆನು'.

ಹೀಗೆ ಹೇಳಿ ದೇವೇಂದ್ರನು ಖಿರೋಜೆಯ ಕೈಯ್ಯಲ್ಲಿದ್ದ ಕಾಗದವನ್ನು ತೆಗೆದುಕೊಂಡು ಸೀಸದ ಕಡ್ಡಿಯಿಂದ ಒಂದು ಸುಳ್ಳು ವಿಳಾಸವನ್ನು ಬರೆದು, ನಾನೀಗ ಹೋಗಿ ಬರುವೆನು. ಸಲಾಂ, ಎಂದನು

"ಸಲಾಂ"

ಎಂಟನೆಯ ಸಂಧಿ.

(ಜುಮೇಲೆಯ ಪತ್ರ)

'ಮಾಯಾವಿನಿಯೆನಿಸಿದ ಜುಮೇಲೆಯು ನಿಜವಾಗಿಯೂ ಮಾಯಾವಿನಿಯೇ ಸರಿ!' ಎಂದು ದೇವೇಂದ್ರವಿಜಯನು ಖಿರೋಜೆಯ ಮನೆಯನ್ನು ಬಿಟ್ಟು ಬಂದು ತನ್ನಲ್ಲಿ ತಾನೇ ಮಾತನಾಡಿಕೊಳ್ಳಲಾರಂಭಿಸಿದನು.

'ಗೋಡೆಯನ್ನು ಅಗೆದು ಪರೀಕ್ಷಿಸಿದ್ದಾಯಿತು. ಜುಮೇಲೆಯು ಬದುಕಿರುವಳು, ಎಂಬುದನ್ನು ದೇವೇಂದ್ರವಿಜಯನು ಬಲ್ಲನೆಂದು ಆಕೆಯು ತಿಳಿದಿರುವಳು.

'ದೇವೇಂದ್ರವಿಜಯನು ಖಿರೋಜೆಯ ಮನೆಯಲ್ಲಿ ಯಾವ ಕಾಗದವನ್ನು ಹೊಂದಿದನೋ, ಅದರಿಂದಲೇ ಜುಮೇಲೆಯು ಎಲ್ಲ ವಿಷಯವನ್ನೂ ಬಲ್ಲಳೆಂಬುದಕ್ಕೆ ಬೇರೆ ಪ್ರಮಾಣವೇನೂ ಬೇಕಾಗಿರುವುದಿಲ್ಲ. ಕಬೀರನ ಮನೆಯಲ್ಲಿ ತಂಗಿಯೊಂದು ಹೇಳಿಕೊಳ್ಳುತ್ತಾ ಒಂದು ವಾರಕ್ಕಿಂ

ತಲೂ ಹೆಚ್ಚಾಗಿ ವಾಸನಾಡುತ್ತಿದ್ದವಳು ಜುಮೇಲೆಯಲ್ಲದೆ ಮತ್ತು ಬೇರೆಯವರಲ್ಲ.

'ಜುಮೇಲೆಯು ಬರೆದಿರುವ ಕಾಗದವಾದರೋ ವಿಲಕ್ಷಣವಾದುದು. ಅವಳ ಕಾಗದವನ್ನು ಓದಿದ ಮಾತ್ರದಿಂದಲೇ ಅವಳ ಪೈಶಾಚ ಹೃದಯವು ಎಷ್ಟರ ಮಟ್ಟಿನದೆಂಬುದು ಗೊತ್ತಾಗುವುದು. ಆ ಕಾಗದವನ್ನು ನಮ್ಮ ವಾಚಕ ಮಹಾಶಯರ ಅವಗಾಹನೆಗಾಗಿ ಇಲ್ಲಿ ತಿಳಿಸಲು ಯುಕ್ತವಾಗಿ ಕಂಡು ಬರುವುದು.

ಪತ್ರ

ಮರಣೋನ್ಮುಖನಾದ ಪತ್ತೇದಾರ, ಶ್ರೀಯುತ ದೇವೇಂದ್ರವಿಜಯಮಿತ್ರನ ಸಮೀಪದಲ್ಲಿ—

ನಾವಿಬ್ಬರೂ ಮತ್ತೊಂದುಸಲ ಯುದ್ಧಭೂಮಿಯಲ್ಲಿ ಬಂದು ನಿಂತಿರುವೆವು. ಈಸಲವಾದರೋ ನಿನ್ನ ವಿಷಯದಲ್ಲಿ ನನ್ನ ಭಯಂಕರವಾದ ಆಕ್ರಮಣವು ನಿವಾರಿಸಲಸಾಧ್ಯವು. ಈ ವರೆಗೂ ಮೆಲ್ಲಮೆಲ್ಲನೆ ಬಂದು ಕೆಲಸವಾದಮೇಲೆ ಮತ್ತೊಂದು ಕೆಲಸವನ್ನು ಮುಗಿಸಿಕೊಂಡು ಬರುತಿದ್ದೆನು. ಇನ್ನು ಮುಂದೆ ನಾನು ಮಾಡಬೇಕೆಂದಿರುವ ನಿನಗೆ ವಿರುದ್ಧವಾದ ಕೆಲಸಗಳೆಲ್ಲವನ್ನೂ ಬೇಗಬೇಗನೆ ನೆರವೇರಿಸಿಕೊಳ್ಳದೇ ಬಿಡೆನು.

ನಿನಗೆ ತಿಳಿಯದಂತೆಯೂ, ತಿಳಿದರೂ ಸಾಧ್ಯವಾಗದಂತೆಯೂ ನಿನ್ನನ್ನು ನಾನು ಹಠಾತ್ತಾಗಿ ಧ್ವಂಸಮಾಡಿಬಿಡುವೆನು. ನನ್ನ ಕಾಗದವನ್ನು ಓದಿ ಮುಗಿಸಿದ ಕೂಡಲೆ, ನಾನು ನಿನ್ನ ವಿಷಯದಲ್ಲಿ ಎಷ್ಟು ದ್ವೇಷಿಸುವೆನು, ನಾನು ಎಂತಹ ಹೆಂಗಸಾಗಿರಬೇಕು, ಎಂಬುದನ್ನು ಕೊಂಚಕಾಲ ಯೋಚಿಸಿ ನೋಡು.

ಗೋಪ್ಯವಾಗಿ ನನ್ನ ಕೆಲಸವೆಲ್ಲವೂ ಕೈಗೂಡುವು ದೆಂದು ನಾನು ತಿಳಿದಿದ್ದೆನು. ಅದು ಸಾಧ್ಯವಾಗಲಿಲ್ಲ. ನಾನು ಬದುಕಿರುವೆನು ಎಂಬುದು ನಿನಗೆ ತಿಳಿಯಿತು. ನಿನಗೆ ತಿಳಿದರೆ ತಿಳಿಯಲಿ. ಅದರಿಂದ ನನಗಾಗುವುದೇನು?

ನಾನು ಸಣ್ಣ ಸಣ್ಣ ಮಕ್ಕಳ ಗುಡ್ಡುಬೆದರಿಕೆಗಳಿಗೆಲ್ಲ ಭಯಪಡತಕ್ಕವಳಲ್ಲ. ನಾನು ಜೂಮೋಲಿಯಾ. ಒಂದು ನಿಮಿಷವೆನ್ನುವುದರೊಳಗಾಗಿ ನಾನು ನಿನಗೆ ಏಳು ಸಮುದ್ರದ ನೀರನ್ನು ಕುಡಿಸಿಕೊಂಡು ಬರತಕ್ಕವಳು.

ಪತ್ತೇದಾರ ಮಹಾಶಯ ! ನೀನು ಹೆಂಗಸಿನ ಬಲಕ್ಕೆ ಸಮನಾದವನು - ಬಹಳ ಶಕ್ತ! ನಿನ್ನ ಯೋಗ್ಯತೆಗೆ ತಕ್ಕ ಕೆಲಸದಲ್ಲಿ ಕೈ ಹಾಕಿದರೆ ಫಲವುಂಟು. ನನ್ನನ್ನು ನೀನು ಏನುಮಾಡಬಲ್ಲೆ ? ನಿನ್ನ ಹೆಂಡತಿಯು ಹಣೆಯಲ್ಲಿ ಬರೆದಿರುವ ವೈಧವ್ಯವನ್ನು ಯಾರು ತಾನೇ ತಪ್ಪಿಸಬಲ್ಲರು.

ಜೂಮೋಲಿಯು ನಿನ್ನ ಕಿವಿಗಳನ್ನು ಹಿಡಿದುಕೊಂಡು ಲಾಗಾಟಗಳನ್ನು ಹಾಕಿಸುತ್ತಿದ್ದುದು ಜ್ಞಾಪಕದಲ್ಲಿರುವುದೋ? ಅಯ್ಯೋ ಪಾಪ! ಈಗ ಜ್ಞಾಪಕವೆಲ್ಲಿ ಬರಬೇಕು!

ಬಹಳ ದಿನಗಳು ನಿನ್ನನ್ನು ನಾನು ಇರಗೊಡೆನು. ನೀನು ಬೇಗನೆ ಸಾಯುವೆ-ನೀನು ಯಮಪುರಿಯನ್ನು ಬೆಳಗುವೆ, ಬಾಬು! ಜೂಮೊಲಿಯೊಡನೆ ಹೋರಾಡಿ ನೀನು ಬದುಕಿದ ಪಾಪವುಂಟೆ? ಕಾಲಹರಣಕ್ಕೆ ಅವಕಾಶಕೊಡದೆ ನಿನಗೆ ಆಸ್ತಿಪಾಸ್ತಿಗಳೇನಾದರೂ ಇರುವುದಾಗಿದ್ದರೆ,ಉಯಿಲ್ ಗಿಯಿಲ್‌ನ್ನು ಬೇಗನೆ ಸಿದ್ಧಪಡಿಸಿಕೋ. ಚಿತ್ರಗುಪ್ತನ ದಪ್ತರದಲ್ಲಿ ನಿನ್ನಹೆಸರು ದಾಖಲಾಗಿರುವುದು.

ನೀನು ನಿನ್ನ ನಾಲ್ಕಾರು ಜನ ಸ್ನೇಹಿತರೊಡನೆಸ್ಮಶಾನ

ಕ್ಕೆ ಹೋಗಿ, ನನ್ನ ಶವದ ಪೆಟ್ಟಿಗೆಯನ್ನು ಹೊರಗೆ ತೆಗೆಯಿಸಲು ಯತ್ನಮಾಡುತಲಿದ್ದೆಯೋ, ಆಗ ನಾನು ಸ್ಮಶಾನಕ್ಕೆ ಬಂದಿದ್ದೆನು; ಗೋಪ್ಯವಾಗಿದ್ದು ಕೊಂಡೇ ನಿಮ್ಮ ಕೆಲಸಗಳೆಲ್ಲವನ್ನೂ ನೋಡಿದೆನು- ನಿಮ್ಮ ಮಾತು ಕತೆಗಳೆಲ್ಲವನ್ನೂ ಕೇಳಿದೆನು.

ನೀನು ನನ್ನ ಗೋಪ್ಯವನ್ನು ಹೇಗೆ ಭೇದಿಸಿದೆಯೋ! ನನ್ನ ಗೋಪ್ಯವಾದ ಸಂಗತಿಗಳನ್ನು ಹೇಗೆ ತಿಳಿದುಕೊಂಡೆಯೋ, ಅದನ್ನು ಮಾತ್ರ ನಾನು ಕಾಣೆನು; ಆದರೆ ಖಿರೋಜಾಬೀಬಿಯ ಮನೆಯನ್ನು ಕಂಡು ಹಿಡಿದು, ಅಲ್ಲಿಂದ ನಾನಿರುವ ಸ್ಥಳವನ್ನು ನೀನು ತಿಳಿಯಬಹುದೆಂದು ನಾನು ಊಹಿಸಿದೆನು.

ದೇವೇಂದ್ರ, ನೀನು ಧೂರ್ತನೂ, ಬುದ್ಧಿವಂತನೂ ಆಗಿರುವೆ. ನೀನು ಸನ್ಮಾರ್ಗಾವಲಂಬಿಯಲ್ಲದೇ ಕೇವಲ ಬುದ್ಧಿವಂತನಾಗಿರುವ ಪಕ್ಷದಲ್ಲಿ, ನಾನು ನಿನ್ನ ತೀಕ್ಷ್ಣ ಬುದ್ಧಿಗಾಗಿ ನನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದೆನು. ಡಾಕ್ಟರ್ ಫೂಲ್ ಸಾಹೇಬನನ್ನು ಬಿಟ್ಟು ಮತ್ತಾರೂ ನನಗೆ ಸಮರಲ್ಲವೆಂದು ನಾನು ತಿಳಿದಿದ್ದೆನು; ಆದರೆ ಆತನ ಅನಂತರ ನೀನೂ ತೆಗೆದುಹಾಕತಕ್ಕವನಲ್ಲ-ನೀನೂ ಸಮರ್ಥನೇ ಆಹುದು. ನಾನು ಹೀಗೆ ಹೇಳುವುದರಿಂದ ನಿನಗೆ ನಾನು ಅಂಜುವಳೆಂದು ಮಾತ್ರ ತಿಳಿಯಬೇಡ. ಜುವೇಲಿಗೆ ಭಯದ ಶಬ್ದಾರ್ಥವೇ ತಿಳಿಯದು.

ಫೂಲ್ ಸಾಹೇಬನು ವಯಸ್ಸಿನಲ್ಲಿ ವೃದ್ಧನಾಗಿದ್ದನು, ನೀನು ಯುವಕನಾದರೂ ಧರ್ಮಕ್ಕೆ ಅಂಜತಕ್ಕವನು. ಇದೇನು ಭ್ರಾಂತಿಯೋ ನಾನು ಕಾಣೆನು, ನನ್ನ ಪ್ರಾಣವು ನಿನ್ನನ್ನು ಪ್ರೀತಿಸುತ್ತಿರುವುದು. ಪ್ರೀತಿಸಿದ ಮಾತ್ರದಿಂದೇನು!

ನೀನು ಯಾರನ್ನು ಪ್ರೀತಿಸುವೆಯೋ ಅದನ್ನೂ ನಾನು ಬಲ್ಲೆನು; ನನ್ನನ್ನು ಮಾತ್ರ ನೀನು ಪ್ರೀತಿಸುವುದಿಲ್ಲವೆಂಬುದನ್ನೂ ನಾನು ಚೆನ್ನಾಗಿಯೂ ಬಲ್ಲೆನು; ಆದುದರಿಂದಲೇ ನಾನು ನಿನ್ನನ್ನು ಬಹಳವಾಗಿ ದ್ವೇಷಿಸುತ್ತಿರುವುದು.

ಜುವೆಲೆಯು ದ್ವೇಷ, ಹಿಂಸೆ, ಹಠ, ಮುಂತಾದುವನ್ನು ಮಾತ್ರ ಮಾಡಬಲ್ಲಳೆಂದು ತಿಳಿಯಬೇಡ. ಜುವೆಲೆಯು ಪ್ರೀತಿಸುವುದನ್ನೂ ಬಲ್ಲಳು. ನೀನು ಒಂದು ಸಲ ನಿನ್ನ ಪ್ರೇಮಕಟಾಕ್ಷವನ್ನು ನನ್ನಮೇಲೆ ಬೀರಿನೋಡು, ಜುವೆಲೆಯು ಎಷ್ಟರ ಮಟ್ಟಿಗೆ ಪ್ರೀತಿಸುವಳು, ಎಷ್ಟರ ಮಟ್ಟಿಗೆ ಸುಖವನ್ನುಂಟು ಮಾಡುವಳು, ಎಷ್ಟರಮಟ್ಟಿಗೆ ಆದರ ಮಾಡುವಳು, ಎಷ್ಟರ ಮಟ್ಟಿಗೆ ಆನಂದ ಸಾಗರದಲ್ಲಿ ತೇಲಿಸಿ ಮುಳುಗಿಸಬಲ್ಲಳು, ಎಂಬುದು ತಾನಾಗಿಯೇ ಗೊತ್ತಾಗುವುದು. ಒಂದು ಸಲ-ಒಂದೇ ಸಲ-ಜುವೆಲೆಯನ್ನು ಚುಂಬಿಸಿ ಆಲಿಂಗಿಸಿದರೆ ಎಂತಹ ಸುಖವುಂಟಾಗುವುದೆಂಬುದನ್ನು ಯೋಚಿಸಿ ನೋಡು.

ನೀನು ಮನೋರಮೆಯ ಸಂಪತ್ತನ್ನು ಅನುಭವಿಸುವುದಕ್ಕೆ ನನಗೆ ಆಸ್ಪದ ಕೊಡದೇ ತೊಂದರೆ ಮಾಡಿರುವೆಯಾದಕಾರಣ, ನಾನು ನಿನ್ನನ್ನು ಬಹಳವಾಗಿ ದ್ವೇಷಿಸುವೆನು.

ನಾನು ನಿನ್ನನ್ನು ದ್ವೇಷಿಸುವೆನು-ನಿನ್ನ ಹೆಂಡತಿಯನ್ನೂ ದ್ವೇಷಿಸುವೆನು - ಶಚೀಂದ್ರನನ್ನೂ ದ್ವೇಷಿಸುವೆನು- ಶ್ರೀಶಚಂದ್ರನನ್ನೂ ದ್ವೇಷಿಸುವೆನು - ಮನೋರಮೆಯನ್ನೂ ದ್ವೇಷಿಸುವೆನು, ಇದೂ ಅಲ್ಲದೆ ಇನ್ನೂ ನಾಲ್ಕಾರು ಜನರನ್ನೂ ದ್ವೇಷಿಸುವೆನು.

ನೀನು ನನ್ನನ್ನು ಚನ್ನಾಗಿಯೂ ತಿಳಿದಿರು; ನಾನು

ಯಾವ ಅಭಿಪ್ರಾಯದಿಂದ ನಿನಗೆ ಈ ರೀತಿಯಾಗಿ ಕಾಗದ ಬರೆದಿರುವೆನೆಂಬುದನ್ನು ಚೆನ್ನಾಗಿಯೂ ಪರಿಶೀಲಿಸಿ ನೋಡು.

'ನಾನು ಯಾರನ್ನು ದ್ವೇಷಿಸುವೆನೋ
ಅವರು ಬೇಗನೆ ಸಾಯುವರು'

ನಾನು ನನ್ನ ಮನೋರಥವನ್ನು ಈಡೇರಿಸಿಕೊಳ್ಳುವುದಕ್ಕೋಸ್ಕರ ಒಂದು ಒಳ್ಳೆಯ ಉಪಾಯವನ್ನು ಕಂಡು ಹಿಡಿದು ಕೊಂಡಿರುವೆನು, ನೀನು ಈ ಕಾಗದವನ್ನು ಓದಿ ಯೋಚಿಸುತ್ತಿರುವ ಸಮಯದಲ್ಲಿಯೇ ನೀನು ಜೂಮೆಲೆಯಿಂದ ಪರಾಜಯವನ್ನು ಹೊಂದುವೆ. ಯಾವಾಗಲೂ ಎಚ್ಚರಿಕೆಯಿಂದಿರು.

ಇತಿ-ನಿನ್ನ ಸ್ತ್ರೀ ಶತ್ರು,
ಜೂಮೇಲಿಯಾ.

ಒಂಭತ್ತನೆಯ ಸಂಧಿ

(ಕೆಟ್ಟ ಸುದ್ದಿ)

ದೇವೇಂದ್ರವಿಜಯನು ಕಾಗದವನ್ನು ಓದುವ ಸಮಯದಲ್ಲಿ ಜೂಮೆಲೆಯಿಂದ ಪರಾಜಿತನಾಗುವನು, ಎಂದು ಕಾಗದದಲ್ಲಿ ಬರೆದಿರುವುದು. ಜೂಮೆಲೆಯು ಮನುಷ್ಯಳಾದರೂ, ಅವಳ ಯೋಚನೆಯಿಂದಲೂ, ಅವಳ ಸಾಹಸದಿಂದಲೂ, ಅವಳ ಆಚರಣೆಯಿಂದಲೂ, ಅವಳು ಪಿಶಾಚಿಗಿಂತಲೂ ಭಯಂಕರಳು.

ಕಾಗದವನ್ನು ಓದಿದಕೂಡಲೆ, ದೇವೇಂದ್ರನು ತನ್ನ ವಿಷಯದಲ್ಲಿ ಹೆದರಲಿಲ್ಲ, ತನ್ನ ಸ್ನೇಹಕ್ಕೆ ಆಸ್ಪದರಾದವರ ವಿಷಯದಲ್ಲಿ ಅವನು ಬಹಳವಾಗಿ ಯೋಚಿಸಲಾರಂಭಿಸಿದನು. ಈಸಮಯದಲ್ಲಿ ಜುಮೆಲೆಯು ಯಾರನ್ನು ದೃಷ್ಟಿಯಲ್ಲಿಟ್ಟಿರುವಳೋ? ಯಾರನ್ನು ಆಕ್ರಮಣ ಮಾಡಿರುವಳೋ? ಯಾರು ಬಲ್ಲರು? ದೇವೇಂದ್ರನು ಕಾಗದವನ್ನು ಆ ಕೂಡಲೆ ತನ್ನ ಅಂಗಿಯ ಜೇಬಿನಲ್ಲಿಟ್ಟು ಮನೆಯ ಕಡೆಗೆ ಶೀಘ್ರವಾಗಿ ಹೊರಟನು.

ಮನೆಯತಲೆಬಾಗಿಲಿನಲ್ಲಿ ಶ್ರೀಶಚಂದ್ರನು ನಿಂತುಕೊಂಡಿದ್ದನು. ದೇವೇಂದ್ರ ವಿಜಯನನ್ನು ನೋಡಿದ ಮಾತ್ರದಿಂದಲೇ, ಅವನ ಎರಡು ಕಣ್ಣುಗಳಿಂದಲೂ ಆನಂದ ಬಾಷ್ಪವು ಸುರಿಯಲಾರಂಭವಾಯಿತು. ದೇವೇಂದ್ರನು ಅದನ್ನು ನೋಡಿ, ಶ್ರೀಶ! ನೀನು ಇಲ್ಲಿ ನಿಂತಿರಲು ಕಾರಣವೇನು? ಏನು ವಿಷಯ ಎಂದು ಪ್ರಶ್ನೆಮಾಡಿದನು.

ಶ್ರೀಶ—ಹೇಗಾದರೂ ಆಗಲಿ, ತಮ್ಮನ್ನು ನೋಡಿದ ಕೂಡಲೆ ನನ್ನ ಹೃದಯದಲ್ಲಿ ಧೈರ್ಯಸಂಚಾರವಾಯಿತು. ಮಾಸ್ಟರ್ ಮಹಾಶಯ! ಬಹಳ ಯೋಚನೆಗಿಟ್ಟದ್ದಿತು; ಏನು ಸರ್ವನಾಶವಾಗಿ ಹೋಯಿತೋ ಎಂದು ಬಲು ಹೆದರಿದ್ದೆನು.

ದೇ—ನೀನು ಈ ಮಾತು ಹೇಳದೆ ಏತಕೆ? ಏನಾಗಿದೆ?

ಶ್ರೀ—ತಮಗೆ ಯಾರೋ ವಿಷ ಹಾಕಿದರೆಂದೂ ತಾವು ಬದುಕುವ ಭರವಸೆಯೇ ಇಲ್ಲವೆಂದೂ ನಾನು ಕೇಳಿದೆನು.

ದೇ—ಹೇಳಿದವರಾರು? ಯಾವಾಗ ?

ಶ್ರೀ—ನಾನು ಕೇಳಿ ಸುಮಾರು ಎರಡು ಗಂಟೆಯಾಗಿರಬಹುದು.

ದೇ—ಹೇಳಿದವರಾರು?

ಶ್ರೀ—ಒಬ್ಬ ಪೊಲೀಸಿನವನು.

ದೇ—ಅವನೇನೆಂದು ಹೇಳಿದನು.

ಶ್ರೀ—ಈಗ್ಗೆ ಎರಡು ಗಂಟೆಗಳ ಮುಂಚೆ ಒಬ್ಬ ಪಹರೆಯುವನು ಇಲ್ಲಿಗೆ ಓಡಿಬಂದು, ಯಾವಳೋ ಒಬ್ಬ ಹೆಂಗಸು ತಮಗೆ ವಿಷವನ್ನು ಹಾಕಿರುವಳು. ತಾವು ಅಜ್ಞಾನದಿಂದ ಪೋಲೀಸ್ ಠಾಣಾದಲ್ಲಿ ಬಿದ್ದಿರುವಿರಿ, ತಮ್ಮ ಪ್ರಾಣವು ಉಳಿಯುವ ಹಾಗಿಲ್ಲವೆಂದು ಅಲ್ಲಿರತಕ್ಕವರೆಲ್ಲರೂ ಭಯಪಡುತ್ತಿರುವರು. ಆದುದರಿಂದಲೇ ನಮ್ಮ ಅತ್ತೆಮ್ಮನನ್ನು (ದೇವೇಂದ್ರನ ಹೆಂಡತಿಯಾದ ರೇವತೀದೇವಿಯನ್ನು) ಕರೆದುಕೊಂಡು ಬರಬೇಕೆಂದು ಹೇಳಿದನು.

ದೇ—ಎಲ್ಲಿಗೆ ಹೋಗುವುದಕ್ಕೆ?

ಶ್ರೀ—ಠಾಣಾಕ್ಕೆ.

ದೇ—ಆತನೊಡನೆ ಅವಳು ಹೋದಳೇ?

ಶ್ರೀ—ಇಲ್ಲ.

ದೇ—ಈಶ್ವರ! ಇಂದಿಗೆ ನಾನೇ ಧನ್ಯ!

ಶ್ರೀ—ನಮ್ಮತ್ತೆಯು ಆತನೊಡನೆಯೇ ಹೊರಡುವುದರಲ್ಲಿದ್ದಳು, ಅಷ್ಟು ಹೊತ್ತಿಗೆ ಸರಿಯಾಗಿ ಶಚೀಂದ್ರನು ಬಂದನು.

ದೇ—ಅದೇ ಸಮಯಕ್ಕೆ?

ಶ್ರೀ—ಅಹುದು.

ದೇ—ಒಳ್ಳೆಯದು, ಆಮೇಲೆ?

ಶ್ರೀ—ಶಚೀಂದ್ರನು ಬಂದು, ತಮ್ಮನ್ನು ನೋಡಲು ಅವನೇ ಹೋಗುವುದಕ್ಕೆ ಸಿದ್ಧನಾದನು. ಅತ್ತೆಯೂ ಆತನೊಡನೆ ಹೊರಡಲು ಅಪೇಕ್ಷೆಪಟ್ಟಳು.

ದೇ—ಆಮೇಲೆ ?

ಶ್ರೀ—ಅವನು ನಮ್ಮತ್ತೆಯ ಮಾತಿಗೆ ಕಿವಿಗೊಡಲಿಲ್ಲ.

ದೇ—(ಸಂತೋಷದಿಂದ) ಶಚೀಂದ್ರನು ಒಳ್ಳೆಯುದನ್ನೇ ಮಾಡಿದನು - ಅವನು ಒಳ್ಳೆಯ ಚಾಲಾಕಾದ ಹುಡುಗನು - ಅವನು ಬುದ್ಧಿಗೆ ತಕ್ಕ ಕೆಲಸವನ್ನೇ ಮಾಡಿರುವನು.

ಶ್ರೀ-ಅವನು ಹೇಳಿದ್ದೇನೆಂದರೆ-ನಾನು ಮೊದಲು ಹೋಗಿ ಮಾವನನ್ನು ನೋಡುವೆನು, ಅವನೇನಾದರೂ ನಿನ್ನನ್ನು ಅಪೇಕ್ಷಿಸುವಪಕ್ಷದಲ್ಲಿ ಹೇಳಿಕಳುಹಿಸುವೆನು. ಅನಂತರ ನೀನು ಬರಬಹುದು.

ನಮ್ಮತ್ತೆಯು ಇದಾವ ಮಾತನ್ನೂ ಕೇಳಲಿಲ್ಲ, ಕೊನೆಗೆ ಶಚೀಂದ್ರನು ಅತ್ತೆಗೆ ಬಹಳವಾಗಿ ಹೇಳಿ ತಾನೊಬ್ಬನೇ ಹೊರಟುಹೋದನು.

ದೇ—ಹೇಗಾದರೂ ಆಗಲಿ, ವಿಪತ್ತು ಬಂದ ಬಂದ ಹಾಗೆಯೇ ಕಳೆದು ಹೋಯಿತು, ನಾನು ಬಂದಿರುವೆನೆಂದು ತಿಳಿಸು.

ಶ್ರೀ—ನಮ್ಮತ್ತೆಯು ಇನ್ನೂ ಹಿಂತಿರುಗಿ ಬಂದಿಲ್ಲವಲ್ಲ.

ದೇ—(ವಿಸ್ಮಯದಿಂದ) ಹಿಂತಿರುಗಿ ಬರಲಿಲ್ಲವೆಂದರೇನು?

ಶ್ರೀ—ಮಾಸ್ತರ್ ಮಹಾಶಯ, ಇಲ್ಲ, ಅವಳನೂ ಬಂದಿಲ್ಲ.

ದೇ—ಅವಳೆಲ್ಲಿಗೆ ಹೋದಳು?

ಶ್ರೀ—ತಮ್ಮನ್ನು ನೋಡುವುದಕ್ಕೇ.

ದೇ— ನನ್ನನ್ನು ನೋಡುವುದಕ್ಕೇ! ಶಚೀಂದ್ರನು ಮತ್ತೆ ಹೇಳಿ ಕಳುಹಿಸುವ ವರೆಗೂ ಅವಳು ಇಲ್ಲಿಯೇ ಇರಲಿಲ್ಲವೇ?

ಶ್ರೀ—ಇದ್ದಳು.

ದೇ— (ವ್ಯಗ್ರತೆಯಿಂದ) ಅವಳು ಹೋದುದು ಹೇಗೆ?

ಶ್ರೀ— ಶಚೀಂದ್ರನು ಸೇವಕನೊಬ್ಬನನ್ನು ಕಳುಹಿಸಿದ್ದನು.

ದೇ—(ಆಶ್ಚರ್ಯದಿಂದ) ಏನು!

ಶ್ರೀ—ಶಚೀಂದ್ರನು ನಮ್ಮತ್ತೆಯನ್ನು ಕರೆದುಕೊಂಡು ಬರಲು ಸೇವಕನೊಬ್ಬನನ್ನು ಕಳುಹಿಸಿಕೊಟ್ಟಿದ್ದನು.

ದೇ— ಎಷ್ಟು ಹೊತ್ತಾಯಿತು?

ಶ್ರೀ—ಸುಮಾರು ಒಂದು ಗಂಟೆಯಾಗಿರಬಹುದು.

ದೇ— (ಉದ್ವೇಗದಿಂದ) ಆಮೇಲೆ ಆಮೇಲೆ? ಶ್ರೀಶ! ಹೇಳು, ಹೇಳು, ಬೇಗ ಹೇಳು-ನಿನಗೆ ಗೊತ್ತಿರುವುದೆಲ್ಲವನ್ನೂ ಬೇಗಹೇಳು. ಬಂದಿದ್ದವರಾರು?

ಶ್ರೀ—ಪಹರೆಯವನು.

ದೇ—ಮೊದಲುಬಂದಿದ್ದವನೇ?

ಶ್ರೀ—ಅಹುದು, ಅವನೇ.

ದೇ—ನೀನು ಅವನನ್ನು ಬಲ್ಲೆಯ?

ಶ್ರೀ--- ಇಲ್ಲ.

ದೇ---ಅವನು ಯಾವಜಾತಿಯವನು?

ಶ್ರೀ---ಮುಸಲಮಾನ.

ದೇ---ಅವನು ಮತ್ತೆ ಬಂದಾಗ ಏನು ಹೇಳಿದನು.

ಶ್ರೀ---ಅವನೇನು ಹೇಳುವನು?ಏನೂಇಲ್ಲ.

ದೇ---ಬಳ್ಳಿಯದು, ಆಮೇಲೆ ?

ಶ್ರೀ---ಅವನೊಂದು ಕಾಗದವನ್ನು ತಂದಿದ್ದನು.

ದೇ---ಶಚೀಂದ್ರನ ಕಡೆಯಿಂದಲೇ

ಶ್ರೀ---ಹೌದು.

ದೇ---ಆಕಾಗದವನ್ನು ನೀನು ನೋಡಿದೆಯ?

ಶ್ರೀ---ಅದು ನನ್ನಲ್ಲಿಯೇ ಇರುವುದು.

ದೇ---ಎಲ್ಲಿ, ಎಲ್ಲಿ, ಕೊಡುನೋಡೋಣ.

ಶ್ರೀ---ಜೇಬಿನಲ್ಲಿದ್ದ ಕಾಗದವನ್ನು ದೇವೇಂದ್ರನ ಕೈಗೆ ಕೊಡುವನು. ದೇವೇಂದ್ರನು ಆ ಕಾಗದವನ್ನು ಕೈಯಲ್ಲಿ ತೆಗೆದುಕೊಂಡು ಓದಿದನು, ಅದರಲ್ಲಿ ಈ ರೀತಿಯಾಗಿ ಬರೆದಿದ್ದಿತು.

ಅತ್ತೆ! ಕಾಗದವನ್ನು ನೋಡಿದ ಕೂಡಲೇ ಹೊರಟು ಬರಬೇಕು. ನಿನಗೋಸ್ಕರ ಬಂದು ಗಾಡಿಯನ್ನು ಕಳುಹಿಸಿ ಕೊಟ್ಟಿರುವೆನು—ಮಾವನ ಅವಸ್ಥೆಯು ಬಹಳ ಶೋಚನೀಯವಾಗಿರುವುದು.

ಇತಿ ಶಚೀಂದ್ರ.

ಹತ್ತನೆಯ ಸಂಧಿ

(೩೫)

ದೇವೇಂದ್ರವಿಜಯನ ಬುದ್ಧಿಯಲ್ಲಿ ವಿಕಲ್ಪವುಂಟಾಯಿತು, ವಿಸ್ಮಯ,ಕ್ರೋಧ, ಆಶಂಕೆಗಳು, ಒಂದೇ ಕಾಲದಲ್ಲಿ ಆತನ ಹೃದಯವನ್ನು ಆವರಿಸಿಕೊಂಡವು; ಈ ಸಲದಂತಹ ದಾರುಣವಾದ ಅವಸ್ಥೆಯನ್ನು ಅವನು ಎಂದೆಂದಿಗೂ ಅನುಭವಿಸಿರಲಿಲ್ಲ.

ದೇವೇಂದ್ರನು ಕೊಂಚ ಹೊತ್ತು ಯೋಚಿಸುತ್ತಿದ್ದು, ಶ್ರೀಶ, ಆಗಾಡಿಯನ್ನು ನೀನು ನೋಡಿದೆಯಾ? ಎಂದು ಕೇಳಿದನು.

ಶ್ರೀಶ—ನೋಡಿದೆನು. ಗಾಡಿಯು ಮನೆಯ ಮುಂದೆ ಬಂದು ನಿಂತಿದ್ದಿತು.

'ಶಚೀಂದ್ರನು ಹೋಗಿ ಎರಡು ಗಂಟೆಯಾಗಿರಬಹುದೇ?.

'ಹೌದು, ಎರಡು ಗಂಟೆಗಳಿಗಿಂತಲೂ ಹೆಚ್ಚಾಗಿರಬಹುದು'

'ನಿಮ್ಮತ್ತೆ ಹೋಗಿ ಒಂದು ಗಂಟೆಯಾಗಿರಬಹುದೇ?'

'ಆಗಿರಬಹುದು'

'ಎಲ್ಲಿಗೆ ಹೋಗಬೇಕಾಗಿದ್ದಿತೆಂಬುದನ್ನು ಆಕೆಯು ತಿಳಿದಿದ್ದಳೇನು?'

'ಪೋಲೀಸ' ಸ್ಟೇಷನ್ನಿಗೆ'

'ಶಚೀಂದ್ರ ಹೋಗಿರುವ ಸ್ಥಳಕ್ಕೆ?

'ಅಹುದು, ಅಲ್ಲಿಗೆ'

«ಶಚೀಂದ್ರನು ಹೋಗುವಾಗ ಗಾಡಿಯಲ್ಲಿ ಹೋದನೇ?'

'ಇಲ್ಲ, ಮಹಾಶಯ!'

'ಶಚೀಂದ್ರನು ಹೋದಾಗ ಪಹರೆಯವನು ಸಂಗಡ ಗಾಡಿಯನ್ನು ತಂದಿರಲಿಲ್ಲವೇ?'

'ಇಲ್ಲ, ನಾನು ಗಾಡಿಯನ್ನು ನೋಡಲಿಲ್ಲ'

«ಹಾಗಾದರೆ ಓಡಿಹೋದನೋ?'

«ಹೌದು, ತಮ್ಮನ್ನು ನೋಡುವುದಕ್ಕೆ ಬಂದೇ ಉಸುರಿನಲ್ಲಿ ಓಡಿಹೋದನು'

«ಪಹರೆಯುವನೂ ಅವನೊಡನೆಯೇ ಹೊರಟನೋ?'

«ಹೊರಟು ಹೋದನು.

«ಶಚೀಂದ್ರನ ಜತೆಯಲ್ಲಿಯೇ ಹೋದನೆ ?

«ಇಲ್ಲ, ಪಹರೆಯುವನು ಮತ್ತೊಂದು ಕಡೆಗೆಹೊರಟು ಹೋದನು.

«ಪಹರೆಯುವನ ನಂಬರು ಗೊತ್ತಿದೆಯೇ ?

««ಗೊತ್ತಿದೆ, ೩೫.

««ನೀನು ಆ ಮನುಷ್ಯನನ್ನು ಪುನಃ ನೋಡಿದರೆ,ಗುರುತಿಸಬಲ್ಲೆಯಾ?

««ಗುರುತಿಸಬಲ್ಲೆ.

««ಹಾಗಾದರೆ, ನೀನು ಈಗಲೇ ಠಾಣೆಗೆಹೋಗಿ ರಾಮಕೃಷ್ಣಬಾಬುವಿಗೆ ನನ್ನ ಹೆಸರುಹೇಳಿ, ೩೫ ನೆನಂಬರು ಪಹರೆಯುವನನ್ನು ಕಳುಹಿಸಿಕೊಡಬೇಕೆಂದು ತಿಳಿಸು, ಆತನನ್ನುನಿನ್ನ ಜತೆಯಲ್ಲಿಯೇ ಕರೆದುಕೊಂಡು ಬಾ.

ಶ್ರೀಶಚಂದ್ರನು ಆ ಕೂಡಲೆ ಸ್ಟೇಷನ್ನಿನ ಕಡೆಗೆ ದುಡುದುಡು ಓಡಿಹೋದನು. ದೇವೇಂದ್ರ ವಿಜಯನು

ಹೊರಗಿನ ವರಾರದಲ್ಲಿ ಕುಳಿತುಕೊಂಡು ಏನೇನೋ ಯೋಚನೆಮಾಡತೊಡಗಿದನು.

ಪ್ರಕೃತ ವಿಪತ್ತಿನಲ್ಲಿ ಹಠಾತ್ ಕೈಹಾಕಿ ಕೆಲಸ ಮಾಡುವುದಾದರೆ, ಕೆಲಸವು ಸಫಲವಾಗುವದಕ್ಕೆ ಬದಲಾಗಿ ವಿಫಲವಾಗುವದು ಮಾತ್ರವೇ ಅಲ್ಲದೇ ಅನೇಕ ವಿಪತ್ಪರಂಪರೆಗಳನ್ನೂ ತಂದೊಡ್ಡುವುದು, ಆದುದರಿಂದ ಮೆಲ್ಲ ಮೆಲ್ಲನೆ ಬಂದಾಗುತಲೊಂದು ಕೆಲಸವನ್ನು ಸಾಂಗವಾಗಿ ನೆರವೇರುವ ಉಪಾಯವನ್ನು ಹುಡುಕುವುದು ಒಳ್ಳೆಯದು ಪ್ರಕೃತ ಸ್ಥಿತಿಗಳನ್ನು ನೋಡಿದರೆ ಜುಮೆಲೆಯೇ ರೇವತಿಯನ್ನು ಅಪಹರಿಸಿಕೊಂಡು ಹೋಗಿರಬೇಕು. ಅದರಲ್ಲಿ ಆವ ವಿಧವಾದ ಸಂಶಯವೂ ಇರಲಾರದು, ಎಂದು ದೇವೇಂದ್ರನು ಯೋಚಿಸಿ ತಿಳಿದನು.

ಇದಕ್ಕಾಗಿಯೇ ಜುಮೆಲೆಯು ದೇವೇಂದ್ರನಿಗೆ, ನನ್ನ ಕಾಗದವು ಓದಿ ಮುಗಿಸುವುದರೊಳಗಾಗಿಯೇ ನಿನ್ನನ್ನು ನಾನು ಪರಾಜಿತನನ್ನಾಗಿ ಮಾಡುವೆನು, ಎಂದು ಕಾಗದದಲ್ಲಿ ಬರೆದಳಲ್ಲವೇ ? ರೇವತಿಯು ಪತ್ತೇದಾರನ ಹೆಂಡತಿ - ಆಕೆಯನ್ನು ಮನೆಯಿಂದ ಹೊರಪಡಿಸುವುದು ಸಾಮಾನ್ಯವಲ್ಲ. ಜುಮೆಲೆಯು ವಿಶೇಷವಾದ ಸಾಹಸವನ್ನೇ ಉಪಯೋಗಿಸಿ ತನ್ನ ಮನೋರಥವನ್ನು ನೆರವೇರಿಸಿ ಕೊಂಡಿರುವಳು.ಈ ಸಮಯದಲ್ಲಿ ಆಕೆಯಾಡಿದಾಟವು ಅಸಾಧಾರಣವಾದುದು.

ಹನ್ನೊಂದನೆಯ ಸಂಧಿ.

(ಸಂಧ್ಯಾಸದಲ್ಲಿ)

ರೇವತಿಯು ಅಷ್ಟೇನೂ ಬುದ್ಧಿವುತಿಯಾಗಿರಲಿಲ್ಲ ವಾದಕಾರಣ ಜುಮೆಲೆಯ ಮೋಸವನ್ನು ಭೇದಿಸುವುದು ಅವಳಿಗೆ ಸಾಧ್ಯವಾಗಿರಲಿಲ್ಲ. ಆವನು ವರ್ತಮಾನವನ್ನು ತಂದಿದ್ದನೋ, ಅವನು ಪರಿಚಯವನು. ಪೋಲೀಸ್ ಇಲಾಖೆಗೆ ಸೇರಿದವನು.ಅದು ಅಲ್ಲದೆ,ಅದೇಸ್ಥಳದ ಸ್ಟೇಷನ್ನಿಗೆ ಸೇರಿದವನಾಗಿ ರಾಮಕೃಷ್ಣಬಾಬುವಿನ ತಂಬೆಯಲ್ಲಿರ ತಕ್ಕವನು ಅಂತಹವನಲ್ಲ. ರೇವತಿಯು ಸಂದೇಹಪಡಲು ಕಾರಣವೇನಿರುವುದು? ಬಂದು ವೇಳೆ ಸಂದೇಹವೇನಾದರೂ ಇದ್ದಿದ್ದರೆ, ಶಚೀಂದ್ರನು ಮೊದಲೇ ಓಡಿಬಂದು ಇದ್ದ ಸಂಗತಿಯನ್ನು ತಿಳಿಸಿಬಿಡುತ್ತಿದ್ದನು, ಆದರೆ ಶಚೀಂದ್ರನು ಹಾಗೆ ಮಾಡದೆ, ತಾನೇ ಆಕೆಗೆ ಹೊರಟು ಬರುವಂತೆ ಕಾಗದವನ್ನು ಬರೆದಿರುವಾಗ, ರೇವತಿಯು ಅದನ್ನು ನಂಬದಿರಲು ಕಾರಣವೇನು?

ಇಷ್ಟು ಹೊತ್ತಾದರೂ ಶಚೀಂದ್ರನು ಬರಲಿಲ್ಲವೇತಕೆ? ಆತನು ಹಿಂತಿರುಗಿ ಬರದ ಹಾಗೆ ಜುಮೆಲೆಯು ಅಡ್ಡಿಯನ್ನೇನಾದರೂ ತಂದು ಬಿಟ್ಟಿರುವಳೇ? ಎಂದು ಮತ್ತೊಂದು ಚಿಂತೆಯು ದೇವೇಂದ್ರನ ತಲೆಯಲ್ಲಿ ಸೇರಿಕೊಂಡು ಅವನನ್ನು ಕೇವಲ ಅಧೀನನನ್ನಾಗಿ ಮಾಡಿಬಿಟ್ಟಿತು.

ಶಚೀಂದ್ರನು ಬರದ ಯಾವ ಕಾಗದವುಂಟೋ ಅದು ನಿಶ್ಚಯವಾಗಿಯೂ ಫೋರ್ಜರಿಯು, ಶಚೀಂದ್ರನು ಬರದಂತೆಯೇ ಇದ್ದ ಕಾಗದವನ್ನು ನೋಡಿ, ರೇವತಿಯು

ಸಹಜವಾದುದೆಂದೇ ನಂಬಿ ಮೋಸಹೋದಳು. ಮೋಸಗಾರರು ಕೊಂಚವೂ ಸಂದೇಹಕ್ಕೆ ಆಸ್ಪದಕೊಡದೆ ಶಚೀಂದ್ರನು ಹೊರಟು ಹೋದಮೇಲೆ ಒಂದು ಗಂಟೆಯ ಕಾಲ ನಿರೀಕ್ಷಿಸಿ ಶಚೀಂದ್ರನ ಹೆಸರಿನಿಂದ ಒಂದು ಕಾಗದವನ್ನು ಸೃಷ್ಟಿಮಾಡಿ ರೇವತಿಯ ಕೈಗೆ ತಂದುಕೊಟ್ಟಿರಬೇಕು.

ಎಂತಹ ಭಯಂಕರವಾದ ಚಾತುರ್ಯ! ಇಂತಹ ವಿಪತ್ಕಾಲದಲ್ಲಿ ದೇವೇಂದ್ರನು ನಿರೀಕ್ಷಿಸಿಕೊಂಡಿರದೇ ಮತ್ತೇನನ್ನು ತಾನೇ ಮಾಡಬಲ್ಲನು ? ಶಕ್ತಿ ಇದೆ ಯೆಂದು ಬೀದಿಯಲ್ಲಿ ಅಲ್ಲಿಂದಿಲ್ಲಿಗೆ ಓಡಿದರೆ ಬಂದ ಭಾಗ್ಯವೇನು ? ಅದರಿಂದ ಏನು ಉಪಕಾರವಾದೀತು ? ಯಾರಲ್ಲಿ ಉಪಾಯವನ್ನು ಯೋಚಿಸಬೇಕು ! ಇಂತಹ ವಿಷಯಗಳಲ್ಲಿ ದೇವೇಂದ್ರನಿಗಿಂತಲೂ ಹೆಚ್ಚಾಗಿ ತಿಳಿದವರಾರು ?

ಇಂತಹ ಸಮಯಗಳಲ್ಲಿ ಸುಮ್ಮನೆ ಯೋಚಿಸುತ್ತ ಕುಳಿತರೆ ಆಗುವುದೇನು? ಪ್ರಕೃತಕ್ಕೆ ಸಂಬಂಧಪಟ್ಟ ಆವುದಾದರೊಂದು ಮಾರ್ಗವನ್ನು ಹುಡುಕಬೇಕಾದುದು ಬುದ್ಧಿವಂತನ ಕೆಲಸವಾಗಿರುವುದು.

ದೇವೇಂದ್ರನು ಯೋಚಿಸಿದನು:—ಅಸಂಭವ! ಜಾಮೆಲೆಯು ಶಚೀಂದ್ರನನ್ನು ಹಗಲಿನಲ್ಲಿ ತನ್ನ ಸ್ವಾಧೀನಪಡಿಸಿಕೊಳ್ಳಲು ಎಂದಿಗೂ ಸಮರ್ಥಳಲ್ಲ; ತನ್ನ ಬುದ್ಧಿಕೌಶಲದಿಂದ ಆತನನ್ನು ಎಲ್ಲಿಯೋ ದೂರ ಮಾಡಿರಬೇಕು; ಆದುದರಿಂದಲೇ ಅವನು ಇಷ್ಟು ಹೊತ್ತಾದರೂ ಹಿಂತಿರುಗಿ ಬಂದಿಲ್ಲ. ಪಿಶಾಚಿಯಾದ ಜಾಮೆಲೆಯು ಸುಲಭವಾಗಿ ತನ್ನ ಕೆಲಸವನ್ನು ನೆರವೇರಿಸಿಕೊಂಡುಬಿಟ್ಟಳು. ಸರಿಯಾದ

ಸುಳುವು ಸಿಕ್ಕುವ ವರೆಗೂ ಕಾಲವನ್ನು ನಿರೀಕ್ಷಿಸುವುದೇ ನಮ್ಮ ಕರ್ತವ್ಯವು.

ಕೊಂಚ ಹೊತ್ತಿನೊಳಗಾಗಿಯೇ ಶ್ರೀಶಚಂದ್ರನು ೪೫ನೇ ನಂಬರು ಪಹರೆಯುವನನ್ನು ತನ್ನ ಸಂಗಡಲೇ ಕರೆದುಕೊಂಡು ಬಂದು ಸೇರಿದನು.

ದೇವೇಂದ್ರವಿಜಯನು ಆ ಪಹರೆಯುವನನ್ನು ಕುರಿತು, ನೀನು ಇಲ್ಲಿಯೇ ಕುಳಿತುಕೊ; ನಾನೀಗಲೇ ಬರುವೆನು, ಎಂದು ಹೇಳಿ ಶ್ರೀಶಚಂದ್ರನನ್ನು ಕರೆದುಕೊಂಡು ಮತ್ತೊಂದು ಕೋಣೆಯೊಳಗೆ ಪ್ರವೇಶಮಾಡಿದನು. ಅಲ್ಲಿ ದೇವೇಂದ್ರನು ಶ್ರೀಶನನ್ನು ಕುರಿತು, ಶ್ರೀಶ, ಗುರುತಿಸಿದೆಯಾ? ಎಂದನು.

'ಇವನು ಅವನಲ್ಲ'

'ನಾನೂ ಇದನ್ನು ಬಲ್ಲೆನು'

'ಇವನ ಹೆಸರು ಅಬ್ದುಲ್ಲಾ'

'ನೀನು ಇವನನ್ನು ಬಲ್ಲೆಯಾ?'

'ಚೆನ್ನಾಗಿಯೂ ಬಲ್ಲೆ. ಬಾಲ್ಯದಿಂದಲೂ ಇವನನ್ನು ನಾನು ನೋಡುತ್ತಿರುವೆನು'

'ಯತ್ನಮಾಡಿದರೆ, ನಿನ್ನ ಮೇಲೆ ಅತಿಯಾಗಿ ಏನನ್ನಾದರೂ ಮಾಡಬಲ್ಲನೋ ?

"ಇಲ್ಲ.,,

ದೇವೇಂದ್ರನು ಅಲ್ಲಿಂದ ಹಿಂತಿರುಗಿಬಂದು ಪಹರೆಯುವನನ್ನು ನೋಡಿ, ಅಬ್ದುಲ್ಲಾ! ಸುಮಾರು ಎರಡೂವರೆ ಗಂಟೆಗೆ ಮುಂಚೆ ನೀನು ಎಲ್ಲಿದ್ದೆ ? ಎಂದು ಕೇಳಲಾಗಿ ಪಹರೆಯುವನು, ಮನೆಯಲ್ಲಿದ್ದೆನೆಂದು ಹೇಳಿದನು.

"ನಿನ್ನ ಮನೆಯಿರುವುದೆಲ್ಲಿ,,

,,ಈ ರಾಜನ ತೋಟದಲ್ಲಿ,,

,, ಈದಿನ ನೀನು ಏನನ್ನಾದರೂ ಕಳೆದು ಕೊಂಡಿರುವೆಯೋ?,,

,,ಹೌದು, ಮಹಾಶಯ, ಸೊಂಟದ ಪಟ್ಟಿಯನ್ನು ಕಳೆದುಕೊಂಡಿರುವೆನು.,,

,,ಯಾವಾಗ? ಹೇಗೆ ಕಳೆದುಕೊಂಡೆ ?,,

,,ನಾನು ಮಲಗಿದ್ದೆನು. ಆಗ ಒಬ್ಬ ಮನುಷ್ಯನು ಬಂದು ನನ್ನ ಬೆಲ್ಟು ಕೊಡುವಂತೆ ನನ್ನ ಹೆಂಡತಿಯನ್ನು ಕೇಳಿದನು. ,ಯಾವಬೆಲ್ಟು?, ಎಂದು ನನ್ನ ಹೆಂಡತಿಯು ಪ್ರಶ್ನೆಮಾಡಿದಳು.

,,ಇಲ್ಲಿನ ಪೋಲೀಸ್ ಸಾಹೇಬರು ಅದನ್ನು ಉಜ್ಜಿ ತೊಳೆದು ಮೆರುಗು ಮಾಡಬೇಕೆಂದು ಹೇಳಿದ್ದರು.,,

,,ಯಜಮಾನರು ಮಲಗಿರುವರು.,,

‘‘ಇಂದು ನನಗೆ ವಿರಾಮವಾಗಿರುವುದು. ಪಟ್ಟಿಯನ್ನು ತೆಗೆದುಕೊಂಡುಹೋಗಿ ಮೆರುಗು ಮಾಡಿಕೊಂಡು ಬಾ,, ಎಂದು ನಿಮ್ಮ ಯಜಮಾನರು ಹೇಳಿದ್ದರು.

ಈ ಸಮಯ ಬಿಟ್ಟರೆ ನನಗೆ ಅವಕಾಶವಿಲ್ಲ. ಈ ದಿನ ಸಾಯಂಕಾಲ ನನಗೆ ವಿಶೇಷ ಕೆಲಸವಿರುವುದು. ಈ ಹೊತ್ತು ಬಿಟ್ಟರೆ ಇನ್ನೊಂದು ತಿಂಗಳ ವರೆಗೂ ನಾನು ಈ ಕೆಲಸದಲ್ಲಿ ಕೈ ಹಾಕಲಾಗಲಾರದು. ಇಷ್ಟವಿರುವುದಾದರೆ, ಹುಡುಕಿ ಈಗಲೇ ತಂದುಕೊಡು, ಎರಡು ಗಂಟೆಯೆನ್ನುವುದರೊಳಗಾಗಿ ಮೆರುಗು ಮಾಡಿ ತಂದು ಕೊಡುವೆನು.

,ನನ್ನ ಹೆಂಡತಿಯು ಅದಕ್ಕೆ ಒಪ್ಪಿ ಸೊಂಟದ ಪಟ್ಟಿಯನ್ನು ಹುಡುಕಿ ಆತನಕೈಗೆ ಕೊಟ್ಟಳು.

‹ನೀನು ಯಾವಾಗಲಾದರೂ ನಿನ್ನ ಪಟ್ಟಿಯನ್ನು ಮೆರುಗು ಮಾಡಿ ಕೊಡುವಂತೆ ಹೇಳಿದ್ದೆಯೋ?, ಎಂದು ದೇವೇಂದ್ರನು ಕೇಳಿದ್ದಕ್ಕೆ, ಪಹರೆಯುವನು ‹ಹೇಳಿದ್ದುಂಟು, ಇದು ಮಾತ್ರ ಆಶ್ಚರ್ಯಕವಾಗಿದೆ' ಎಂದು ಉತ್ತರವಿತ್ತನು.

ದೇ—ಅದು ಹೇಗೆ?

ಪ—ನಾನು ನಿದ್ರೆಯಿಂದೆದ್ದ ಕೂಡಲೇ, ನನ್ನ ಹೆಂಡತಿಯು ನಡೆದುದೆಲ್ಲವನ್ನೂ ಸಾಂಗವಾಗಿ ತಿಳಿಸಿದಳು. ಕೆಲವು ದಿನಗಳ ಹಿಂದೆ ನನ್ನ ಬೆಲ್ಟನ್ನು ಪಾಲಿಷ್ (Polish) ಮಾಡಿಕೊಡುವಂತೆ ನೀಲೂ ಮೇಸ್ತ್ರಿಗೆ ಹೇಳಿದ್ದೆನು. ಆದ್ದರಿಂದ ಆತನೇ ಬಂದು ಬೆಲ್ಟನ್ನು ತೆಗೆದುಕೊಂಡು ಹೋಗಿರಬೇಕೆಂದು ತಿಳಿದೆನು.

ದೇ—ಆಮೇಲೆ.

ಪ—ನಾನು ಅಲ್ಲಿಂದೆದ್ದು ನೀಲೂ ಮೇಸ್ತ್ರಿಯಮನೆಗೆ ಹೋಗಿ, ಬೆಲ್ಟನ್ನು ಕೇಳಿದೆನು. ಅವನು ಚಮುಕಿತನಾಗಿ, ಬೆಲ್ಟಿನ ವಿಚಾರವೇ ಗೊತ್ತಿಲ್ಲವೆಂದು ಹೇಳಿದನು.

ದೇ—ಯಾವ ಮನುಷ್ಯನು ನನ್ನ ಹೆಂಡತಿಯಿಂದ ಪಟ್ಟಿಯನ್ನು ತೆಗೆದುಕೊಂಡು ಹೋದನೋ, ಆತನ ಚಹರೆಯು ಎಂಥದೆಂಬುದು ನನ್ನ ಹೆಂಡತಿಯು ಹೇಳಬಲ್ಲಳೇ?

ಪ—ಹೆಂಡತಿಯು ಹೇಳಿದ ಚಹರೆಯೆಲ್ಲವೂ ನೀಲೂ ಮೇಸ್ತ್ರಿಯನ್ನು ಹೋಲುತಿದ್ದರಿಂದಲೇ, ನಾನು, ನೀಲೂ ಮೇಸ್ತ್ರಿಯ ಹತ್ತಿರ ಹೋಗಿ ವಿಚಾರಿಸಿದ್ದು.

ದೇ—ಈಗ ನಿನ್ನ ಅಭಿಪ್ರಾಯವೇನು?

ಪ—ನನ್ನ ಅಭಿಪ್ರಾಯವೇನು? ನಾನು ನೀಲೂ ಮೋಸ್ತ್ರಿಯನ್ನು ಹತ್ತು ವರ್ಷಗಳಿಂದಲೂ ಬಲ್ಲೆನು, ಅವನು ಬಹುಯೋಗ್ಯನು. ಅವನು ಆಗ ಕಾಳಿಯ ಮೇಲೂ ಧರ್ಮದಮೇಲೂ ಆಣೆಯನ್ನು ಇಟ್ಟು, ಬೆಳ್ಳಿನ ವಿಚಾರವೇ ಗೊತ್ತಿಲ್ಲವೆಂದು ಹೇಳಲಾಗಿ, ನಾನು ಅದನ್ನು ಹೇಗೆ ನಂಬದಿರಲಿ?

ದೇ—ನಿನ್ನ ಹೆಂಡತಿಗೆ ಮೋಸಮಾಡಿ, ಯಾರೋ ಪಟ್ಟಿಯನ್ನು ಅಪಹರಿಸಿಕೊಂಡು ಹೋಗಿರಬೇಕೆಂದು ಬೊಧೆಯಾಯಿತೋ?

ಪ—ಅಹುದು, ಈಗ ನನಗೆ ಚೆನ್ನಾಗಿಯೂ ಬೋಧೆಯಾಯಿತು.

ಹನ್ನೆರಡನೆಯ ಸಂಧಿ.

(ಶಚೀಂದ್ರನ ಪ್ರವೇಶ)

ದೇವೇಂದ್ರ ವಿಜಯನು ಆ ಕೂಡಲೇ ಮೋಸಗಾರರನ್ನು ಅನುಸಂಧಾನ ಮಾಡುವುದಕ್ಕೆ ಸಿದ್ಧನಾಗಲು ತಕ್ಕ ಏರ್ಪಾಡನ್ನು ಮಾಡಲಾರಂಭಿಸಿದನು, ಶಚೀಂದ್ರನನ್ನು ನಿರೀಕ್ಷಿಸುತ್ತಾ ಹೆಚ್ಚಾಗಿ ಕಾಲವನ್ನು ಕಳೆವುದು ಶ್ರೇಯಯಸ್ಕರವಲ್ಲವೆಂದು ತಿಳಿದು, ದೇವೇಂದ್ರನು ಕಪಟ ವೇಷವನ್ನು ಧಾರಣಮಾಡಿ ಹೊರಗೆ ಹೊರಡಲು ಸಿದ್ಧನಾದ ಕೂಡಲೇ ಹೊರಗೆ ಯಾರೋ ಬಂದ ಶಬ್ದವಾಯಿತು. ಯಾರಿರಬಹುದೆಂದು ದೇವೇಂದ್ರನು ಊಹಿಸುವುದರೊಳಗಾಗಿಯೇ, ಶಚೀಂದ್ರನು ಅವನ ಮುಂದೆ ಬಂದು ನಿಂತಿದ್ದನು. ಆಕ್ಷ

ಣವೇ ದೇವೇಂದ್ರನು ಶಚೀಂದ್ರನ ಎರಡು ಕೈಗಳ ನ್ನೂ ಹಿಡಿದುಕೊಂಡು ಕೊಠಡಿಯೊಳಗೆ ಪ್ರವೇಶ ಮಾಡಿ 'ಶಚೀಂದ್ರ! ವಿಷಯವೇನು ? ನಿನಗೇನು ಸಂಭವಿಸಿತು ?, ಎಂದು ಕೇಳಿದನು.

ಶಚೀಂದ್ರ—ಇಲ್ಲಿಸವರೆಗೂ ನಾನು ಜ್ಞಾನತಪ್ಪಿ ಬಿದ್ದಿದ್ದೆನು ; ಯಾವನೋ ಒಬ್ಬನು ಹಿಂದಿನಿಂದ ಬಂದು ದೊಣ್ಣೆಯಿಂದ ಬಲವಾದ ಪೆಟ್ಟನ್ನು ಹೊಡೆದನು.

ದೇವೇಂದ್ರ—ಯಾವಾಗ ? ಎಲ್ಲಿ ?

ಶ—ಪದ್ಮಸರೋವರದ ದೊಡ್ಡರಸ್ತೆಯನ್ನು ಬಿಟ್ಟು ಕಾಲುದಾರಿಯಲ್ಲಿ ಹೋಗುತ್ತಿದ್ದಾಗ.

ದೇ—ಏಟು ಬಿದ್ದಿದ್ದೆಲ್ಲಿ ?

ಶ—ತಲೆಯ ಮೇಲೆ.

ದೇ—ಹೊಡೆದವನಾರು ಬಲ್ಲೆಯ ?

ಶ—ನಾನು ಅವನನ್ನು ನೋಡಲಿಲ್ಲ, ಆಗ ಅಲ್ಲಿ ಯಾರು ಯಾರು ಇದ್ದರೋ, ಅವರ ಬಾಯಿಂದ, ಹೊಡದವನು ಮುಸಲಮಾನನೆಂದು ಕೇಳಿದೆನು.

ದೇ—ಅವನು ಓಡಿಹೋದನೋ ?

ಶ—ಓಡಿಹೋದನು.

ದೇ—ಏಟುಬಿದ್ದಿರುವದು ಎಲ್ಲಿ ನೋಡೋಣ; ತಲೆಯೇನೂ ಒಡೆದು ಹೋಗಲಿಲ್ಲವಷ್ಟೇ ?

ಶ—ಇಲ್ಲ, ಮೇಲಿನ ಚರ್ಮವು ಕಿತ್ತುಹೋಗಿ ರಕ್ತವು ಬಂದಿರುವುದು.ಪೆಟ್ಟು ಬಲವಾದುದಲ್ಲ-ಡಾಕ್ಟರ್‌ಪ್ರಜೇಂದ್ರಲಾಲನ ಡಿಸ್ಪೆನ್ಸರಿಯ ಮುಂದೆ ಜ್ಞಾನತಪ್ಪಿ ಬಿದ್ದಿದ್ದೆನು; ಡಾಕ್ಟರು ಆಗ ಅಲ್ಲಿಯೇ ಇದ್ದನು. ಡಾಕ್ಟರು ನನ್ನ ಅವಸ್ಥೆಯನ್ನು ನೋಡಿ, ನನ್ನನ್ನು ಡಿಸ್ಪೆನ್ಸರಿಯೊಳಗೆ ತೆ

ಗೆದುಕೊಂಡು ಹೋಗಿ ತಲೆಯನ್ನು ತೊಳೆದು ರಕ್ತವು ಸೋ ರದಂತೆ ಔಷಧವನ್ನು ಹಾಕಿದನು. ಹೇಗಾದರೂ ಆಗಲಿ, ನಮ್ಮಕ್ಕತ್ತೆಗಾಗಿ ಹುಡುಕುವುದಕ್ಕೆ ಹೋಗಿ - ನಮ್ಮತ್ತೆ ಯೆಲ್ಲಿ ?

ದೇ—ಇಲ್ಲ, ಮನೆಯಲ್ಲಿಲ್ಲ.

ಶ—ಹಾಗೆಂದರೇನು?

ದೇ—ಠಕ್ಕರು ಒಬ್ಬ ಮನುಷ್ಯನನ್ನು ಕಳುಹಿಸಿ ಕೊಟ್ಟಿದ್ದರು· ನಿನ್ನ ಹೆಸರಿನಿಂದ ಕಾಗದವೊಂದು ಇಲ್ಲಿಗೆ ಬರೆಯಲ್ಪಟ್ಟಿದ್ದಿತು.

ಶ—ಹಾಗಾದರೆ ಅತ್ತೆಯು ಜುಮೆಲೆಯ ಕೈಗೆ ಸಿಕ್ಕಿ ಬಿದ್ದಳೇ?

ದೇ—ಜುಮೆಲೆ ಅಲ್ಲದೆ ಮತ್ತಾರು ಈ ಸಾಹಸವ ನ್ನು ಮಾಡಬಲ್ಲರು? ಮತ್ತಾರಿಗೆ ಈ ಧೈರ್ಯವುಂಟು? ಯಾರು ತಾನೇ ದೇವೇಂದ್ರನಲ್ಲಿ ಇಂತಹ ಚಾತುರ್ಯದ ಆಟವನ್ನು ಆಡಬಲ್ಲರು? ನಾನೀಗಲೇ ಹೊರಡುವೆನು.

ಶ—ಎಲ್ಲಿಗೆ?

ದೇ—ರಾಜನ ತೋಟದಲ್ಲಿರುವ ನೀಲೂ ಮೇಸ್ತ್ರಿ ಯ ಮನೆಗೆ.

ಶ—ಷಾವು ! ಅಲ್ಲಿಗೇತಕೆ? ಏನಾಗಿದೆ? ಏನಾಗಿದೆ ಯೆಂಬುದನ್ನು ನನಗೆ ಕೊಂಚ ತಿಳಿಸು.

ದೇ—ಪಹರೆಯವನಾದ ಅಬ್ದುಲ್ಲನ ಸೊಂಟದ ಪಟ್ಟಿ ಯೊಂದು ಗೈರ್‌ವಿಲೆಯಾಗಿದೆ, ಅದನ್ನು ಪಾಲಿಷ್ ಮಾಡುವು ದಕ್ಕೆನೀಲೂಮೇಸ್ತ್ರಿಗೆ ಕೊಡುವುದಾಗಿ ಹೇಳತ್ತು. ಅಬ್ದುಲ್ಲನಿ ಗೆ ಗೊತ್ತಿಲ್ಲದೆ, ಅವನ ಹೆಂಡತಿಯಿಂದ ನೀಲೂ ಅದನ್ನು ತೆಗೆ

ದುಕೊಂಡು ಹೋಗಿ ಈಗ ಕೇಳಿದರೆ ಇಲ್ಲವೆಂದು ಹೇಳು ವನು, ಈಗ ನಮಗೆ—

ದೇವೇಂದ್ರನ ಮಾತು ಪೂರೈಸುವುದರೊಳಗಾಗಿ ಹೊರಬಾಗಿಲಿನಲ್ಲಿ ಒಂದು ಶಬ್ದವಾಯಿತು. ಆ ಕೂಡಲೇ ಶ್ರೀಶಚಂದ್ರನು ಬಂದು ಕಾಗದವನ್ನು ಕೈಯಲ್ಲಿ ಹಿಡಿದುಕೊಂಡು ಬಂದು, ಅದನ್ನು ದೇವೇಂದ್ರನ ಕೈಯಲ್ಲಿ ಕೊಟ್ಟನು.

ಹದಿಮೂರನೆಯ ಸಂಧಿ.

(ಜಾಮೆಲೆಯ ಎರಡನೆಯ ಪತ್ರ)

ದೇವೇಂದ್ರವಿಜಯನು ಆ ಕಾಗದವನ್ನು ಬಿಚ್ಚಿ ಓದತೊಡಗಿದನು.

ಪತ್ರ

ದೇವೇಂದ್ರವಿಜಯ!

ನಿನ್ನ ಹೆಂಡತಿಯು ಮತ್ತೆ ನನ್ನ ಕೈಯಲ್ಲಿ ಸಿಕ್ಕಿಬಿದ್ದಿರುವಳು. ನಾನಾಕೆಯನ್ನು ಬಿಡುವುದೂ, ಬಿಡದಿರುವುದೂ, ನಿನ್ನಧೀನವಾಗಿರುವುದು. ಈಗ ಅವಳು ನನ್ನ ಔಷಧದ ಪ್ರಭಾವದಿಂದ ಅಚೇತನಳಾಗಿ ಬಿದ್ದಿರುವಳು. ಆಕೆಗೆ ಈ ಔಷಧದ ವೇಗವನ್ನು ಹೋಗಲಾಡಿಸಲೋಸುಗ ಬೇರೊಂದು ಔಷಧವನ್ನು ಸಕಾಲದಲ್ಲಿ ಕೊಡುವುದಾದರೆ ನಿನ್ನ ಹೆಂಡತಿಯ ಪ್ರಾಣಕ್ಕೇನೂ ಅಪಾಯವಿರುವುದಿಲ್ಲ. ಆಕೆಯ ಜೀವನ ಮರಣಗಳು ನಿನ್ನ ಕೈಯಲ್ಲಿರುವವು; ಅವಳು ಬದುಕುವಳೋ ಅಥವಾ ಸಾಯುವಳೋ ಅದನ್ನು ನೀನು ಬಲ್ಲೆ.

ಬಂದುವೇಳೆ ನಾನು ಅಜ್ಞಾನಾವಸ್ಥೆಯಲ್ಲಿರುವಅವಳ ನ್ನು ನಿನ್ನ ಕೈಯಲ್ಲಿ ಸಮರ್ಪಿಸುವುದಾದರೆ ಯಾವ ಡಾಕ್ಟರೇ ಆಗಲಿ, ಯಾವ ವೈದ್ಯನೇ ಆಗಲಿ, ಬಹು ಮಾತಿನಿಂದೇನು? ಅಶ್ವಿನೀದೇವತೆಗಳೇ ಆಗಲಿ, ಆಕೆಯನ್ನು ಬದುಕಿಸಿಕೊಳ್ಳಲಾರರು. ಆಕೆಯನ್ನು ಪರೀಕ್ಷಿಸಿದವರೆಲ್ಲರೂ ಆಕೆಯನ್ನು ಮೃತಳೆಂದೇ ಹೇಳುವರು; ಆದರೆ, ಆಕೆಯು ಬದುಕಿರುವಳು

ನಿನ್ನಲ್ಲಿ ನನ್ನದೊಂದು ಮಾತಿರುವುದು, ನನ್ನ ವಿಷಯವನ್ನು ನೀನು ಚೆನ್ನಾಗಿಯೂ ಸರಿಪಡಿಸಿಕೊಂಡಿರುವೆ, ನನ್ನ ಮಾತೇನೆಂಬುದನ್ನೂ ನೀನು ಬಲ್ಲೆ. ನನ್ನ ಹೃದಯದಲ್ಲಿ ಆಶೆ ಮತ್ತು ನಿರಾಶೆ ಇವೆರಡೂ ಸೇರಿಕೊಂಡು ನನ್ನನ್ನು ಸಂಧ್ಯ ಮಾಡುತಲಿರುವವು.

ಈದಿನ ರಾತ್ರಿ ಹನ್ನೊಂದು ಗಂಟೆಗೆ ಸರಿಯಾಗಿ ವಾಲಿಗಂಜಿನ ತೋಟದ ಮನೆಯಲ್ಲಿ ನನ್ನನ್ನು ನೀನು ನೋಡುವೆ, ಲಾಹಿಡಿಯುವರ ತೋಟದ ಪಶ್ಚಿಮ ದಿಕ್ಕಿನಲ್ಲಿರುವ ಮನೆಯ ಬಳಿ ಕಾಣಿಸಿಕೊಳ್ಳುವೆನು, ನೀನು ಅಲ್ಲಿಗೆ ಬರುವಾಗ ಸಂಗಡ ಯಾವ ವಿಧವಾದ ಅಸ್ತ್ರಶಸ್ತ್ರಗಳನ್ನೂ ತರಬಾರದು. ನನ್ನನ್ನು ನೋಡಿದಕೂಡಲೆ, ಯಾರ ಮಾತನ್ನೂ ಆಡದೆ ನನ್ನ ಹಿಂದೆಯೇ ಬರಬೇಕು. ನಾನು ನಿನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುವೆನೋ, ಅಲ್ಲಿಗೆ ನೀನು ಬರಲು ಸಿದ್ಧನಾಗಿರಬೇಕು. ನಿನ್ನ ಹೆಂಡತಿಯನ್ನು ನಾನು ಬಿಡಿಸುವಾಗ, ನಮ್ಮಿಬ್ಬರಿಗೂ ಒಂದು ವಿಧವಾದ ಕರಾರಾಗಬೇಕೆಂದು ನಾನು ಇಷ್ಟಪಟ್ಟಿರುವೆನು.

ನೀನು ಬರುವಾಗ ಯಾರನ್ನಾದರೂ ಕರೆದು ಕೊಂಡು ಬರುವುದಾದರೆ ನನ್ನನ್ನು ನೀನು ನೋಡಲಾರೆ ನೀನು ನನ್ನನ್ನು ಪೋಲೀಸಿಗೆ ಹಿಡಿದುಕೊಡುವುದಾಗಲಿ,ಮತ್ತಾವ ವಿಧವಾದ ತೊಂದರೆಯನ್ನುಂಟುಮಾಡುವುದಾಗಲಿ, ಯೋಚಿಸದೆ, ನಿನ್ನ ಹೆಂಡತಿಯು ನಿಸ್ಸಹಾಯಳಾಗಿ ವಿಶೇಷವಾದ ಯಾತನೆಯನ್ನು ಅನುಭವಿಸಿ ಉರಿದು ಉರಿದು ಸಾಯುವಳು. ಯಾರೂ ಆಕೆಯನ್ನು ಬದುಕಿಸಿಕೊಳ್ಳಲಾರರು, ಇಷ್ಟರಲ್ಲಿಯೇ ನೀನು ನನ್ನನ್ನು ಕೊಲ್ಲುವುದಾದರೆ ನಿನ್ನ ಹೆಂಡತಿಯು ಖಂಡಿತವಾಗಿ ಸಾಯುವಳು, ಇದನ್ನು ಮಾತ್ರ ನೀನು ನಿಜವಾಗಿಯೂ ತಿಳಿ.

ಯಾವ ಸ್ಥಳದಲ್ಲಿ ನಾವಿಬ್ಬರೂ ಸಂಧಿಸಬೇಕೆಂದು ಬರೆದಿರುವೆನೋ, ಅಲ್ಲಿ ಆ ಕಾಲಕ್ಕೆ ಸರಿಯಾಗಿ ನಾನೊಬ್ಬಳೇ ಬಂದು ಸೇರುವೆನು. ನಿನ್ನೊಡನೆ ನಾನು ಯಾವ ವಿಷಯವನ್ನು ಆಡುವೆನೋ, ಅದನ್ನು ನೀನು ಸಮ್ಮತಿಸದೇ ಹೋದೆಯಾದರೆ, ಮುಂದಿನ ಫಲವನ್ನು ಕುರಿತು ನಾನು ತಿಳಿಸಬೇಕಾದುದಿಲ್ಲ.ನಿನಗೆ ಯಾವ ವಿಧದಲ್ಲಿಯೂ ಅನಿಷ್ಟವುಂಟಾಗಲಾರದೆಂದು ನಾನು ಪ್ರತಿಜ್ಞೆಮಾಡಿ ಹೇಳುವೆನು.ನೀನು ಒಬ್ಬನೇ ಬಂದೆನೆಂದು ಯೋಚಿಸಬೇಕಾದುದೇನೂ ಇರುವುದಿಲ್ಲ. ನಾನು ನಿನ್ನಲ್ಲಿ ಮಾಡುವ ಪ್ರಾರ್ಥನೆಯು ಮುಗಿದ ಬಳಿಕ ನೀನು ಒಪ್ಪಿದರೂ ಸರಿ,ಒಪ್ಪಿದಿದ್ದರೂ ಸರಿ, ನಿನ್ನ ಮನೆಗೆ ನೀನು ನಿರಾತಂಕವಾಗಿ ಹೊರಟು ಹೋಗಬಹುದು.ನೀನು ಮನೆಗೆ ಹೋಗಿ ಸೇರುವ ವರೆಗೂ ಜುಮೆಲೆಯು ನಿನ್ನ ವಿಷಯದಲ್ಲಿ ಕೆಟ್ಟದ್ದನ್ನು ಎಣಿಸುವುದಿಲ್ಲ. ಇಷ್ಟೇಕೆ,ಮತ್ತಾವ ಶತ್ರುವಿನ ದೆಸೆಯಿಂದ ನಿನ್ನ ಒಂದು ಕೂದಲಿಗೆ ಅಪಾಯ ಸಂಭವಿಸುವುದಾದರೂ, ಜುಮೆಲೆಯು ಪ್ರಾಣವ

ನಾದರೂ ಒಪ್ಪಿಸಿ, ಅದರಿಂದ ನಿನ್ನನ್ನು ಉದ್ಧಾರ ಮಾಡುವಳು.

ನೀನೇ ಈಗ ನಿನ್ನ ಹೆಂಡತಿಯ ಪ್ರಾಣವನ್ನು ರಕ್ಷಿಸಿಕೊ, ಹೇಗೆ ರಕ್ಷಿಸಿಕೊಳ್ಳಬೇಕೆಂಬುದನ್ನು ನಾನು ಈಗ ಹೇಳಲಾರೆ. ರಾತ್ರಿ ಹನ್ನೊಂದು ಗಂಟೆಗೆ ಸರಿಯಾಗಿ ನನ್ನನ್ನು ನೋಡಿದರೆ ನಾನು ಹೇಳುವೆನು.

ಜ್ಞಾಪಕವಿರಲಿ, ನಿನ್ನ ಹೆಂಡತಿಯು ಆರಾಳುದ್ದ ನೀರಿನಲ್ಲಿ ಬಿದ್ದಿರುವಳು.

ನೀನು ನನ್ನನ್ನು ಬಲ್ಲೆ! ಜಾವೆಲ.

ಹದಿನಾಲ್ಕನೆಯ ಸಂಧಿ.

ಈರೀತಿಯಾಗಿ ಬರೆದಿದ್ದ ಕಾಗದವನ್ನು ಓದಿದ ಕೂಡಲೆ ದೇವೇಂದ್ರನ ಮುಖಮಂಡಲವು ಕಂಗೆಟ್ಟಿತು. ಮುಖದಲ್ಲಿ ಕೊಂಚವಾದರೂ ರಸವೆಂಬುದು ಇರಲಿಲ್ಲ. ದೇವೇಂದ್ರನು ಶ್ರೀಶನನ್ನು ನೋಡಿ, ‹ಶ್ರೀಶ, ಈ ಕಾಗದವು ನಿನಗೆಲ್ಲಿ ಸಿಕ್ಕಿತು ?ಎಂದು ಕೇಳಿದನು.

ಶ್ರೀಶ—ಮನೆಯ ಮುಂದುಗಡೆ.

ದೇ—-ಯಾರು ಕೊಟ್ಟರು ?

ಶ್ರೀ—ಒಬ್ಬ ಚಿಕ್ಕಹುಡುಗನು.

ದೇ—ಅವನಿಗೆ ಸಿಕ್ಕಿದ ಬಗೆ ಹೇಗೆ, ಕೇಳಿದೆಯ?

ಶ್ರೀ—ಕೇಳಿದೆ, ಒಬ್ಬ ಮುದುಕಿಯು ಬಂದು ಇದನ್ನು ಈ ಮನೆಗೆ ಕೊಡೆಂದು ಹೇಳಿ, ಅವನ ಕೈಯಲ್ಲಿ ಬಂದು ಕಳ್ಳರೂಪಾಯನ್ನು ಇಟ್ಟು ಹೊರಟು ಹೋದಳಂತೆ.

ದೇ—ಬಲ್ಲೆಯದು, ಈಗ ನೀನು ಹೊರಡು.

ಶ್ರೀಶಚಂದ್ರನು ಹೊರಟು ಹೋದನು.

'ಈ ಕಾಗದವನ್ನು ಓದು, ಎಂದು ದೇವೇಂದ್ರನು ಹೇಳಲಾಗಿ, ಶಚೀಂದ್ರನು ಕಾಗದವನ್ನು ತೆಗೆದುಕೊಂಡು, ತನ್ನೊಳಗೆ ತಾನೇ ಓದಿ 'ಮಾವ, ಹಾಗಾದರೆ ತಾವು ಅಲ್ಲಿಗೆ ಹೋಗುವಿರಾ' ಎಂದು ಕೇಳಿದನು.

ದೇ—ಅಹುದು, ಹೋಗದೇ ಇದ್ದರೆ ಆದೀತೆ.

ಶ—ಹೋಗಿ ಏನು ಮಾಡುವಿರಿ?

,ಹೋಗದೇ ಮಾಡುವುದೇನು?

,ಹೋಗಿ ತಾನೇ ಮಾಡುವುದೇನು?

,ಜುಮೆಲೆಯು ಕಾಗದದಲ್ಲಿ ನಿಜವಾದುದನ್ನೇ ಬರೆದಿರುವಳು,

,ಇದರ ಸತ್ಯವೂ, ಆಕೆಯು ಉಳಿದ ಸತ್ಯದಂತೆಯೋ,

,ಈ ಕಾಗದದಲ್ಲಿ ಅವಳು ಸತ್ಯವನ್ನೇ ಬರೆದಿರುವಳೆಂದು ನನಗೆ ನಂಬುಗೆಯುಂಟು,

,ಹಾಗಾದರೆ ತಾವು ಅಲ್ಲಿಗೆ ಹೋಗುವಿರಿ?

,ಹೌದು, ಹೋಗುವೆನು,

,ಅವಳು ತಮ್ಮನ್ನು ಕೊಲ್ಲುವಳೆಂದು ಪ್ರತಿಜ್ಞೆ ಮಾಡಿಲ್ಲವೇ?

,ಅಹುದು, ಅದನ್ನು ನಾನು ಬಲ್ಲೆನು, ನನ್ನ ಮನದಲ್ಲಿರುವುದು,

,ತಮ್ಮೊಬ್ಬರನ್ನೇ ಅಲ್ಲ, ಅತ್ತೆಯನ್ನೂ, ಶ್ರೀಶನನ್ನೂ ಮತ್ತು ನನ್ನನ್ನೂ,

,ನಿಜ,

,ಮಾವ! ಇದು ಜುಮೆಲೆಯ ಹೊಸತಂತ್ರವು,

ಇದರಿಂದ ಅತ್ತೆಯನ್ನೂ ತಮ್ಮನ್ನೂ ಮೊದಲು ಕೊಲ್ಲ ಬೇಕೆಂದಿರುವಳು.

‹ಇದನ್ನು ನಾನು ನಂಬುವೆನು,

‹ಹಾಗಿದ್ದರೂ ತಾವುಹೋಗುವಿರಿ ?

‹ಹಾಗಿದ್ದರೂ ಹೋಗುವೆನು.

‹ನನ್ನನ್ನು ಜತೆಯಲ್ಲಿ ಕರೆದುಕೊಂಡು ಹೊಗುವು ದಿಲ್ಲವೇ ?

‹ಇಲ್ಲ.

‹ಅದೇತಕೆ?

ಕರೆದುಕೊಡುಹೋದರೆ ನನ್ನಮನೋಭಿಪ್ರಾಯುವ ನ್ನು ಪೂರ್ಣವಾಗಿ ನೆರವೇರಿಸಿಕೊಳ್ಳಲು ಆಗಲಾರದು.

‹ಅಭಿಪ್ರಾಯುವೇನು ?

ಕಾಲಕ್ರಮದಲ್ಲಿ ಎಲ್ಲವೂ ಗೊತ್ತಾಗುವುದು, ಈಗ ಇ ಷ್ಟು ಸಾಕು; ಇದು ಮಾತ್ರ ನಿಸಗೆ ತಿಳದಿರಲಿ, ಡಾಕಿನಿಯು ನಿ ನ್ನನ್ನು ಬರಮಾಡಿಕೊಳ್ಳುವುದು, ಅವಳಮೃತ್ಯುವನ್ನು ಬ ರಮಾಡಿಕೊಂಡಂತೆಯೇ ಸರಿ, ಅವಳಿಗೇನೋ ವಿನಾಶಕಾಲ ವು ಬಂದೊದಗಿದೆ.

‹ಮಾಮ, ತಾವು ಅವಳಮಾತಿಗೆ ಸಮ್ಮತಪಡುವಿರಾ ?

‹ವಿಷಯುವೇನೆಂಬುದನ್ನು ಮೊದಲು ತಿಳದುಕೊಳ್ಳು ವೆನು.

ಅನಂತರ ವಿಷಯುವನ್ನು ಜಿಜ್ಞಾಸೆಮಾಡುವೆನು.

‹ನಾನು ಈಗ ಏನು ಮಾಡಬೇಕು,

‘ಏನೂ ಇಲ್ಲ,

‹ಬಹಳ ಕಷ್ಟವಾದ ಕೆಲಸ.

‹ನಾನು ಅದನ್ನು ಬಲ್ಲೆ - ತಾಳು, ಹೇಳುವೆನು.

‹ಹೇಳೋಣಾಗಲಿ.

‹ಸಾಯಂಕಾಲವಾಗಿ ಒಂದು ಗಂಟೆಯಾದಮೇಲೆ, ನೀನು ಭಿಕ್ಷುಕನಂತೆ ವೇಷವನ್ನು ಹಾಕಿಕೊಂಡು ತೋಟದೊಳಗೆ ಪ್ರವೇಶಮಾಡು, ಅವಳು ಯಾವ ಮನೆಯ ಹತ್ತಿರ ಬರಬೇಕೆಂದು ಹೇಳಿರುವಳೋ, ಆ ಮನೆಯ ಹತ್ತಿರವಿರುವ ಯಾವುದಾದರೊಂದು ಗಿಡದಮರೆಯಲ್ಲಿ ಅವಿತುಕೊಂಡಿರು, ಯಾರು ಏನುಮಾಡುವರು, ಯಾರು ಎಲ್ಲಿಗೆ ಹೋಗುವರು, ಎಂಬುದನ್ನು ನೋಡುತ್ತಿರು, ಯಾರೂ ನಿನ್ನನ್ನು ನೋಡದಂತೆ ಎಚ್ಚರಿಕೆಯಿಂದಿರು, ನಾನು ರಾತ್ರಿ ಹನ್ನೊಂದುಗಂಟೆಗೆ ಅಲ್ಲಿಗೆಹೋಗುವೆನು.

‹ಆಯುಧವನ್ನು ತೆಗೆದುಕೊಳ್ಳದೇ ಅಲ್ಲಿಗೆ ಹೋಗುವಿರೇನು ?

‹ಆಯುಧವನ್ನು ತೆಗೆದುಕೊಳ್ಳದೇ ನಿಮ್ಮ ಮಾವನು ಯಾವಾಗಲೂ ಮನೆಯಿಂದ ಹೊರಗೆ ಹೊರಟವನೇ ಅಲ್ಲ.—ಹೊರಡುವವನೂಅಲ್ಲ, ನಾನು ಜುಮೆಲೆಯ ಹಿಂದೆ ಯಾವಾಗ ಹೊರಡುವೆನೋ, ಆಗ ನೀನೂ ನನ್ನಹಿಂದೆ ಗೋಚರವಾಗದಂತೆ ಹೊರಟು ಬರುತ್ತಿರು. ನೀನು ಮಾತ್ರ ಬಹಳ ಎಚ್ಚರಿಕೆಯಿಂದ ಬರುತ್ತಿರಬೇಕು, ಯಾರೂ ನಿನ್ನನ್ನು ನೋಡುವುದಕ್ಕೆ ಆಸ್ಪದವಾಗಬಾರದು. ನಾನು ಅಲ್ಲಿಗೆ ಹೋಗುವಾಗ ನನ್ನ ಜೇಬಿನಲ್ಲಿ ಭಾರವಲ್ಲದ ಧಾನ್ಯವನ್ನು ತುಂಬಿಕೊಂಡು ಹೋಗುವೆನು, ನಾನು ಹೋಗುವ ಸ್ಥಳದಲ್ಲೆಲ್ಲಾ ದಾರಿಯಿಂದುದ್ದಕ್ಕೂ ಕಾಳಗನ್ನು ಚೆಲ್ಲಿಕೊಂಡು ಹೋಗುವೆನು. ನೀನು ಆ ಧಾನ್ಯಗಳ ಗುರುತನ್ನು ಹಿಡಿದುಕೊಂಡೇ ನನ್ನನ್ನು ಅನುಸರಿಸಿಕೊಂಡು ಬರುತ್ತಿರು.

'ಬೇಷ್ ಬೇಷ್.

'ಜುಮೊಲೆಯು ಬಹಳ ಯೋಚನಾಪರಳು, ಬಹಳ ಚತುರಳು, ಆವಳು ತನ್ನ ಮಾರ್ಗವನ್ನು ಮೊದಲು ಪರಿಷ್ಕಾರ ಮಾಡಿಕೊಳ್ಳದೆ, ಅದರಲ್ಲಿ ಒಂದು ಹಜ್ಜೆಯನ್ನೂ ಇಡಳು, ತನಗೆ ಯಾವ ವಿಧವಾದ ವಿಪತ್ತೂ ಬರುವುದಿಲ್ಲವೆಂದು ಮೊದಲು ಸ್ಥಿರಮಾಡಿಕೊಂಡೇ, ಅನಂತರ ನನಗೆ ಹೇಳಿ ಕಳುಹಿಸಿರುವಳು. ನನ್ನ ಕೈಯಲ್ಲಿ ಒಂದುಸಲ ಸಿಕ್ಕಿದ ಮೇಲೆ ಉಳಿಬಾಳಲ್ಲವೆಂದು ಅವಳು ಚೆನ್ನಾಗಿಯೂ ಬಲ್ಲಳು. ನಮ್ಮಲ್ಲಿ ಕೊಂಚವೂ ದಯೆ ಯೆಂಬುದಿಲ್ಲವೆಂದು ಆಕೆಯು ತಿಳಿದಿರುವಳು. ಅವಳು ಆತ್ಮರಕ್ಷಣೆಗಾಗಿ ಎಷ್ಟು ಬಂದೋಬಸ್ತು ಮಾಡಿಟ್ಟು ಕೊಂಡಿರುವಳು ಅವಳಿಗೆ ಯಾರು ಸಹಾಯಕರು, ಎಂಬುದನ್ನು ನೀನೇ ನೋಡುವೆ. ನಾನು ಹೇಳಿದಹಾಗೆ ಧಾನ್ಯವನ್ನು ಗುರುತಿಸಿಕೊಂಡು ಬಂದರೆ ನಾನು ಹೋಗುವ ಸ್ಥಳಗಳು ನಿನಗೆ ಗೊತ್ತಾಗುವುವು. ನಾನು ಎಲ್ಲಿಯಾದರೂ ನಿಲ್ಲುವುದಾದರೆ ಅಲ್ಲಿ ನಿನ್ನನ್ನು ನಾನು ನಿರೀಕ್ಷಿಸಿಕೊಂಡಿರುವೆನೆಂದು ನೀನು ತಿಳಿದಿರು, ಅಲ್ಲಿ ನಾನು ನಿನಗೆ ಇಂಗಿತಗಳನ್ನು ತಿಳಿಸದೇ ಅಲ್ಲಿಂದ ಮುಂದಕ್ಕೆ ಹೊರಡುವುದಕ್ಕಾಗಲಾರದು.

' ಯಾವ ರೀತಿಯಲ್ಲಿ ಇಂಗಿತವನ್ನು ತೋರಿಸುವಿರಿ?

'ಯಾವಾಗ ನಾನು ಮೇಲೆ ಮೇಲೆ ಎರಡುಸಲ ಪಿಸ್ತೂಲನ್ನು ಹಾರಿಸುವೆನೋ, ಆಗ ನೀನು ನನ್ನ ಹತ್ತಿರ ಬರಬೇಕು. ನೀನು ಪಿಸ್ತೂಲಿನ ಶಬ್ದವನ್ನು ಎಲ್ಲಿನ ವರೆಗೂ ಕೇಳುವುದಿಲ್ಲವೋ, ಅಲ್ಲಿನ ವರೆಗೂ ನಿನ್ನಿಂದೇನೂ ಕೆಲ

ಸ ವಿರುವುದಿಲ್ಲವಾದುದರಿಂದ ನೀನು ಇದ್ದಲ್ಲಿಯೇ ನಿರೀಕ್ಷಿಸ ಕೊಂಡಿರಬೇಕು.

ಸರಿಸರಿ, ನಾನು ತಮ್ಮ ಅಪ್ಪಣೆಯಂತೆಯೇ ಕೆಲಸ ಮಾಡುವೆನು.

ಶಚೀಂದ್ರ! ನಮ್ಮ ಜೀವಿತ ಕಾಲದಲ್ಲಿ ಇದು ಸಹಜ ವಾದ ಕೆಲಸವಾಗಿ ಕಾಣುವುದಿಲ್ಲ. ಈ ಉದ್ಯಮವು ವಿಫಲವಾಗುವುದಾದರೆ, ನಮ್ಮಗಳ ಮೃತ್ಯುವು ಅನಿವಾ ರ್ಯವಾದುದು. ನಾವು ಇಂದಿನವರೆಗೂ ಎಷ್ಟೋ ಕೆಲಸದಲ್ಲಿ ಪ್ರವೃತ್ತರಾಗಿರುವೆವು, ಆದರೆ ಇದರಲ್ಲಿರುವಷ್ಟು ಶ್ರಮವು ಸಾಹಸವೂ ಕೌಶಲವೂ ಮತ್ತಾವುದರಲ್ಲಿಯೂ ಇರುವು ದಿಲ್ಲ. ನಿಮ್ಮತ್ತೆಯು ಜೀವನವು ಈಗ ಬಹಳ ಕಷ್ಟಕ್ಕೆ ಸಿಕ್ಕಿ ಬಿದ್ದಿರುವುದು. ಈ ರಾತ್ರಿಯ ವ್ಯಾಪಾರದಲ್ಲಿ ನ ಮ್ಮಗಳ ಪ್ರಾಣಗಳು ಉಳಿಯುವುವೋ ಇಲ್ಲವೋ ಸಂದೇ ಹ ವಾಗಿರುವುದು. ಇದಲ್ಲದೆ, ಆಕೆಯು ನಮ್ಮಗಳ ತಲೆಗ ಳನ್ನಾದರೂ ಉರುಳಿಸಿ ತನ್ನ ಕಾರ್ಯವನ್ನು ಸ್ವಚ್ಛಂದವಾಗಿ ನೆರವೇರಿಸಿಕೊಳ್ಳಬೇಕೆಂದಿರುವಳು. ಶಚಿ, ಆ ದಾನವ ಸ್ವರೂಪಿಣಿಯಾದ ನಾರಿಯು ನನ್ನನ್ನು ಒಂದುವೇಳೆ ಸೋ ಲಿಸುವುದಾದರೆ ನನ್ನ ಪ್ರಾಣವನ್ನೇ ತೆಗೆಯುವುದಾದರೆ, ನೀ ನು ಹತ್ತಿರ ಇದ್ದರೆ, ನನ್ನನ್ನು ಬದುಕಿಸಲು ಯತ್ನಮಾ ಡುವೆ. ಆದುದರಿಂದ ನಿನ್ನ ಕೈಯ್ಯಲ್ಲಿ ಸಮಸ್ತ ಕರ್ತವ್ಯಗ ಳನ್ನೂ ಅರ್ಪಿಸಿರುವೆನು. ಹೊರಡು, ಶಚೀಂದ್ರ! ಈಶ್ವರ ನು ನಿನಗೆ ಒಳ್ಳೆಯದನ್ನು ಮಾಡಲಿ, ಹೊರಡು ಶಚೀಂದ್ರ. ನನ ಮಾತು ಮಾತ್ರ ನಿನಗೆ ಚನ್ನಾಗಿಯೂ ಜ್ಞಾಪಕದಲ್ಲಿರಲಿ

ಅದನ್ನು ಚೆನ್ನಾಗಿ ನೆರವೇರಿಸಿ ಕೊಂಡುಬಾ, ಬಂದುವೇಳೆ ಈಜನ್ಮದಲ್ಲಿ ನನಗೂ ನಿನಗೂ ಪರಸ್ಪರ ದರ್ಶನವಾಗದೇ ಹೋದಲ್ಲಿ, ಸರ್ವಶಕ್ತಿವಂತನಾದ ಪರಮೇಶ್ವರನಿರುವನು. ಅವನು ನಿನಗೆ ರಕ್ಷಣೆಯನ್ನುಂಟು ಮಾಡುವನು, ಅವನು ನಿನಗೆ ಸಹಾಯಕನಾಗುವನು, ಅವನು ನಿನಗೆ ಮಂಗಳವನ್ನುಂಟು ಮಾಡುವನು - ಹೊರಡು, ಶಚೀಂದ್ರ ! ಹೊರಡು.

ಶಚೀಂದ್ರನು ಬಾಡಿದಮುಖವುಳ್ಳವನಾಗಿ, ಮಾತನ್ನು ಹೆಚ್ಚಾಗಿ ಬೆಳೆಯಿಸದೇ, ಕಣ್ಣುಗಳಲ್ಲಿ ಕಾಣಿಸಿಕೊಂಡ ಕಂಬನಿಗಳನ್ನು ಅಲ್ಲಿಯೇ ತಡೆದುಕೊಂಡು, ಅಲ್ಲಿಂದೆದ್ದು ಹೊರಟು ಹೋದನು.

ಸಂಪೂರ್ಣಂ

ಚಿತ್ರಗುಪ್ತನ ದಫ್ತರ

ನಂ ೬.

ಮಾಯಾವಿನಿಯ ಪರಿಣಾಮ

ವಿದ್ವಾನ್ ಬಾಲಸರಸ್ವತಿಯವರಿಂದ

ವಿರಚಿತವಾದುದು

ಪ್ರಥಮ ಮುದ್ರಣ ೧೦೦೦ ಪ್ರತಿಗಳು.

ವಿದ್ವಾನ್ ಬಾಲಸರಸ್ವತಿ

ಸರಸ್ವತೀ ಪೀಠಂ

ಬೆಂಗಳೂರು ಸಿಟಿ.

೧ ನೇ ಜೂನ್] ರಿಜಿಸ್ಟರ್ಡ್ ಕಾಪಿರೈಟ್ [ಕ್ರಯ ೨ ಆಣೆ

ಕೆ. ಎಸ್. ಕೃಷ್ಣಯ್ಯರ್ ಬಿ. ಎ. ಯವರ
ಐರಿಷ್ ಮುದ್ರಾಲಯ
ಬೆಂಗಳೂರು ಸಿಟಿ.

ಜಯತು ಭಗವಾನ್.

ಮಾಯಾವಿನಿಯ ಪರಿಣಾಮ

೬ನೆಯ ಸಂಧಿ.

ಅದೇ ದಿನದ ರಾತ್ರಿ ಹನ್ನೆರಡು ಗಂಟೆಯಾದ ಬಳಿಕ ದೇವೇಂದ್ರವಿಜಯನು ಮನೆಯಿಂದ ಹೊರಗೆ ಹೊರಟನು. ಲಾಹಿಡಿಯವರ ತೋಟದ ಬಳಿ ಬಂದಾಗ, ಸುಮಾರು ಅರ್ಧ ಗಂಟೆ ಕಳೆದು ಹೋಯಿತು. ಹನ್ನ[illegible] ಗಂಟೆ [illegible] ವೃದಕ್ಕ ಬರು[illegible] [illegible]ರಲಿಲ್ಲ. ದೇವೇಂದ್ರವಿಜಯನು ತೋಟದ ಪಶ್ಚಿಮ ಪಕ್ಕದಲ್ಲಿ ವೃಕ್ಷಗಳು ನಿಬಿಡವಾಗಿದ್ದ ಸ್ಥಳದ ಸಮೀಪದಲ್ಲಿ ಬಂದು ನಿಂತಿದ್ದನು. ಆಗ ಅಲ್ಲಿ ಯಾರೂ ಇರಲಿಲ್ಲ.

ಆ ಸ್ಥಳವಾದರೋ ಕೇವಲ ನಿರ್ಜನವಾಗಿಯೂ ನಿಶ್ಶಬ್ದವಾಗಿಯೂ ಇದ್ದಿತು. ಒಂದೊಂದು ವೇಳೆ ನಿದ್ರೆಯಿಂದೆದ್ದ ಪಕ್ಷಿಗಳು ರೆಕ್ಕೆಯನ್ನು ಬಡಿದುಕೊಳ್ಳುವ ಶಬ್ದ, ಅಲ್ಲಲ್ಲಿ ಒಣಗಿದ ಎಲೆಗಳು ಕೆಳಗೆ ಬೀಳುವಾಗ ಉಂಟಾಗುತ್ತಿದ್ದ ಮರಮರ ಶಬ್ದ, ಆಗಾಗ ದೂರದಿಂದ ಕೇಳಬರುತ್ತಿದ್ದ ನಾಯಿಗಳ ಗೋಳ್ ಎಂಬ ಶಬ್ದ, ಇವುಗಳು ಮಾತ್ರ ಪ್ರಕೃತಿಯ ಪ್ರಶಾಂತತೆಗೆ ಭಂಗವನ್ನುಂಟುಮಾಡುತ್ತಿದ್ದುವು. ವಾಯುವು ಹಿತಕರವಾಗಿಯೂ ನಿಶ್ಶಬ್ದವಾಗಿಯೂ ಮೃದುವಾಗಿಯೂ ಬೀಸುತ್ತಿದ್ದಿತು. ರಾತ್ರಿಯಾದರೋ ಮಧುರವಾಗಿಯೂ, ಪ್ರಕಾಶಮಾನನಾದ ಚಂದ್ರನಿಂದ

ವಿಭೂಷಿತವಾಗಿಯೂ ಪ್ರಶಾಂತವಾಗಿಯೂ ಕಾಣ್ಬರುತ್ತಿದ್ದಿತು. ವಸಂತಕಾಲದ ರಾತ್ರಿಯ ಮನೋಹರವಾದ ನೀಲಾಕಾಶದಲ್ಲಿ ಚಂದ್ರನು ಅಮೃತ ಕಿರಣಗಳನ್ನು ಬೀರುತ ಮೆಲ್ಲಮೆಲ್ಲನೆ ಬಿಳಿಯ ಮೇಘಗಳ ಖಂಡಗಳ ಮಧ್ಯದಲ್ಲಿ ಆಟವಾಡಿಕೊಂಡು ಎಲ್ಲಿಯೋ ತೇಲಿಹೋಗುತಿದ್ದನು.

ಶಚೀಂದ್ರನು ಒಂದು ಗಿಡದ ನೆರಳಿನಲ್ಲಿ ಅವಿತುಕೊಂಡಿದ್ದನು. ದೇವೇಂದ್ರವಿಜಯನ ತೀಕ್ಷ್ಣವಾದ ದೃಷ್ಟಿಯು ಅವನ ಮೇಲೆ ಬಿದ್ದಿತು ; ಶಚೀಂದ್ರನೂ ತನ್ನ ಮಾವನನ್ನು ನೋಡಿದನು. ಅವರಿಬ್ಬರೂ ಒಬ್ಬರನ್ನೊಬ್ಬರು ನೋಡಿದರೇ ಹೊರತು, ಯಾವ ಮಾತನ್ನೂ ಆಡಲಿಲ್ಲ ; ಮಾತನಾಡುವುದಕ್ಕೆ ಆವಶ್ಯಕತೆಯೂ ಇರಲಿಲ್ಲ.

ಬಳಿಕ ಹನ್ನೊಂದು ಗಂಟೆಯ ಸಮಯಕ್ಕೆ ಸರಿಯಾಗಿ, ದೇವೇಂದ್ರವಿಜಯನು ಬೆಳ್ದಿಂಗಳಲ್ಲಿ ಒಂದು ರಮಣೀಮೂರ್ತಿಯು ದೂರದಿಂದ ತನ್ನ ಇದಿರಿಗೆ ಬರುತ್ತಿದ್ದುದನ್ನು ಕಂಡನು. ಆ ಮೂರ್ತಿಯು ತಾನಿದ್ದಲ್ಲಿಗೆ ಬೇಗಬೇಗನೆ ಬರುತ್ತಿದ್ದಿತು. ಆ ಮೂರ್ತಿಯು ಮತ್ತಾರೂ ಅಲ್ಲ - ಪಿಶಾಚಿಯಾದ ಜುಮೆಲೆಯೇ ಎಂದು ದೇವೇಂದ್ರವಿಜಯನು ತಿಳಿದುಕೊಂಡನು. ಜುಮೆಲೆಯು ದೂರದಿಂದಲೇ ದೇವೇಂದ್ರವಿಜಯನು ಬಂದಿರುವುದನ್ನು ಕಂಡು "ದೇವೇಂದ್ರವಿಜಯ ! ನೀನು ಬಂದಿರುವೆಯಾ ?" ಎಂದು ಕೇಳಿದಳು.

ದೇವೇಂದ್ರ—'ಅಹುದು ನಾನು ಬಂದಿರುವೆನು'

ಜುಮೆಲೆ—ನಿನ್ನ ಮನಸ್ಸಿನಲ್ಲಿ ಕೊಂಚವೂ ಭಯವಾಗಲಿಲ್ಲವೇ ?

ದೇವೇಂದ್ರ—'ಇಲ್ಲ,ನಾನು ಯಾರಿಗೆ ಹೆದರಬೇಕು?'

ಜುಮೆಲೆ—'ಹಾಗೆಂದರೇನು ? ನನಗೆ ?'

ದೇವೇಂದ್ರ—'ನಿನಗೆ ! ಇಲ್ಲ, ಎಂದಿಗೂ ಇಲ್ಲ.'

ಜುಮೆಲೆ—'ನಿನ್ನ ಮನಸ್ಸಿನಲ್ಲಿ ಯಾವ ಭಯವೂ ಇಲ್ಲವೆ'

ದೇವೇಂದ್ರ—'ಇಲ್ಲ.'

ಜುಮೆಲೆ—'ನೀನೇನೋ ಭಯಪಡುವುದಿಲ್ಲ. ನಿನ್ನ ವಿಷಯ ಹಾಗಿರಲಿ ; ನೀನು ಮತ್ತೊಬ್ಬರ ವಿಷಯವಾಗಿ ಭಯಪಡುತ್ತಿಲ್ಲವೇ ? ಹೇಳು ನೋಡೋಣ.

ದೇವೇಂದ್ರ—ಜುಮೆಲೆ ! ನಾನು ನಿನಗೆ ಭಯಪಡುವುದಿಲ್ಲ.

ಜುಮೆಲೆ—'ನಿನ್ನ ಹತ್ತಿರ ಆಯುಧವೇನಾದರೂ ಇರುವುದೋ ?.

ದೇವೇಂದ್ರ—' ನೀನು ಆಯುಧವನ್ನು ನಿಷೇಧಮಾಡಿರುವೆಯಷ್ಟೇ!'

ಜುಮೆಲೆ—ನನ್ನ ಪ್ರಶ್ನೆಗೆ ಸರಿಯಾದ ಉತ್ತರಬರಲಿಲ್ಲ

ದೇವೇಂದ್ರ—'ಸರಿಯಾದ ಉತ್ತರವನ್ನೇ ಕೊಟ್ಟಿರುವೆನು?

ಜುಮೆಲೆ—'ನೀನು ಸಶಸ್ತ್ರನೋ?'

ದೇವೇಂದ್ರ —'ನೀನು?'

ಜುಮೆಲೆ—'ಆಹುದು?'

ದೇವೇಂದ್ರ—'ಹಾಗಾದರೆ ನನ್ನನ್ನೂ ಹಾಗೆಯೇ ತಿಳಿ.

ಜುಮೆಲೆ—' ಹಾಗಾದರೆ ನೀನು ನನ್ನ ಮಾತಿನಂತೆ ಕೆಲಸ ಮಾಡಲಿಲ್ಲ'

ದೇವೇಂದ್ರ—'ನಿನ್ನ ಇಷ್ಟದಂತೆ ನಿನ್ನನ್ನು ನೋಡಲು ಬಂದಿರುವೆನು. ಆಯುಧವಿರಲಿ, ಇಲ್ಲದಿರಲಿ, ಅದನ್ನು ಕಟ್ಟಿಕೊಂಡು ನಿನಗಾಗುವುದೇನು ? ಆಯುಧವು ನನ್ನ ಕೈಯಲ್ಲಿರುವುದನ್ನು ನೀನು ನೋಡಿದಾಗ ನನ್ನನ್ನು ಪ್ರಶ್ನೆಮಾಡು'

ಜುಮೆಲೆ—'ನೀನು ನಿನ್ನ ಸಂಗಡ ಆಯುಧವನ್ನು ತಂದಿರುವುದೇತಕೆ ?'

ದೇವೇಂದ್ರ—'ಸಮಯಬಿದ್ದಾಗ ಪ್ರಯೋಜನವಾಗಲೆಂದು'.

ಜುಮೆಲೆ—'ವಿವೇಕವಿಲ್ಲದವನೇ !'

ದೇವೇಂದ್ರ—'ನನ್ನ ಅವಿವೇಕವನ್ನು ನೀನೇನು ಕಂಡೆ?

ಜುಮೆಲೆ—'ನನ್ನ ಅಪ್ಪಣೆಯಂತೆ ನೀನು ಕೆಲಸಮಾಡದೇ ಹೋದಲ್ಲಿ, ನಿನ್ನ ಹೆಂಡತಿಯು ಸಾಯುವಳು ಎಂದು ನಾನು ಮೊದಲೇ ನಿನಗೆ ಹೇಳಿರಲಿಲ್ಲವೇ?'

ದೇವೇಂದ್ರ—'ಹೌದು, ಹೇಳಿದ್ದೆ'

ಜುಮೆಲೆ—'ಹಾಗಾದರೆ ನಿನ್ನ ಬುದ್ಧಿಯಲ್ಲಿ ಭ್ರಾಂತಿಯುಂಟಾಗಲು ಕಾರಣವೇನು? ನಾನು ಈಗಲೇ ಇಲ್ಲಿಂದ ಹೊರಟು ಹೋಗುವುದಾದರೆ ನೀನು ಏನು ಮಾಡಬಲ್ಲೆ'

ದೇವೇಂದ್ರ—'ನೀನು ಮನಸ್ಸು ಮಾಡಿದರೂ, ಇಲ್ಲಿಂದ ಹೊರಟು ಹೋಗಲಾರೆ'

ಜುಮೆಲೆ—'ನೀನೇನು ಮಾಡುವೆ?'

ದೇವೇಂದ್ರ—'ನೀನು ಮುಂದಕ್ಕೆ ಒಂದು ಹೆಜ್ಜೆಯನ್ನಿಡುವುದಾದರೂ, ನಾನು ನಿನ್ನನ್ನು ಕೊಂದುಬಿಡುವೆನು.

ಜುಮೆಲೆ—'ಮೂಢ, ಆವ್ಹೇಳೆ?'

ದೇವೇಂದ್ರ---'ಅದೇನು?'

ಜುಮಾಲೆ---'ನಿನ್ನ ಬುದ್ಧಿಯು ನಷ್ಟವಾದಂತೆ ತೋರುವುದು. ನನ್ನನ್ನು ನೀನು ಕೊಲ್ಲುವುದಾದರೆ, ನಿನ್ನ ಪ್ರೀತಿಪಾತ್ರಳಾದ ಹೆಂಡತಿಯನ್ನು ನೀನು ಕೊಂದಂತಾಗುವುದು ಜ್ಞಾಪಕವಿರುವುದೋ?

ದೇವೇಂದ್ರ---'ಆದರೂ ನಾನು ನಿನ್ನನ್ನು ಕೊಲ್ಲುವೆನು.'

ಎರಡನೆಯ ಸಂಧಿ.

(ತೋಟದ ಮಧ್ಯದಲ್ಲಿ)

"ನಿನಗೆ ಇಷ್ಟ ಬಂದಂತೆ ಮಾಡು. ನಿನ್ನ ಪಾದಮೂಲದಲ್ಲಿ-ನೀನು ಗುಪ್ತವಾಗಿಟ್ಟಿರುವ ಆಯುಧದ ಸಮೀಪದಲ್ಲಿ ನನ್ನ ಶರೀರವನ್ನು ಸಮರ್ಪಣೆಮಾಡಿರುವೆನು. ನೀನು ಯಾವ ಆಯುಧವನ್ನು ಕರದಲ್ಲಿ ಹಿಡಿದು ಬಂದಿರುವೆಯೋ, ಅದರಿಂದ ನನ್ನ ಎದೆಯನ್ನು ಸೀಳಿಬಿಡು! ನಿಷ್ಠುರ! ಒಬ್ಬ ಹೆಂಗಸಿನ ಮೃದುವಾದ ಎದೆಯನ್ನು ಶಸ್ತ್ರದಿಂದ ಸೀಳಲು ನೀನು ಕೊಂಚವಾದರೂ ಹೆದರಬೇಡ. ಅದರಿಂದ ನಿನಗೆ ಸಂತೋಷವುಂಟಾಗುವುದಾದರೆ, ಆ ಕೆಲಸವನ್ನೆಂದಿಗೂ ಮಾಡದಿರಬೇಡ. ನಿನ್ನ ಉದ್ದೇಶವನ್ನು ನೆರವೇರಿಸು. ನನ್ನ ಎದೆಯನ್ನು ನಿನ್ನಿದಿರಿನಲ್ಲಿ ಬಿಡುತ್ತೇನೆ.

ಈ ರೀತಿಯಾಗಿ ಹೇಳಿ, ಜುಮಾಲೆಯು ತನ್ನ ಸೀರೆಯ ಮೇಲುಸೆರಗನ್ನು ತೆಗೆದುಹಾಕಿ ತಾನು ತೊಟ್ಟಿದ್ದ ಕುಪ್ಪಸವನ್ನು ಬಿಚ್ಚಿ ದೇವೇಂದ್ರನ ಇದಿರಿಗೆ ತನ್ನ ಎದೆಯನ್ನು ತಂದೊಡ್ಡಿದಳು.

ಪಾಠಕ ಮಹಾಶಯ, ಈ ನೋಟವು ಕಲ್ಪನಾತೀತವೆಂಬುದನ್ನು ಒಂದು ಸಲ ಯೋಚಿಸಿ ನೋಡಿರಿ. ಮೇಲ್ಭಾಗದಲ್ಲಿ ನೀಲವಾದ ಅಪಾರವಾದ ನಿರ್ಮಲಾಕಾಶದಲ್ಲಿ ಆನಂದಕರನಾದ ಚಂದ್ರನು ತನ್ನ ಜಗನ್ಮೋಹನಾಸ್ತ್ರವೆನಿಸಿದ ಕಿರಣಗಳನ್ನು ಎಡೆಬಿಡದೆ ಪ್ರಸರಿಸುತ್ತಿರುವನು. ನಕ್ಷತ್ರಗಳು ದೂರದಲ್ಲಿದ್ದುಕೊಂಡು ಮಿನುಗುತ್ತಿರುವುವು. ಗಿಡಗಳ ಮೇಲ್ಭಾಗದಲ್ಲಿರುವ ಎಲೆಗಳು ಮಂದಮಾರುತಾಂದೋಳಿತಗಳಾಗಿ ನಲಿದಾಡುತ್ತಿರುವುವು; ಹಿಂದೆ, ಮುಂದೆ, ಎರಡು ಪಕ್ಕಗಳಲ್ಲಿಯೂ, ಮೇಲೆ, ಕೆಳಗೆ, ಎಲ್ಲಿನೋಡಿದರೂ ನಿಶ್ಶಬ್ದ. ಇಂತಹ ನಿಶ್ಶಬ್ದತೆಯಲ್ಲಿ ಶ್ಯಾಮಲತೆಯು ಭೂಮಿಯ ಮೇಲೆ ಬಿದ್ದು ಒದ್ದಾಡುತಿರುವಳು. ಕೆಂಪು, ಬಿಳುಪು, ಹಳದಿ ರಂಗಿನ ಹೂಗಳು ಅಲ್ಲಲ್ಲಿ ವಿಕಾಸೋನ್ಮುಖಗಳಾಗಿದ್ದುವು. ಅಂತಹ ನಿರ್ಜನವಾಗಿಯೂ, ನಿಶ್ಶಬ್ದವಾಗಿಯೂ, ಇರುವ ತೋಟದ ಮಧ್ಯದಲ್ಲಿ ದೇವೇಂದ್ರವಿಜಯನು ಅವಾಕ್ಕಾಗಿ ನಿಂತಿರುವನು. ಆತನ ಇದಿರಿಗೆ ಜುಮೇಲಿಯು ತನ್ನ ಸೆರಗನ್ನು ತೆಗೆದುಹಾಕಿ ಅವಿಚ್ಛಿನ್ನವಾದ ಬೆಳ್ದಿಂಗಳಲ್ಲಿ ತನ್ನ ಪೀನೋನ್ನತಗಳಾದ ಕುಚಗಳನ್ನು ಚಾಚಿದಳು.

ದೇವೇಂದ್ರನು ಮನಕರಗಿದವನಾಗಿ ಎರಡು ಹೆಜ್ಜೆ ಹಿಂದಕ್ಕೆ ಸರಿದನು. ಆತನ ಸರ್ವಾಂಗವೆಲ್ಲವೂ ನಡುಗಿತು, ಆತನಪ್ರತಿಯೊಂದು ನರದಲ್ಲಿಯೂ ಕುದಿಯುತಿರುವ ರಕ್ತವುನದಿಯ ವೇಗದಲ್ಲಿ ಹರಿಯಲಾರಂಭಿಸಿತು. ದೇವೇಂದ್ರನು ಏನು ಮಾಡುವುದಕ್ಕೂ ತೋಚದವನಾಗಿ ಸುಮ್ಮನೆ ನಿಂತುಬಿಟ್ಟನು.

ಜುಮೇಲಿಯು, ದೇವೇಂದ್ರನು ಈ ರೀತಿಯಲ್ಲಿ ದಿಕ್ಕು

ತೋರದೆ ಸ್ತಬ್ಧನಾಗಿ ನಿಂತಿರುವುದನ್ನು ನೋಡಿ, ‹ದೇವೇಂದ್ರ! ಮೌನವೇತಕೆ ? ಆಯುಧವನ್ನು ಹೊರಗೆ ತೆಗೆ, ಇದೇನಾಶ್ಚರ್ಯ ! ಕೊಲ್ಲುವುದಕ್ಕೆ ಕೈಯೇ ಬಾರದೆ ! ನಾನು ನಿನ್ನನ್ನು ಎಷ್ಟು ಕಠಿಣಹೃದಯನೆಂದು ತಿಳಿದುಕೊಂಡಿದ್ದೆನೋ, ಅಷ್ಟು ಕಠಿಣನು ನೀನಲ್ಲ. ಹೀಗಿರುವಾಗ ಸಂಗಡ ಆಯುಧವನ್ನು ನೀನು ತಂದುದೇತಕೆ ? ಎಂದು ಕೇಳಲಾಗಿ, ದೇವೇಂದ್ರನು, ‹ಸಮಯ ಬಿದ್ದಾಗ ಪ್ರಯೋಜನವಾಗಲೆಂದು, ಎಂದು ಉತ್ತರವಿತ್ತನು.

‹‹ನಿನ್ನಲ್ಲಿರುವ ಆಯುಧಗಳನ್ನು ನನಗೆ ಕೊಡಬಲ್ಲೆಯ?

‹‹ಕೊಡಲಾರೆ,,

ಹಾಗಾದರೆ ನನಗೆ ನಿನ್ನೊಡನೆ ಯಾವ ಪ್ರಸ್ತಾಪವೂ ಇರುವುದಿಲ್ಲ ; ಪರಸ್ಪರ ಯಾವ ಸಂಧಿಯೂ ಆಗಲಾರದು.

"ತೊಂದರೆಯೇನು ?"

ದೇವೇಂದ್ರ ! ಹಾಗಾದರೆ ನೀನು ನನ್ನಲ್ಲಿ ವೈರವನ್ನು ಸಾಧಿಸುವೆಯೋ ?

ಇಲ್ಲ, ನಾನು ನನ್ನ ಕಾರ್ಯಸಿದ್ಧಿಗೋಸ್ಕರ ಇಲ್ಲಿಗೆ ಬಂದಿರುವೆನು.

ದೇವೇಂದ್ರವಿಜಯನು ಇವೇ ಮೊದಲಾದ ಮಾತುಗಳನ್ನು ಗಂಭೀರಸ್ವರದಿಂದ ಹೇಳಿದನು. ಒಂದು ಕ್ಷಣಕಾಲ ಪೂರ್ವದಲ್ಲಿ ಪ್ರಕೃತಿಯು ಆವರೀತಿಯಾದ ಸ್ಥೈರ್ಯವನ್ನೂ ಗಾಂಭೀರ್ಯವನ್ನೂ ಧಾರಣಮಾಡಿದ್ದಿತೋ, ದೇವೇಂದ್ರನೂ ಅದೇರೀತಿಯಲ್ಲಿಯೇ ಕಾಣಿಸಿಕೊಳ್ಳುತಿದ್ದನು.

ಜುಮೇಲೆಯು ಇದನ್ನು ವಿಶದವಾಗಿ ತಿಳಿದವಳಾಗಿ ಮನದಲ್ಲಿ ಅಸ್ಥಿರಳಾಗುತ ಬಂದಳು ; ಆದರೆ ತನ್ನ ಅಂತರ್ಭಾವಾ

ದ ಮನೋಭಾವವನ್ನು ಮಾತ್ರ ಹೊರಗೆ ಪ್ರಕಾಶವಗಾಡಲಿಲ್ಲ

ಜುಮೆಲಯು ಮಾತನಾಡಿದಳು—ದೇವೇಂದ್ರ, ಮ ತ್ತೊಂದು ಮಾತಿರುವುದು, ನೀನು ಈಗ ನನ್ನ ಬಳಿ ಬಂದು ಪ್ರತಿಜ್ಞೆಯನ್ನು ಮಾಡುವೆಯ ?

ಅದೇನು ಹೇಳು ?

ನೀನು ಈ ದಿನ ನಿನ್ನ ಆಯುಧವನ್ನು ಉಪಯೋಗಿಸುವುದಿಲ್ಲವಷ್ಟೆ ?

ಕಾರಣವಿಲ್ಲದಿದ್ದರೆ ಉಪಯೋಗಿಸುವುದಿಲ್ಲ.

ನೀನು ನಿನ್ನ ಆಯುಧವನ್ನು ಯಾತಕ್ಕಾಗಿ ಉಪಯೋಗಿಸಬೇಕೆಂದಿರುವೆ ?

ನಿನ್ನ ಕಾಗದದಲ್ಲಿ ಏನೇನು ಸಂಗತಿಗಳು ಬರೆಯಲ್ಪಟ್ಟಿರುವುವೋ, ಅವುಗಳಲ್ಲಿಯ ಮನಸ್ಸಿಗೆ ನೋವು ಬಾರದಿರುವುದಕ್ಕಾಗಿ.

ಇಷ್ಟಕ್ಕಾಗಿಯೋ ?

ಇಷ್ಟೇ ಅಲ್ಲದೆ ಇನ್ನೂ ಕಾರಣವಿರುವುದು.

ಅದೇನು ?

ನನ್ನ ಹೆಂಡತಿಯ ಪ್ರಾಣಗಳನ್ನು ರಕ್ಷಿಸಬೇಕೆಂದು.

ಪ್ರಯೋಜನವಾಗಲಾರದು, ನೀನು ಅಸ್ತ್ರ ವ್ಯವಹಾರದಿಂದ ಖಂಡಿತವಾಗಿಯೂ ನಿನ್ನ ಹೆಂಡತಿಯ ಪ್ರಾಣಗಳನ್ನು ರಕ್ಷಿಸಿಕೊಳ್ಳಲಾರೆ.

ಹಾಗಾದರೆ ನಾನು ಅಸ್ತ್ರವನ್ನು ಉಪಯೋಗಿಸುವುದಿಲ್ಲ.

ನಿಶ್ಚಯವೋ ?

ನಿಶ್ಚಯ.

ಮೂರನೆಯ ಸಂಧಿ.

(ಭಿಕ್ಷುಕ ವೇಷಧಾರಿ)

ಜ್ಯೂಮೆಲ್—ದೇವೇಂದ್ರ, ನಿನ್ನ ಜತೆಯಲ್ಲಿ ಯಾರಾದರೂ ಬಂದಿರುವರೇ ?

ದೇವೇಂದ್ರ—ಯಾರೂ ಇಲ್ಲ, ನಿನ್ನ ಮಾತಿನಂತೆಯೇ ನಾನು ಕೆಲಸಮಾಡಿರುವೆನು.

ಜ್ಯೂಮೆಲ್—ಶಚೀಂದ್ರನಿಗೆ ಈ ಸಂಗತಿಗಳಾವುವೂ ಗೊತ್ತಿಲ್ಲವೋ ?

ದೇವೇಂದ್ರ—ಅವನು ಹಾಸಿಗೆಯ ಮೇಲೆ ಮಲಗಿರುವನೆಂದು ನೀನೇ ಬಲ್ಲೆ.

ಜ್ಯೂಮೆಲ್—ಅಹುದು, ಬಲ್ಲೆ.

ದೇವೇಂದ್ರ—ಹಾಗಾದರೆ ಕೇಳಿದ್ದಕ್ಕೆ ಕಾರಣವೇನು?

ಜ್ಯೂಮೆಲ್—ನೀನು ಇಲ್ಲಿಗೆ ಏಕಾಕಿಯಾಗಿ ಬಂದಿರುವೆ ಎಂಬುದನ್ನು ನಾನು ಕಿಂಚಿತ್ತಾದರೂ ನಂಬುವುದಿಲ್ಲ.

ದೇ—ನಂಬದಿರಲು ಕಾರಣವೇನು ? ನಾನೊಬ್ಬನೇ ಬಂದಿರುವೆನು.

ಜ್ಯೂ—ದೇವೇಂದ್ರ, ನೀನು ಎಷ್ಟೇ ಬುದ್ಧಿವಂತನಾದರೂ, ಎಷ್ಟೇ ಯುಕ್ತಿವಂತನಾದರೂ, ಜ್ಯೂಮೆಲಗೆ ಮಾತ್ರ ತಿಳಿಯದಂತೆ ಮರೆಮಾಚಲಾರೆ; ರೆಪ್ಪೆ ಹಾಕುವುದರೊಳಗಾಗಿಯೇ ನಾನು ನಿನ್ನನ್ನು ಸುಟ್ಟು ಬೂದಿಮಾಡಿಬಿಡಬಲ್ಲೆನು.

ದೇ—ಮಾಡೇನು, ಬೇಡವೆಂದವರಾರು ? ನನ್ನ ವಿಷಯದಲ್ಲಿ ನೀನು ದಯೆಯನ್ನು ತೋರಿಸಲು ಕಾರಣವೇನಿರುವುದು?

ಜು—ನನಗೆ ಅದು ಇಷ್ಟವಿಲ್ಲ, ಅದಕ್ಕೆ ನಾನು ಸಿದ್ಧಳಾಗಿಯೂ ಬಂದಿಲ್ಲ.

ದೇ—ಜುಮೆಲೆ, ವ್ಯರ್ಥವಾಗಿ ಕಾಲಹರಣ ಮಾಡುವುದರಿಂದ ಅನರ್ಥವುಂಟಾಗುವುದು.

ಜು—(ನಕ್ಕು) ಅಯ್ಯೋ ಪಾಪ !

ದೇ—ಜುಮೆಲೆ, ಕೇಳು—ನನ್ನ ಕಾಲವನ್ನು ವ್ಯರ್ಥವಾಗಿ ಕಳೆಯಿಸುತ್ತಿರುವೆ; ನೀನು ನನ್ನನ್ನು ಆವುದೋ ಒಂದುಸ್ಥಳಕ್ಕೆ ಕರೆದುಕೊಂಡು ಹೋಗುವೆನೆಂದು ನನಗೆ ಕಾಗದ ಬರೆದಿರಲಿಲ್ಲವೇ ?

ಜು—ಬರೆದಿದ್ದೆನು.

ದೇ—ಎಲ್ಲಿಗೆ ?

ಜು—ಎಲ್ಲಿಗೂ ಇಲ್ಲ; (ಬೆಟ್ಟವನ್ನು ತೋರಿಸುತ) ಸಮೀಪದಲ್ಲಿಯೇ ಏಕಾಂತಸ್ಥಳದ ಮಹಡಿಯೊಂದು ಕಾಣುತ್ತದೆಯಷ್ಟೆ, ಅದರಲ್ಲಿಯೇ ನಿನ್ನ ಹೆಂಡತಿ ರೇವತಿಯು ಇರುವಳು, ನೋಡುವೆಯು ?

ದೇ—ನಡೆ, ನೋಡೋಣ.

ಜು—ನೀನು ಮತ್ತೊಂದು ಪ್ರತಿಜ್ಞೆಯನ್ನು ಮಾಡಬೇಕು.

ದೇ—ಅದೇನು ಹೇಳು?

ಜು—ನನ್ನ ಅನುಮತಿಯಿಲ್ಲದೆ ನೀನು ನಿನ್ನ ಹೆಂಡತಿಯನ್ನು ಮುಟ್ಟಲೂ ಕೂಡದು.

ದೇ—ಹಾಗೂ ಆಗಲಿ, ನಾನು ಅದಕ್ಕೆ ಸಮ್ಮತಿಸುವೆನು ನಡೆ.

ಜು—ಯಥೇಷ್ಟ.

ದೇ—ಹಾಗಾದರೆ ನಡೆ.

ಜು—ಬಾ,

*   *   *   *

ಜುಮೆಲಿಯು ಹೀಗೆ ಹೇಳಿ, ದೇವೇಂದ್ರನನ್ನು ಜತೆಯಲ್ಲಿಯೇ ಕರೆದುಕೊಂಡು ಉದ್ಯಾನವನ್ನು ದಾಟಿ ಮನೆಯ ಕಡೆಗೆ ತೆರಳಿದಳು.

ಆ ಮುಜಡೀ ಮನೆಯು ಉದ್ಯಾನದ ಹೊರಗಿರದೇ ಉದ್ಯಾನದ ಪೂರ್ವಭಾಗದಲ್ಲಿದ್ದಿತು, ಆ ಮನೆಯು ಬಹು ಕಾಲದಿಂದಲೂ ರಿಪೇರಿ (Repairs) ಎಂಬುದನ್ನೇ ಕಾಣದೆ ಅನೇಕ ಸ್ಥಳಗಳಲ್ಲಿ ಜೀರ್ಣವಾಗಿಯೂ, ಕೆಲವೆಡೆಗಳಲ್ಲಿ ಪತನೋನ್ಮುಖವಾಗಿಯೂ ಇದ್ದಿತು.

ದೇವೇಂದ್ರವಿಜಯ ಮತ್ತು ಜುಮೇಲಿಯಾ ಇವರಿಬ್ಬರೂ ಯಾವಾಗ ಮನೆಯ ಕಡೆಗೆ ತೆರಳಿದರೋ, ಆಗ ಭಿಕ್ಷುಕ ವೇಷಧಾರಿಯಾದ ಶಚೀಂದ್ರನು ಗಿಡಗಳ ನೆರಳಿನಿಂದ ಹೊರಗೆ ಹೊರಟನು; ಹೊರಟವನು, ಅವರಿಬ್ಬರೂ ಯಾವ ದಾರಿಯಿಂದ ಯಾವ ದಿಕ್ಕಿನ ಕಡೆಗೆ ಹೊರಡುತ್ತಿರುವರೆಂಬುದನ್ನು ರೆಪ್ಪೆಹಾಕದೆ ಒಂದೇ ದೃಷ್ಟಿಯಿಂದ ನೋಡಲಾರಂಭಿಸಿದನು. ಈ ರೀತಿಯಲ್ಲಿ ಸುಮಾರು ಐದು ನಿಮಿಷಗಳು ಕಳೆದವು.

ಶಚೀಂದ್ರನು ಅವರನ್ನು ಹಿಂಬಾಲಿಸಿ ಹೊರಡಲು ಮುಂದಕ್ಕೆ ಒಂದೆರಡು ಹೆಜ್ಜೆಯನ್ನಿಡಲು ಯತ್ನಮಾಡುವಷ್ಟರೊಳಗಾಗಿ ಮತ್ತೊಂದು ವ್ಯಕ್ತಿಯು ತನಗೆ ಅಭಿಮುಖವಾಗಿ ಬರುತಿದ್ದುದನ್ನು ನೋಡಿ, ತನ್ನ ತಚ್ಛಿದ್ರವಾದ ಬೊಂತೆಯನ್ನು ಗಿಡದ ಕೆಳಗೆ ಹಾಸಿ ಅದರಮೇಲೆ ಮಲಗಿ

ಕಪಟ ನಿದ್ರೆಯನ್ನು ನಟಿಸಲಾರಂಭಿಸಿದನು. ವೈಮರೆತು ನಿದ್ರೆಮಾಡುವರಂತೆ, ಶಚೀಂದ್ರನು ಮಧ್ಯೇ ಮಧ್ಯೇ ಗೊರಿಕೆಯನ್ನು ಹಾಕುತ ವೃಕ್ಷಗಳ ಕೊಂಬೆನಗಳಲ್ಲಿ ಸುಖವಾಗಿ ನಿದ್ರಿಸುತ್ತಿದ್ದ ಪಕ್ಷಿಗಳ ಸ್ವಾಸ್ಥ್ಯಕ್ಕೆ ಭಂಗವನ್ನುಂಟುಮಾಡ ತೊಡಗಿದನು.

ಆ ಅಪರಿಚಿತ ವ್ಯಕ್ತಿಯು ಬೇಗನೆ ಶಚೀಂದ್ರನಿದ್ದಲ್ಲಿಗೆ ಬಂದು, ಆತನ ಬೆನ್ನಿನಮೇಲೆ ಬಲವಾದದೊಂದು ಏಟನ್ನು ಕೊಟ್ಟನು.

ಶಚೀಂದ್ರನು ಕಣ್ಣು ಮುಚ್ಚಿದವನಾಗಿಯೇ ಮತ್ತೊಂದು ಕಡೆಗೆ ಹೊರಳಿದನು. ಆತನ ಬೆನ್ನಿನ ಮೇಲೆ ಮತ್ತೊಂದು ಏಟುಬಿದ್ದಿತು. ಶಚೀಂದ್ರನು ಮುಚ್ಚಿದ ಕಣ್ಣು ಮುಚ್ಚಿದವನಾಗಿಯೇ, ನೀನಾರಪ್ಪಾ, ದಾರಿ ಹಿಡಿದು ಹೋಗಬಾರದೇನಪ್ಪಾ, ಎಂದು ಅಸ್ಫುಟವಾಗಿ ಮಾತನಾಡಿದನು.

ಪುನಃ ಏಟು ಮೊದಲಿಗಿಂತಲೂ ಅಧಿಕವಾಗಿ ಬೀಳಲಾರಂಭವಾಯಿತು. ಇದನ್ನು ತಡೆಯಲಾರದೆ, ಶಚೀಂದ್ರನು, ಪೋಲೀಸಿನವನೇನಪ್ಪಾ, ನಾನು ಎಲ್ಲಿಯೋ ಬಂದು ಗಿಡದ ಕೆಳಗೆ ಬಂದೇ ಪಕ್ಕದಲ್ಲಿ ಮಲಗಿ ನಿದ್ರೆಮಾಡುತಿದ್ದರೂ, ನಿನ್ನ ಕೋಮಲವಾದ ಪ್ರಾಣಗಳು ಅದನ್ನು ಸಹಿಸಲೊಲ್ಲದೆಂದು ತೋರುವುದು. ನೀನು ಮೇಲೆ ಮೇಲೆ ಹೊಡೆಯುತ್ತಿರುವುದು ನೋಡಿದರೆ, ನಾನೇನೋ ತಪ್ಪುಮಾಡಿದವನಂತೆ ಕಾಣುತ್ತದೆ, ನನ್ನಲ್ಲಿ ಅದೇನು ತಪ್ಪು ನೀನುಕಂಡದ್ದು ? ಎಂದನು.

ಆಗಂತುಕ—ಎಲೋ, ನಾನು ಪೋಲೀಸ್ ಗೀಲೀಸ್ನವನಲ್ಲ.

ಶಚೀಂದ್ರ—ಹಾಗದರೆ ನೀನಾರಪ್ಪಾ ! ನೀನು ಉಪ ದೇವತೆಯಲ್ಲವಷ್ಟೆ ? ಅಯ್ಯಾ ! ನಾನು ಬಡವ, ಒಂದುಕಡೆ ಬಿದ್ದುಕೊಂಡಿರುವೆನು. ನನ್ನನ್ನು ಇಲ್ಲಿಂದ ಏತಕ್ಕೆ ಎಬ್ಬಿ ಸುವೆ ? ನನ್ನ ನಿದ್ರೆಗೆ ಭಂಗವನ್ನುಂಟುಮಾಡುವುದರಿಂದ ನಿ ನಗೆ ಬಂದ ಪುರುಷಾರ್ಥವೇನು ?

ಆಗಂತುಕ—ನಾನು ನಿನ್ನನ್ನು ಒಂದು ವಿಷಯವನ್ನು ಕೇಳುವುದಕ್ಕೆ ಬಂದೆನು.

ಶಚೀಂದ್ರ—ನನ್ನನ್ನು ಕೇಳುವುದೇನಿದೆ ? ಈ ತೋ ಟದಲ್ಲಿ ಭಾರಿ ಭಾರಿ ಮರಗಳು ಬೆಳೆದಿವೆ, ಬೇಕಾಗಿದ್ದರೆ ಅ ವುಗಳನ್ನು ಕೇಳು. ನೀನು ಬಂದ ದಾರಿಯನ್ನು ಹಿಡಿದುಕೊಂ ಡು ತೆರಳು.

ಆಗಂತುಕ—ನಾನು ದಾರಿತಪ್ಪಿ ಇತ್ತಕಡೆ ಬಂದು ಬಿಟ್ಟೆನು. ನನಗೆ ನೀನು ದಾರಿಯನ್ನು ತೋರಿಸಿಕೊಟ್ಟರೆ ಮಹೋಪಕಾರಮಾಡಿದಂತಾಗುವುದು.

ಶಚೀಂದ್ರ—ನೆಟ್ಟಗೆ ದಾರಿ ಹಿಡಿದುಕೊಂಡು ಹೊರಡು.

ಆಗಂತುಕ—ನನಿಗೆ ಪದ್ಮ ಸರೋವರದ ದಾರಿಯನ್ನು ತೋರಿಸಿ ಕೊಡುವುದಾದರೆ, ನಾನು ನಿನಗೆ ಒಂದು ಕಾಸ ನ್ನು ಕೊಡುವೆನು.

ಶಚೀಂದ್ರ—ಅಯ್ಯಾ, ಇಷ್ಟು ಔದಾರ್ಯವನ್ನು ತೋ ರ್ಪಡಿಸಿ ಕರ್ಣನಹೆ ಸರನ್ನು ಮುಚ್ಚುವಂತಿದೆ.

ಆಗಂತುಕ—ನೀನು ಹುಚ್ಚನಲ್ಲವೆ ?

ಶಚೀಂದ್ರ—ಹತ್ತಾರು ಜನರು ಸೇರಿಕೊಂಡು ನನ್ನ ನ್ನು ಹುಚ್ಚನನ್ನಾಗಿ ಮಾಡಿರುವರು. ನಾನು ಹೊರಗೆ ಹೊರ ಟರೆ ಹುಚ್ಚ, ಹುಚ್ಚ ಎಂದು ಎಲ್ಲರೂ ದೊಂಬಿಯೋ ದೊಂ

ಬಿ ಎಬ್ಬಿಸುವರು. ನನಗೆ ಎಲ್ಲಿಯೂ ಉಳಿಬಾಳಿಲ್ಲ. ಆದುದರಿಂದ ನಾನು ಇಲ್ಲಿಂದೆದ್ದು ಹೊರಡುವೆನು ನಮಸ್ಕಾರ ; ತಾವು ಬ್ರಾಹ್ಮಣರಾಗಿರುವ ಪಕ್ಷದಲ್ಲಿ ತಮಗೆ ಪ್ರಣಾಮವಿರಲಿ.

ಆಗಂತುಕ—ನೀನು ಎಲ್ಲಿಗೆ ಹೊರಡುವೆ ?

ಶಚೀಂದ್ರ—ನಾನು ಎಲ್ಲಿಗೆ ಹೋಗಲಿ, ಶುಂಠೀಮಾಮನನ್ನು ನೋಡುವುದಕ್ಕೆ ಹೋಗುವೆನು.

ಹೀಗೆಹೇಳಿ ಶಚೀಂದ್ರನು ಅಲ್ಲಿಂದೆದ್ದು ಹೊರಟು ಹೋಗಲು, ಆಗಂತುಕನೂ ಮತ್ತೊಂದು ಕಡೆಯಿಂದ ಎಲ್ಲಿಗೋ ಹೊರಟು ಹೋದನು.

* * *

ಕೊಂಚಹೊತ್ತಾದಮೇಲೆ, ತೋಟದ ಮತ್ತೊಂದು ಭಾಗದಲ್ಲಿ ಅವರಿಬ್ಬರೂ ಮತ್ತೆ ಸಂಧಿಸಿದರು.

ಆಗಂತುಕನು ಭಿಕ್ಷುಕನನ್ನು ನೋಡಿ, ಇದೇನು? ಶುಂಠೀಮಾಮನ ಮನೆಗೆ ಹೋಗಲಿಲ್ಲ ? ಎಂದನು.

ಶಚೀಂದ್ರನು, ವಿಸ್ಮಯದೊಡನೆ ಪುನಃ ನೀನು ಇಲ್ಲಿಯೂ ಸಿಕ್ಕಿದೆಯ ? ನಾನು ಎಲ್ಲೆಲ್ಲಿಯೂ ಸುತ್ತಿಕೊಂಡು ಮತ್ತೆ ನಿನ್ನಲ್ಲಿಗೆ ಬಂದು ಸೇರಿದುದು ನೋಡಿದರೆ, ನಿಜವಾಗಿಯೂ ಭೂಮಿಯು ಗುಂಡಾಗಿರಬೇಕಲ್ಲದೇ ಚಪ್ಪಟೆಯಾಗಿಲ್ಲ. ಗೋಲಾಕಾರವಾದ ಭೂಮಿಯಮೇಲೆ ನಾವು ಹೇಗೆ ಹೇಗೆ ಸಂಚರಿಸಿದರೂ ಎಂದಾದರೊಂದು ದಿನ ಈರೀತಿಯಲ್ಲಿಯೇ ಸೇರಬೇಕಾಗುವುದು. ಇರಲಿ; ಇಂದು ನಿನಗೆ ನಮಸ್ಕಾರ, ಬ್ರಾಹ್ಮಣನಾಗಿದ್ದರೆ ಪ್ರಣಾಮ, ಎಂದು ಹೇಳುತ್ತಾ ಹೇಳುತ್ತಾ ತೋಟದಿಂದ ಪಾರಾದನು. ಆಗಂತು

ಕನು ತನ್ನ ತೀಕ್ಷ್ಣವಾದ ದೃಷ್ಟಿಯಿಂದ ಸಾಧ್ಯವಾದಷ್ಟು ದೂರ, ಭಿಕ್ಷುಕನನ್ನೇ ನೋಡತೊಡಗಿದನು. ಆಗಂತುಕನು ಕೊಂಚಹೊತ್ತು ನೋಡಿ ತನ್ನಲ್ಲಿ ತಾನೇ "ಇಲ್ಲ, ಇವನಿಗೆ ಭಯಪಡಬೇಕಾದ ಕಾರಣವಿಲ್ಲ. ಇವನು ಅರ್ಧ ಹುಚ್ಚ, ಇವನು ಎಲ್ಲಿಗಾದರೂ ಹೋಗಲಿ. ಇವನು ಪತ್ತೇದಾರನಾಗಿರಬಹುದೆಂದು ನನಗೆ ಭಯವಿದ್ದಿತು, ಈಗ ಆ ಭಯವು ತೊಲಗಿಹೋಯಿತು, ಎಂದು ಮುಂತಾಗಿ ಯೋಚಿಸುತ್ತಾ, ಜುಮೆಲೆಯು ಹೋದ ಮಾರ್ಗದಲ್ಲಿಯೇ ಹೊರಟುಹೋದನು. ಈ ಆಗಂತುಕನು ಜುಮೆಲೆಯ ಚಾಕರನಾಗಿದ್ದನು.

ಆಗ ಭಿಕ್ಷುಕ ವೇಷಧಾರಿಯಾದ ಶಚೀಂದ್ರನು ಬಹಳ ದೂರ ಹೋಗಲಿಲ್ಲ. ಆಗಂತುಕನು ಕಣ್ಮರೆಯಾಗಿ ಹೋಗುವವರೆಗೂ, ಶಚೀಂದ್ರನು ಒಂದು ಗಿಡದ ಮರೆಯಲ್ಲಿಯೇ ಇದ್ದುಕೊಂಡು ಕಾಲವನ್ನು ಪರೀಕ್ಷಿಸುತಿದ್ದನು. ಆಗಂತುಕನು ಹೊರಟೇ ಹೋದನೆಂದು ಮನಸ್ಸಿಗೆ ನಿರ್ಧಾರವಾದಮೇಲೆ, ಶಚೀಂದ್ರನು ತನ್ನ ಗುಪ್ತವಾದ ಸ್ಥಾನವನ್ನು ಬಿಟ್ಟು ಹೊರಗೆ ಬಂದು, ಆಗಂತುಕನು ಹೊರಟುಹೋದ ದಾರಿಯನ್ನೇ ಹಿಡಿದು ತಾನೂ ಹೊರಟನು.

ಶಚೀಂದ್ರನು ಹೊರಡುವ ಕಾಲದಲ್ಲಿ ಕೈಯ್ಯಲ್ಲಿದ್ದ ದೊಣ್ಣೆಯು ಬಾರಿ ಬಾರಿಗೂ ನೆಲದಮೇಲೆ ಬೀಳುತಿದ್ದಿತು; ಅವನು ಪದೇ ಪದೇ ಮುಗುಳುನಗೆಯೊಡನೆ ಜಾರಿಬಿದ್ದ ಕೋಲನ್ನು ತೆಗೆದುಕೊಳ್ಳುತಿದ್ದನು. ಪ್ರಿಯ ಪಾಠಕರೆ ! ಶಚೀಂದ್ರನ ಮುಗುಳುನಗೆಗೆ ಕಾರಣವೇನಿರಬಹುದು ? ದೇವೇಂದ್ರನು ಹೊರಡುವ ಕಾಲದಲ್ಲಿ ಧಾನ್ಯವನ್ನು ಚೆಲ್ಲಿಕೊಂ

ಡು ಹೋಗಿದ್ದನು. ಅದು ಬೆಳ್ದಿಂಗಳಲ್ಲಿ ಅಷ್ಟು ವಿಶದವಾಗಿ ಕಾಣದಿರಲು, ಶಚೀಂದ್ರನು ಕೋಲನ್ನು ಕೆಳಗೆ ಕೆಡಹಿ ಅದನ್ನು ಎತ್ತುವ ನೆಪದಿಂದ ದೇವೇಂದ್ರನ ಮಾರ್ಗವನ್ನು ಕಂಡುಹಿಡಿಯುಲಾರಂಭಿಸಿದನು. ಪದೇ ಪದೇ ತನ್ನ ಉದ್ದೇಶವು ನೆರವೇರುತ್ತಿರುವುದೆಂದು, ಅವನು ತನ್ನಲ್ಲಿ ತಾನೇ ಸಂತೋಷ ಪಡುತಿದ್ದನು. ಆ ಸಂತೋಷದ ಅಧಿಕಾಂಶವೇ ಮುಗುಳು ನಗೆಯ ವ್ಯಾಜದಿಂದ ಅವನ ಮುಖಮಂಡಲದಲ್ಲಿ ನಲಿದಾಡುತಿದ್ದಿತು.

ನಾಲ್ಕನೆಯ ಸಂಧಿ.

(ಅಪೂರ್ವಭಾವಾವಿರ್ಭಾವ)

ಕೊಂಚಹೊತ್ತಿನ ಮೇಲೆ, ದೇವೇಂದ್ರನು ಜುಮೆಲೆಯ ಸಂಗಡ, ಅಂಧಕಾರಾವೃತವಾಗಿದ್ದ ಮನೆಯ ಮುಂಭಾಗದಲ್ಲಿ ಬಂದು ನಿಂತನು. ಆಗ ಜುಮೆಲೆಯು ದೇವೇಂದ್ರನನ್ನು ಕುರಿತು-ಈ ಮನೆಯೊಳಗೆ ನೀನು ನನ್ನ ಜತೆಯಲ್ಲಿ ಬರಬೇಕಾಗಿರುವುದು, ಎಂದಳು.

ಆಗಬಹುದು.

ಇಲ್ಲಿಯೇ ರೇವತಿಯೂ ಇರುವಳು.

ಒಳ್ಳೆಯದು, ನನ್ನನ್ನೂ ಅಲ್ಲಿಗೆ ಕರೆದುಕೊಂಡು ಹೊರಡು.

ಈಗಾಗಲಾರದು, ನಾನು ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುವುದಕ್ಕೆ ಮೊದಲು, ನಾನು ನಿನ್ನೊಡನೆ ಬಹಳವಾಗಿ ಮಾತನಾಡಬೇಕಾಗಿರುವುದು. ನಡೆ ; ನನ್ನನ್ನು ಅನುಸರಿಸಿಕೊಂಡೇ ಬಾ.

ಇಬ್ಬರೂ ಮನೆಯೊಳಗೆ ಪ್ರವೇಶಮಾಡಿದರು. ಆ ಮನೆಯಲ್ಲಿ ಏಕಾಧಿಪತ್ಯ ಮಾಡುತಿದ್ದ ಘೋರಾಂಧಕಾರದಲ್ಲಿ ದಿಕ್ಕು ತೋರದ ದೇವೇಂದ್ರನು ಗುಪ್ತವಾಗಿಟ್ಟದ್ದ ಕೈಲಾಂದ್ರ (lantern) ವನ್ನು ಹೊರಗೆ ತೆಗೆದನು. ಆ ಕೂಡಲೆ ಮನೆಯೆಲ್ಲವೂ ಬೆಳಕಿನಿಂದ ಉಜ್ಜ್ವಲಿತವಾಯಿತು. ಅದನ್ನು ನೋಡಿದಾಕ್ಷಣವೇ ಜುಮೆಲಿಯು ಚಮುಕಿತಳಾದರೂ ಯಾವ ಮಾತನ್ನೂ ಆಡಲಿಲ್ಲ.

ಬಳಿಕ ಇಬ್ಬರೂ ಉತ್ತರ ದಿಕ್ಕಿನಲ್ಲಿದ್ದ ಮೆಟ್ಟಲುಗಳನ್ನು ಹತ್ತಿ ಮಹಡಿಯ ಮೇಲೆ ಹೋಗಿ ಅಲ್ಲೊಂದು ಕೋಣೆಯನ್ನು ಪ್ರವೇಶಮಾಡಿದರು. ಪ್ರವೇಶಮಾಡಿದ ಕೂಡಲೆ, ಜುಮೆಲೆಯು ಮೇಣದ ಬತ್ತಿಯನ್ನು ಹತ್ತಿಸಿ, ಅದನ್ನು ಒಂದು ಮೇಜಿನ ಮೇಲಿಟ್ಟು, ದೇವೇಂದ್ರ, ನಾನು ನಿನ್ನನ್ನು ಇಲ್ಲಿಗೆ ಬರಮಾಡಿಕೊಂಡಿರುವುದಕ್ಕೆ ಕಾರಣವೇನೆಂಬುದನ್ನು ಬಲ್ಲೆಯಾ ? ಎಂದಳು.

ಇಲ್ಲ, ಗೊತ್ತಿಲ್ಲ.

ನಾನು ನಿನ್ನನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿರುವೆನು.

ಅದನ್ನು ನಾನು ಬಲ್ಲೆ.

ನಿನ್ನನ್ನು ಮಾತ್ರವೇ ಅಲ್ಲ; ನಿನ್ನ ಜತೆಯಲ್ಲಿ ಯಾರು ಯಾರು ಸೇರಿಕೊಂಡಿರುವರೋ, ಅವರೆಲ್ಲರನ್ನೂ.

ಅದನ್ನೂ ನಾನು ಬಲ್ಲೆ ?

ನಾನು ನನ್ನ ಪ್ರತಿಜ್ಞೆಯನ್ನು ನೆರವೇರಿಸಿಕೊಳ್ಳಬಲ್ಲೆನೆಂದು ನಿನಗೆ ನಂಬುಗೆಯುಂಟೋ ?

ಸಾಧ್ಯವಾದರೆ ಮಾಡಬಲ್ಲೆ,

ನನಗೆ ಸಾಧ್ಯವಾಗುವುದು.

ಅಡ್ಡಿಯೇನು !

ಆದರೆ, ಈಗ ಆ ಕೆಲಸ ಮಾಡುವುದಕ್ಕೆ ನನಗೆ ಅಷ್ಟಾಗಿ ಇಷ್ಟವಿಲ್ಲ. ಈಗ ನಾನು ನಿನ್ನೊಡನೆ ಒಂದು ಕರಾರನ್ನು ಮಾಡಿಕೊಳ್ಳಲೆಣಿಸಿರುವೆನು.

ಸರಿ ; ಯಾವ ವಿಷಯದಲ್ಲಿ ?

ನಾನೀಗ ಹೇಳುವ ವಿಷಯವು ನಿನಗೆ ಹೊಸದಾಗಿಯೂ, ಆಶ್ಚರ್ಯವನ್ನುಂಟುಮಾಡುವುದಾಗಿಯೂ ಇರುವುದು. ನಾನು ನಿನ್ನನ್ನೂ, ನಿನ್ನ ಹೆಂಡತಿಯನ್ನೂ, ಶಚೀಂದ್ರನನ್ನೂ ನನ್ನ ಪ್ರತಿಹಿಂಸೆಯಿಂದ ಉದ್ಧಾರಮಾಡಬೇಕೆಂದಿರುವೆನು.

ಅದರಲ್ಲಿಯೂ ನಿನಗದೊಂದು ಉದ್ದೇಶ ವಿದ್ದಿರಬೇಕು

ಅಹುದು, ನೀನು ನನ್ನ ಮಾತನ್ನು ನಡೆಯಿಸಿಕೊಟ್ಟು ನನಗೆ ಸಹಾಯನಾಗು. ನಾನು ಪಾಪಕಾರ್ಯಗಳೆಲ್ಲವನ್ನೂ ತ್ಯಾಗಮಾಡಿ ಸನ್ಮಾರ್ಗವನ್ನು ಅವಲಂಬಿಸುವೆನು.

ಜುಮೆಲ ! ಅಂತಹ ಕಾಲವೂ ಉಂಟೆ ?

ಉಂಟು, ಅನೇಕ ಮಾರ್ಗಗಳುಂಟು.

ಅವೆಂಥವು ?

ದೇವೇಂದ್ರ, ನೀನು ಮನಸ್ಸು ಮಾಡಿದ್ದೇ ಆದರೆ, ನಾನು ಯಾರಿಗೆ ಪ್ರಾಣನಾಶವನ್ನುಂಟುಮಾಡಬೇಕೆಂದು ಇಚ್ಛೆಯುಳ್ಳವಳಾಗಿರುವೆನೋ, ಅವರನ್ನು ನೀನು ಸಾಮಾನ್ಯವಾದ ಉಪಾಯದಿಂದ ಉದ್ಧಾರ ಮಾಡಬಲ್ಲೆ. ಆ ಉಪಾಯವೆಂತಹದು ? ನೀನು ನನ್ನ ನಡೆನುಡಿಗಳನ್ನು ಸರಿಪಡಿಸು. ನಾನು ಯಾವ ಮಾರ್ಗವನ್ನು ಅವಲಂಬಿಸಿದರೆ ಸಚ್ಚಾರಿತ್ರ

ಳಾಗುವೆನೋ, ಅಂಥ ಮಾರ್ಗವೊಂದನ್ನು ನನಗೆ ತೋರಿಸು. ನೀನು ನನ್ನನ್ನು ಯಾವಾಗಲೂ ಪಿಶಾಚೀ, ರಾಕ್ಷಸೀ ಶಾಕಿನೀ, ಢಾಕಿನೀ, ಎಂದು ಮುಂತಾಗಿ ಕರೆದಿರುವೆ. ಅಂತಹ ನನ್ನನ್ನು ದೇವತಾಸ್ವರೂಪಳನ್ನಾಗಿ ಮಾಡು.

ಜುಮೆಲಿ ! ನಿನ್ನೀಮಾತಿಗೆಲ್ಲ ಅರ್ಥವೇನು ?

ದೇವೇಂದ್ರ! ನನ್ನ ಪ್ರಾರ್ಥನೆಗೆಲ್ಲಸರಿಯಾದ ಉತ್ತರ ಕೊಡು. ನಿಜವಾಗಿಯೂ ಹೇಳು, ನಾನು ತ್ರಿಪುರ ಸುಂದರಿಯಲ್ಲವೇ ?

ನೀನು ಮಹಾ ತ್ರಿಪುರಸುಂದರಿಯೇ ಸರಿ. ಅದನ್ನು ಯಾರು ತಾನೇ ಅಲ್ಲವೆನ್ನುವರು?

ನಾನು ಎಂತಹ ಮಹಾತ್ರಿಪುರಸುಂದರಿ ?

ನಿನ್ನ ಹೃದಯಾಂತರ್ಗತವಾದ ಮಹಾಪಾಪಕಾರ್ಯಗಳು ನಿನ್ನ ಮುಖದಲ್ಲಿ ಪ್ರತಿಫಲಿತವಾಗದಿರುವುದಾದರೆ, ನೀನೇ ಪರಮಸುಂದರಿ. ನಿನ್ನಂತಹ ಸುಂದರಿಯಾದ ಮತ್ತೊಬ್ಬ ಹೆಂಗಸು ಈ ಬ್ರಹ್ಮಾಂಡದಲ್ಲಿರುವಳೋ, ಇಲ್ಲವೋ. ತಿಳಿದು ಹೇಳುವುದಕ್ಕಾಗುವುದಿಲ್ಲ.

ನಾನು ಮನೋರಮೆಗಿಂತಲೂ ಸುಂದರಿಯೆ ?

ಸಂದೇಹವಿಲ್ಲದೆ,

ರೇವತಿಗಿಂತಲೂ ?

ನೀನು ರೇವತಿಗಿಂತಲೂ ಸುಂದರಿ.

ನೀನು ಸುಂದರಿಯ ಸೌಂದರ್ಯವನ್ನು ಪ್ರೀತಿಸುವುದಿಲ್ಲವೆ ?

ಸುಂದರಿಯ ಸೌಂದರ್ಯವನ್ನು ನಾನು ಪ್ರಶಂಸೆ ಮಾಡುವೆನೇ ಹೊರತು, ಅದನ್ನು ನಾನು ಪ್ರೀತಿಸುವುದಿಲ್ಲ.

ಒಂದು ವೇಳೆ ನಾನು ಹಿಂದೆ ಅಪಾರವಾಗಿ ಮಾಡಿದ ಗುಪ್ತತಮವಾದ ಪಾಪಕೃತ್ಯಗಳೆಲ್ಲವನ್ನೂ ಪ್ರಾಯಶ್ಚಿತ್ತಾದಿಗಳಿಂದ ಹೋಗಲಾಡಿಸಿಕೊಳ್ಳುವುದಾದರೆ, ಆಗಲಾದರೂ ನಾನು ನಿನ್ನ ಮನವೊಪ್ಪಿದ ಸುಂದರಿಯಾಗುವೆನೇ ?

ಇಲ್ಲ, ನಾನು ನಿನ್ನನ್ನು ಬಹಳವಾಗಿ ದ್ವೇಷಿಸುವೆನು.

ನಿನ್ನ ಮನಸ್ಸನ್ನು ಇತರರು ಆಕರ್ಷಿಸದೇ ಇರುವುದಾಗಿದ್ದರೆ, ಈಗ ನೀನು ನನ್ನನ್ನು ಪ್ರೀತಿಸುತ್ತಿದ್ದೆಯೋ, ಇಲ್ಲವೋ ? ಹೇಳು, ದೇವೇಂದ್ರ !

ಇಲ್ಲ.

ಈ ಮಾತು ಮಿತಿಮೀರಿತು. ಜುಮೆಲೆಯ ಹೃದಯವು ಡವ್, ಡವ್, ಎಂದು ಬಡಿದುಕೊಳ್ಳಲಾರಂಭಿಸಿತು.

ನಿಶ್ವಾಸಪ್ರಶ್ವಾಸಗಳು ಶುದ್ಧವಾದುವು. ಆಕೆಯ ಮುಖಮಂಡಲವು ಕ್ಷಣಮಾತ್ರದಲ್ಲಿಯೇ ಕೆಂಪಾಗಿ, ತದುತ್ತರ ಕ್ಷಣದಲ್ಲಿಯೇ ಕಪ್ಪಾಗಿ ಬಿಟ್ಟಿತು. ಜುಮೆಲೆಯು ಕೊಂಚ ಹೊತ್ತು ನೀರವಳಾಗಿದ್ದು, ಪುನಃ ತನ್ನ ಪೂರ್ವಾವಸ್ಥೆಯನ್ನು ಹೊಂದಿದವಳಾಗಿ,ಮೊದಲಿಗಿಂತಲೂ ಮೃದುಮಧುರವಾದ ಕಂಠಸ್ವರದಿಂದ ದೇವೇಂದ್ರನನ್ನು ಕುರಿತು, ನನ್ನನ್ನು ಪ್ರೀತಿಸುವುದಿಲ್ಲವೋ? ದೇವೇಂದ್ರ, ಹಾಗಾದರೆ ನೀನು ನನ್ನನ್ನು ಪ್ರೀತಿಸುವುದಿಲ್ಲವೋ ?, ಎಂದು ಅಂಗಲಾಚಿಕೊಂಡಳು.

ಹಾಗಾದರೂ ಇಲ್ಲ. ಎಂದು ದೇವೇಂದ್ರನು ಉತ್ತರವಿತ್ತನು.

ದೇವೇಂದ್ರವಿಜಯ, ಈಗ ನನಗೆ ೩೬ ವರ್ಷ ವಯಸ್ಸು. ಈ ಮೂವತ್ತಾರು ವರ್ಷ ವಯಸ್ಸಿನಲ್ಲಿ, ಎಷ್ಟೋಜನ

ನನ್ನನ್ನು ಪ್ರೀತಿಸಿರುವರು. ನಾನು ಪ್ರತಿಯಾಗಿ ಪ್ರೀತಿಸು ವುದಕ್ಕೆ, ಅವರಲ್ಲಿ ನಿನಗೆ ಸಮಾನಾದವನೊಬ್ಬನೂ ಇಲ್ಲವೆಂದು ವ್ಯಸನಪಡುವೆನು. ನಿನ್ನನ್ನು ನೋಡಿದ ಮಾತ್ರದಿಂದಲೇ, ನನ್ನ ಹೃದಯವು ಕರಗಿ ನೀರಾಗಿ ಹೋಗುವುದು. ನೀನು ಮಾತ್ರ ನನ್ನನ್ನು ಪ್ರೀತಿಸುವುದಿಲ್ಲವೆಂದು ಹೇಳಿ ಬಿಟ್ಟೆ. ನೀನು ನನ್ನನ್ನು ಪ್ರೀತಿಸುವುದು ಹಾಗಿರಲಿ, ನೀನು ನನಗೆ ಶತ್ರು-ಪರಮಶತ್ರು. ಹೀಗಿದ್ದರೂ ನನ್ನ ಪ್ರಾಣವು ನಿನ್ನ ಪಾದ ಮೂಲದಲ್ಲಿ ಆಶ್ರಯವನ್ನು ಹೊಂದಲು ತತ್ತರಗುಟ್ಟುತ್ತಿರುವುದು. ನನ್ನ ಆಶಾಲತೆಯು ನಿರಾಶ್ರಯವಾದುದೆಂದು ನಾನು ಮೊದಲೇ ತಿಳಿದುಕೊಂಡಿದ್ದೆನು. ಅದು ಈಗ ನಿಷ್ಫಲವೆಂದು ಕಂಡುಬಂದುದರಿಂದ, ನಾನು ನಿನ್ನನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿರುವೆನು. ನನ್ನ ಪ್ರತಿಜ್ಞೆಯನ್ನು ನಾನು ಈಗಲೇ ನೆರವೇರಿಸಿಕೊಳ್ಳುವುದಾದರೆ, ಕಾಲಕ್ರಮದಲ್ಲಿಯಾದರೂ ನಿನ್ನ ಹೆಸರು ಮರೆತುಹೋಗಿ ನನಗೆ ಮನಶ್ಶಾಂತಿಯೆಂಬುದು ಉಂಟಾಗಬಹುದು. ಇಲ್ಲದಿದ್ದರೆ ನನ್ನ ಈ ಅಂತಸ್ತಾಪವು ನನ್ನನ್ನು ಸುಟ್ಟು ಬೂದಿ ಮಾಡಿ ಬಿಡುವುದು. ದೇವೇಂದ್ರ! ನಾನೀಗ ನಿನ್ನನ್ನು ಕರೆಯಿಸಿದುದು ಏತಕೆಂಬುದನ್ನು ಬಲ್ಲೆಯಾ? ನಿನ್ನೊಡನೆ ನಾನು ಕರಾರು ಮಾಡಿಕೊಳ್ಳಬೇಕೆಂದಿರುವೆನು.

ಅದೇನು, ಹೇಳು?

ನನ್ನ ಮಾತನ್ನು ನೀನು ನೆರವೇರಿಸಿ ಕೊಡಬಲ್ಲೆಯೆಂದು ನಾನು ದೃಢವಾಗಿಯೂ ನಂಬಿರುವೆನು.

ನಿನ್ನ ಮಾತನ್ನು ನಾನು ನೆರವೇರಿಸಿ ಕೊಡುವುದರಿಂದ ನನಗೆ ಆವ ವಿಧವಾದ ತೊಂದರೆಯೂ ಉಂಟಾಗದಿದ್ದಲ್ಲಿ

ನಾನು ನೆರವೇರಿಸಿಕೊಡಬಲ್ಲೆನು.

ನೀನು ನಿನ್ನ ಹೆಂಡತಿಯನ್ನು ಪ್ರೀತಿಸುವೆಯಾ ?

ಹೌದು, ಪ್ರೀತಿಸುವೆನು.

ಆಕೆಗೆ ಪ್ರಾಣರಕ್ಷಣೆಯುಂಟಾಗುವುದರಲ್ಲಿ ನಿನಗೆ ಇಷ್ಟವೋ ?

ಸಂದೇಹವೇನು ?

ಆಕೆಯು ಬದುಕಬೇಕಾಗಿದ್ದರೆ, ನೀನು ಏನನ್ನಾದರೂ ದಾನಮಾಡಬೇಕು.

ಸಾಧ್ಯವಾದಷ್ಟು.

ನಿನ್ನ ಪ್ರೀತಿಯನ್ನು ನೀನು ದಾನಮಾಡಬಲ್ಲೆಯಾ ?

ನಿನ್ನ ಮಾತು ನನಗೆ ಅರ್ಥವೇ ಆಗುವುದಿಲ್ಲ.

ನೀನು ನಿನ್ನ ಹೆಂಡತಿಯನ್ನು ಬಿಡಬಲ್ಲೆಯಾ ?

ಬಿಡಬಲ್ಲೆನು.

ಆಕೆಯನ್ನು - ನಿನ್ನ ಹೆಂಡತಿಯನ್ನು - ಪ್ರೀತಿಸರ್ವಸ್ವಸ್ವರೂಪಳಾದ ನಿನ್ನ ಹೃದಯಾಧಿದೇವತೆಯನ್ನು ಒಂದೇ ವರ್ಷ - ತುಂಬಾ ದಿನಗಳಲ್ಲ - ಪರಿತ್ಯಾಗಮಾಡು. ಎಂದೆಂದಿಗೂ ಆಕೆಯನ್ನು ನೀನು ತ್ಯಾಗಮಾಡಬೇಕೆಂದು ನನ್ನ ಅಭಿಪ್ರಾಯವಲ್ಲ. ಆಕೆಯನ್ನು ನೀನು ತ್ಯಾಗಮಾಡಿದ ಒಂದುವರ್ಷಕಾಲ ಮಾತ್ರ ನನ್ನವನಾಗಿರಬೇಕು. ವರ್ಷಕಳೆದ ಕೂಡಲೆ, ನಾನು ನಿನ್ನನ್ನು ಬಿಟ್ಟು ಬಿಡುವೆನು. ಅನಂತರ ನೀನು ನಿನ್ನ ಹೆಂಡತಿಯಲ್ಲಿ ಪುನಃ ಸೇರಿಕೊಳ್ಳಬಹುದು. ದೇವೇಂದ್ರ! ಒಂದು ವರ್ಷ-ಒಂದೇ ವರ್ಷ, ಆಮೇಲೆ ನಾನು ವಿಷವನ್ನು ಪಾನಮಾಡಿ ಸತ್ತು ಹೋಗುವೆನು. ಬಳಿಕ ನೀನು ನಿಶ್ಚಿಂತನಾಗಿರಬಹುದು. ನಿನಗೆ ಮುತ್ತಾವತೊಂದರೆ

ಯೂ ಇರಲಾರದು. ಎಂದು ಹೇಳಿ ದೇವೇಂದ್ರನಿದ್ದಲ್ಲಿಗೆ ಬಂದು ಹೆಜ್ಜೆ ಮುಂದೆ ಬಂದು ಮೊಳಕಾಲೂರಿ ಅವನ ಪಾದಪ್ರಾಂತದಲ್ಲಿ ಕುಳಿತಳು. ಆಗ ಜಾಮೆಲಯು ಹೃದಯದ ಆವೇಗದಿಂದ ಉನ್ಮಾದಿನಿಯಾಗಿಬಿಟ್ಟಿದ್ದಳು.

ದೇವೇಂದ್ರನು ಆಕೆಯ ನೂತನವಾದ ಮನೋಭಿಪ್ರಾಯವನ್ನು ಕೇಳಿ ದಿಗ್ಭ್ರಾಂತನಾಗಿ ಕಲ್ಲಿನ ಪ್ರತಿಮೆಯಂತೆ ಶೀತಲನಾಗಿಯೂ, ನೀರವನಾಗಿಯೂ, ನಿಶ್ಚಲನಾಗಿಯೂ ಇದ್ದುಬಿಟ್ಟನು.

ಐದನೆಯ ಸಂಧಿ.

(ಆವೇಗದಲ್ಲಿ)

ಜಾಮೆಲೆಯು ಮತ್ತೆ ಮಾತನಾಡತೊಡಗಿದಳು.—ದೇವೇಂದ್ರ, ಆದರಿಂದ ಎಷ್ಟೋ ಸುಖವಿರುವುದು ; ನಾನು ಸಾಯುವೆನು ! ಸಾಯುವೆನು!! ಸಾಯುವೆನು !!! ನೀನು ನನ್ನವನಾಗು, ನೀನು ಒಂದು ವರ್ಷಕಾಲ ಮಾತ್ರ ನನ್ನವನಾಗು. ದೇವೇಂದ್ರ ! ನನ್ನ ಹೃದಯ ಮಧ್ಯದಲ್ಲಿ ಅನಿರ್ವಚನೀಯವಾದ ಸುಖದ ಘನರಾಶಿಯು ಏಕಾಕಾರವಾಗಿ ವಿರಾಜಿಸುತ್ತಿರುವುದು. ಈ ವಿಷಯಗಳನ್ನು ನಾನು ಮನದಲ್ಲಿ ಸ್ಮರಿಸಿದ ಕೂಡಲೆ, ನನ್ನ ಆನಂದಕ್ಕೆ ಪಾರವೇ ಇರುವುದಿಲ್ಲ. ನೀನು ನನ್ನನ್ನು ಪ್ರೀತಿಸುವೆಯೋ, ಇಲ್ಲವೋ, ಅದನ್ನು ನಾನು ಈಗ ಜಿಜ್ಞಾಸೆಮಾಡುವುದಿಲ್ಲ. ನಾನು ಬಲ್ಲೆ. ನಾನು ಅಷ್ಟೇನೂ ದಡ್ಡಳಲ್ಲ, ನೀನು ಯಾವಾಗಲೂ ನನ್ನ

ನ್ನು ಪ್ರೀತಿಸುವುದಿಲ್ಲ, ಆದರ ಹರಕ್ಕಾದರೂ ನೀನು ಒಂದು ವರ್ಷಮಾತ್ರ ನನ್ನನ್ನು ಪ್ರೀತಿಸು. ನನ್ನ ಮುಃಖೋಲ್ಲಾಸಕ್ಕಾದರೂ ಪ್ರೀತಿಸುವುದಾಗಿ ಹೇಳಿ, ಅನಂತರ ನೀನು ವಂಚಿಸು. ನಿನ್ನ ವಂಚನೆಯಿಂದ ನಾನು ವಂಚಿತಳಾದರೂ ನನಗೆ ಸುಖವುಂಟು. ನಾನು ಯಾವ ಆಶೆಯನ್ನಿಟ್ಟುಕೊಂಡಿರುವೆನೋ, ಆ ಆಶೆಯು ದುಸ್ಸಾಧ್ಯವೆಂದು ನಾನು ಬಲ್ಲೆನು. ನೀನು ಸುಳ್ಳಾಗಿಯಾದರೂ ನನ್ನನ್ನು ಪ್ರೀತಿಸುವುದಾಗಿ ಒಪ್ಪಿಕೊಳ್ಳುವುದಾದರೆ, ನನ್ನ ಆಶೆಯು ಕೃತಾರ್ಥವಾಗುವುದು. ನನಗೆ ಅಷ್ಟೇ ಸಾಕು. ಬಹಿಃ ಹಾಗಿರಲಿ, ಅಂತಃ ಆದರೂ ನೀನು ನನ್ನನ್ನು ಪ್ರೀತಿಸುವುದಾಗಿ ನನಗೆ-ನನ್ನೊಬ್ಬಳಿಗೆ ಮಾತ್ರ-ತಿಳಿಸು. ಅಷ್ಟು ಮಾತ್ರಕ್ಕೇ ನೀನು ನನ್ನವನಾಗುವೆ. ನಿನ್ನ ಹೆಂಡತಿಯಾದ ರೇವತಿಯೂ ಪ್ರಾಣರಕ್ಷಣೆಯನ್ನು ಹೊಂದಿ ಸುರಕ್ಷಿತಳಾಗಿ ಮತ್ತೆ ಮನೆಗೆ ಹೋಗಿ ಸುಖದಿಂದಿರುವಳು. ಆಕೆಯು ಅಲ್ಲಿದ್ದುಕೊಂಡು ನಿನ್ನನ್ನು ನಿರೀಕ್ಷಿಸುತ್ತಿರಲಿ. ಒಂದು ವರ್ಷ ಕಾಲವೆಂಬುದು ನಿಮಿಷಮಾತ್ರದಲ್ಲಿಯೇ ಕಳೆದುಹೋಗುವುದು. ವರ್ಷಾಂತದಲ್ಲಿ ನೀನು ಆಕೆಯಲ್ಲಿ ಮತ್ತೆ ಸೇರಿಕೊಳ್ಳಬಹುದು. ಆಮೇಲೆ ನೀನು ಹೇಗೆಬೇಕೋ ಹಾಗಿರುವುದಲ್ಲದೆ, ನಿನಗೆ ಏನಿಷ್ಟವೋ ಅದನ್ನೂ ಹೊಂದಬಹುದು. ಪ್ರಕೃತ, ನೀನು ಒಂದು ಕ್ಷಣಕಾಲದ ಮಟ್ಟಿಗಾದರೂ ಸ್ವರ್ಗ ಸುಖವೆಂತಹದೆಂಬುದನ್ನು ತೋರಿಸುವುದಾದರೆ ನಾನು ಈ ದೇಹವನ್ನು ಧಾರಣಮಾಡಿದ್ದಕ್ಕೆ ಸಾರ್ಥಕವಾಗುವುದು. ನಿನ್ನ ಹೆಂಡತಿಗೆ ಇದಾವುದೂ ಗೊತ್ತಾಗುವುದಿಲ್ಲ. ಇಲ್ಲಿ ನೀನು ನಾನು ಹೊರತಾಗಿ

ಮತ್ತಾರೂ ಇರುವುದಿಲ್ಲ. ಒಂದು ವರ್ಷವಾದೊಡನೆಯೇ ನೀನು ನಗುತ ನಗುತ ನಿನ್ನ ಮನೆಗೆ ಹೋಗುವನಾಗು. ನಾನಾದರೋ, ನೀನು ಹೊರಟಕೂಡಲೆ ಸಾಯುವೆನು, ಖಂಡಿತವಾಗಿಯೂ ಸಾಯುವೆನು. ಈ ರಹಸ್ಯವು ನಿನ್ನಲ್ಲಿ ಮಾತ್ರ ವಿರುವುದು. ಲೋಕದಲ್ಲಿ ಯಾರೂ ನಿನ್ನನ್ನು ಕಳಂಕಿಯನ್ನಾಗಿ ಮಾಡಲು ಯಾವ ಕಾರಣವೂ ಇರುವುದಿಲ್ಲ. ಅದಕ್ಕಾಗಿ ನೀನು ಹೆದರಬೇಕಾದ ವಿಷಯವೇನೂ ಇರುವುದಿಲ್ಲ. ಎಂದು ಜುಮೇಲೆಯು ಎದ್ದು ನಿಂತು ಒಂದೆರಡು ಹಜ್ಜೆ ಮುಂದಕ್ಕೆ ಸರಿದು ಬಂದು ದೇವೇಂದ್ರನನ್ನು ಬಾಚಿ ತಬ್ಬಿಕೊಳ್ಳುವುದಕ್ಕೆ ಯತ್ನಮಾಡಿದಳು.

ದೇವೇಂದ್ರನು ಕಾಲಾಗ್ನಿಗೆ ಸಮನಾದ ಕೋಪದಿಂದ ಕಿಡಿಕಿಡಿಗೊಂಡವನಾಗಿ ಜುಮೇಲೆಯನ್ನು ದೂರ ತಳ್ಳಿಬಿಟ್ಟನು.

ಉನ್ಮತ್ತಳಾದ ಜುಮೇಲೆಯು ಹುಚ್ಚಳಂತೆ ಮತ್ತೆ ಮಾತನಾಡಲಾರಂಭಿಸಿದಳು.— ,,ಕೇಳು, ದೇವೇಂದ್ರ, ನಾನು ಸಾಯುವುದಾಗಿ ಸಂಕಲ್ಪಮಾಡಿರುವೆನು. ಇದನ್ನು ನೀನು ನಂಬಲಾರೆ. ಒಂದು ವರ್ಷ ಕಳೆದ ಕೂಡಲೆ ನಿನ್ನಿದಿರಿನಲ್ಲಿಯೇ ನಾನು ವಿಷವನ್ನು ಪಾನಮಾಡಿ ಸಾಯುವೆನು. ನಾನು ಯಾವಾಗ ಸತ್ತುಹೋಗುವೆನೋ, ಆಗ ನೂರಾರು ಚೂರಿಗಳಿಂದ ನನ್ನ ಹೃದಯವನ್ನು ಕ್ಷತವಿಕ್ಷತವನ್ನಾಗಿ ಮಾಡಿ ನಿನ್ನ ಸಂಶಯವನ್ನು ಹೋಗಲಾಡಿಸಿಕೋ. ನಾನೀಗ ಯಾವುದೋ ದಿಕ್ಕನ್ನು ಕುರಿತು ಬಹುದೂರ ಹೊರಟುಹೋಗುವೆನು. ಅದೂ ಒಂದುವರ್ಷ ಕಾಲ ಮಾತ್ರವೇ ಹೊರತು ಮತ್ತು ಬೇರೆಯಲ್ಲ. ಅಥವಾ ನಾನು ಕಾಮರೂಪಕ್ಕೇನೇ ಹೊರಟುಹೋಗುವೆನು. ನನ್ನಲ್ಲಿರುವ ವಸ್ತು ವಿಜ್ಞಾನ ಶಾಸ್ತ್ರವ

ನ್ನು ನಿನಗೆ ನಾನು ಕಲಿಸಿಕೊಡುವೆನು. ಸುಲಭವಾಗಿಯೂ ನೀನದನ್ನು ಕಲಿತುಕೊಳ್ಳಬಹುದು. ಅದರಿಂದ ನಿನಗೆ ಉಪಕಾರವೇ ಹೊರತು ಅಪಕಾರವಿಲ್ಲ. ನೀನು ಈ ದೇಶವನ್ನೇ ಬಿಟ್ಟು ಹೊರಡಬೇಕು. ಹೊರಡುವಾಗ ಮಾತ್ರ ನನಗೊಂದು ಭಾಷೆಯನ್ನು ಕೊಡಬೇಕು. ಒಂದು ವರ್ಷದಲ್ಲಿ ನೀನು ನಿನ್ನ ಹೆಂಡತಿಗೆ ಬೇಕುಬೇಕಾದ ಹಾಗೆ ಕಾಗದಗಳನ್ನು ಬರೆಯುತ್ತಿರಬಹುದು, ಆದರೆ, ಒಂದು ಸಲವೂ ಕೂಡ ನನ್ನಿದಿರಿಗೆ ನಿನ್ನ ಹೆಂಡತಿಯ ಹೆಸರನ್ನು ಎತ್ತಕೂಡದು. ಒಂದು ವೇಳೆ ಹಾಗೆ ನೀನು ಮಾಡುವುದಾದರೆ, ನಿನಗೆ ನನ್ನಲ್ಲಿ ಪ್ರೀತಿಯಿಲ್ಲವೆಂದು ನಾನು ತಿಳಿದುಕೊಳ್ಳಬೇಕಾಗುವುದು. ಆದುದರಿಂದ ಅಪ್ರೀತಿಗೆ ಕಾರಣವನ್ನು ನನಗೆ ತೋರಿಸಲೂ ಬೇಡ, ತಿಳಿಸಲೂ ಬೇಡ, ನನಗೆ ನಾನೇ ವಂಚಿತಳಾಗುವೆನು. ನೀನು ನನ್ನ ಹೃದಯ ಸಿಂಹಾಸನದಲ್ಲಿ ಕುಳಿತು, ಏಕಾಧಿಪತ್ಯಮಾಡುವೆ ; ನೀನು ನನ್ನ ಹೃದಯೇಶ್ವರ, ನೀನೇ ನನಗೆ ಸರ್ವಸ್ವ ಸ್ವರೂಪನು. ಒಂದು ವರ್ಷವಾಯಿತೆಂದರೆ, ನಾನು ನರಕದ ಕಡೆಗೆ ತೆರಳುವೆನು. ಒಂದು ವರ್ಷದವರೆಗೂ ನಾನು ನಿನ್ನ ಸಹವಾಸದಲ್ಲಿದ್ದು, ಯಾವ ಸುಖವನ್ನು ಅನುಭವಿಸುವೆನೋ, ಆ ಸುಖದಿಂದಲೇ ನರಕವನ್ನು ಕುರಿತು ಸಂತೋಷವಾಗಿ ತೆರಳುವೆನು. ಈ ವರ್ಷಮಾತ್ರ ನನಗೆ ಜಯಕಾಲ, ದೇವೇಂದ್ರ, ನನ್ನ ಪ್ರಾಣೇಶ್ವರ, ನೀನು ನನ್ನ ಭಾವವನ್ನು ತಿಳಿಯಲಾರೆಯ ? ನನ್ನ ಯಾತನೆಯನ್ನು ಕಿಂಚಿತ್ತಾದರೂ ಊಹಿಸಲಾರೆಯ ? ನಾನು ನಿನ್ನನ್ನು ಎಷ್ಟೋ ವಿಧದಲ್ಲಿ ಪೂಜಿಸುವೆನು. ನೀನು ಒಂದು ಸಲವಾದರೂ ಪ್ರೀತಿಸು

ವೆನೆಂದು ಹೇಳಬಿಡು, ನಾನು ಅದನ್ನೇ ಬಲವಾಗಿ ನಂಬಿ ಕೊಂಡು ದಿನಗಳನ್ನು ಕಳೆಯುವೆನು. ಆದ್ದರಿಂದ ನಾನು ನಿನ್ನನ್ನು ಪ್ರಾರ್ಥಿಸುವುದೇನೆಂದರೆ-ನೀನು ನನ್ನನ್ನು ಪ್ರೀತಿ ಸಬೇಕು. ದೇವೇಂದ್ರ ! ನನ್ನ ಪ್ರಶ್ನೆಗೆ ಉತ್ತರಕೊಡು, ಪ್ರತಿಜ್ಞೆಮಾಡು ನೀನು ಮಾತುಕೊಟ್ಟ ಮಾತ್ರಕ್ಕೇ, ನಿನ ಗೇನೂ ನಷ್ಟವಾಗುವುದಿಲ್ಲ. ನಾನು ಈಗಲೇ ನಿನ್ನನ್ನು ರೇವತಿಯ ಬಳಿ ಕರೆದುಕೊಂಡು ಹೋಗುವೆನು, ಆಕೆಯು ಈಗ ಹೆಣದಂತೆ ಬಂದು ಕಡೆ ಬಿದ್ದಿರುವಳು. ಯಾವ ಔಷ ಧದಿಂದ ಜ್ಞಾನಲಾಭವಾಗುವುದೋ, ಆ ಔಷಧವನ್ನು ನಾನು ನಿನ್ನ ಕೈಯಲ್ಲಿಕೊಡುವೆನು; ನೀನೇ ಅದನ್ನು ಆಕೆಗೆಕುಡಿಸು, ಕುಡಿಸಿದಾಕ್ಷಣವೇ ಆಕೆಗೆ ಎಚ್ಚರಿಕೆಯಾಗುವುದಲ್ಲದೇ, ಶರೀರದ ಅವಸ್ಥೆಯೂ ಮೇಲಾಗುವುದು. ಅಂದರೆ-ಮೊದಲು ನಿನ್ನ ಹೆಂಡತಿಯು ಆವರೀತಿಯಲ್ಲಿ ಆರೋಗ್ಯವಾಗಿರುತಿದ್ದ ಳೋ, ಔಷಧಾನಂತರದಲ್ಲಿಯೂ ಅದೇ ರೀತಿಯಲ್ಲಿಯೇ ಆಗುವಳು. ಬಂದು ವೇಳೆ ನೀನು ಒಪ್ಪದಿರುವೆಯಾದರೆ, ನಿಜವಾಗಿಯೂ ನಿನ್ನ ಹೆಂಡತಿಗೆ ಮೃತ್ಯುವುಂಟಾಗುವುದು, ಮನ್ಮಥವಿಕಾರದಿಂದ ಉನ್ಮಾದಿನಿಯಾಗಿ ಕಣ್ಣುಗಳಿಂದ ಧಾರಾಕಾರವಾಗಿ ನೀರನ್ನು ಸುರಿಸುತ್ತಾ, ನಾನು ನಿನ್ನಿದಿ ರಿಗೆ ನಿಂತಿರುವುದೂ, ನನ್ನ ಪ್ರಶ್ನೆಗೆ ಯಾವ ಉತ್ತರವನ್ನೂ ಕೊಡಲಾರದವನಾಗಿ, ಕಲ್ಲಿನ ಬೊಂಬೆಯಂತೆ ನೀನು ನನ್ನಿ ದಿರಿನಲ್ಲಿ ನಿಂತಿರುವುದೂ ಹೇಗೆ ನಿಶ್ಚಯವೋ, ನಿನ್ನ ಹೆಂಡ ತಿಗೆ ಮೃತ್ಯುವೂ ಹಾಗೆಯೇ ನಿಶ್ಚಯವಾದುದು, ಜಗತ್ತಿನಲ್ಲಿ ಎಂತಹ ತಿಳಿವಳಿಕೆಯಿದ್ದರೂ, ಅದರ ಬಲದಿಂದ ಆಕೆಯ ಲುಪ್ತವಾಗಿರುವ ಚೈತನ್ಯವು ಮತ್ತೆ ಸಂಪಾದಿಸಲಾಗಲಾ

ರದು : ಯಾವ ವೈದ್ಯನೇ ಆಗಲಿ, ಮಣಿಮಂತ್ರೌಷಧಾದಿಗಳಿಂದ ಆಕೆಯನ್ನು ಪೂರ್ವಾವಸ್ಥೆಗೆ ತರಲಾರನು ; ನನ್ನ ಹೊರತಾಗಿ ಆಕೆಗೆ ಪ್ರಾಣದಾನ ಮಾಡುವವರು ಈ ಪ್ರಪಂಚದಲ್ಲಿ ಮತ್ತಾರೂ ಇರುವುದಿಲ್ಲವೆಂದು ನಾನು ಹೇಳಿದರೂ ಅತ್ಯುಕ್ತಿಯಾಗಲಾರದು. ನಾನಾದರೋ ಕ್ರಿಯಾವಿಧಿಯನ್ನೂ, ಪ್ರತಿಕ್ರಿಯಾವಿಧಿಯನ್ನೂ ಚೆನ್ನಾಗಿಯೂ ಬಲ್ಲೆನು. ನೀನು ನನ್ನ ಕೈಕಾಲುಗಳಿಗೆ ಬೇಡಿಯನ್ನಾದರೂ ತೊಡಿಸು ; ಕಾಯ್ದ ಕಬ್ಬಿಣದಿಂದ ನನ್ನ ಸರ್ವಾಂಗವೆಲ್ಲವನ್ನೂ ಸುಟ್ಟು ಬೂದಿಮಾಡು ; ನನ್ನ ತಲೆಯಲ್ಲಿರುವ ಕೇಶರಾಶಿಯನ್ನು ಗೊಂಚಲು ಗೊಂಚಲಾಗಿ ಕಿತ್ತುಹಾಕು, ಇಕ್ಕಳದಿಂದ ನನ್ನ ಹಲ್ಲುಗಳೆಲ್ಲವನ್ನೂ ಒಂದೊಂದಾಗಿ ಮೂಲೋತ್ಪಾಟನ ಮಾಡು ; ನೀರಾಗಿ ಕರಗಿದ ಸೀಸವನ್ನು ನನ್ನ ಕಿವಿಗಳಲ್ಲಿಯೂ, ರೋಮಕೂಪಗಳಲ್ಲಿಯೂ ಹೊಯ್ದುಬಿಡು ; ಲೋಕದಲ್ಲಿ ಮತ್ತಾವಾವ ಚಿತ್ರಹಿಂಸೆಗಳಿರುವುವೋ, ಅವುಗಳೆಲ್ಲವನ್ನೂ ನನ್ನಲ್ಲಿ ಪ್ರಯೋಗಿಸು ಇಷ್ಟೆಲ್ಲಾ ಮಾಡಿದರೂ, ನನ್ನ ಮನೋದಾರ್ಢ್ಯ ಬೇರೆ ಬದಲಾಯಿಸುವಂತಿಲ್ಲ ; ಆಕೆಯು ಎಷ್ಟು ಬೇಗನೆ ಮೃತ್ಯುವಿಗೆ ತುತ್ತಾಗಬಹುದೋ, ಅಷ್ಟು ಯತ್ನಮಾಡುವೆನು, ಆದರಿಂದಲೇ ನನ್ನ ಮನೋರಥವು ಈಡೇರಿತೆಂದು ನಾನು ತಿಳಿದುಕೊಳ್ಳುವೆನು. ನಾನು ಹೀಗೆ ಮಾಡುವುದರಿಂದ, ನಿನ್ನ ಮನದಲ್ಲಿ ಆವ ವಿಧವಾದ ಯಾತನೆ ಉಂಟಾಗುವುದೋ, ಅದಕ್ಕಿಂತಲೂ ನನ್ನ ಶಾರೀರಕ ಯಾತನೆಯು ಅಲ್ಪವಾದುದೇ ಹೊರತು ಹೆಚ್ಚಾದುದೇನೂ ಅಲ್ಲ, ದೇವೇಂದ್ರ ! ನೀನು ಸಾವಧಾನವಾಗಿ ಯೋಚಿಸಿನೋಡು, ಹೆಚ್ಚು ದಿನ

ಗಳೇನೂ ಅಲ್ಲ. ಒಂದು ವರ್ಷ ಕಾಲ ಮಾತ್ರವೇ ಹೊರ ತು ಮತ್ತೇನೂ ಅಲ್ಲ. ಈ ಅಲ್ಪ ದಿನಕ್ಕೋಸ್ಕರ ನೀನು ನನ್ನವನಾಗು, ಅನಂತರ ನೀನು ನಿನ್ನ ಸಂಸಾರದಲ್ಲಿ ಸ್ವರ್ಗ ಸುಖವನ್ನೇ ಅನುಭವಿಸು, ನಾನು ಬೇಡವೆನ್ನುವುದಿಲ್ಲ. ದೇವೇಂದ್ರ, ನೀನು ಸಮ್ಮತಿಸುವೆಯಾ ? ರೇವತಿಯ ಪ್ರಾಣ ರಕ್ಷಣೆಗಾಗಿ ಏನು ಬೇಕಾದರೂ ಮಾಡುವುದಾಗಿ ನೀನು ಮೊದಲೇ ಹೇಳಿರುವೆಯಷ್ಟೆ. ನಾನು ನಿನ್ನಲ್ಲಿಗೆ ಬಂದು ಒಂದು ವರ್ಷದ ಮಟ್ಟಿಗೆ ನಿನ್ನನ್ನೇ ಭಿಕ್ಷೆಕೊಡಬೇಕೆಂದು ಪ್ರಾರ್ಥಿಸಿಕೊಂಡಿರುವೆನು ನೀನು ಉತ್ತರಕೊಡುವುದಕ್ಕೆ ಮುಂಚೆ ಚೆನ್ನಾಗಿಯೂ ಯೋಚಿಸಿನೋಡು. ದೇವೇಂದ್ರ ! ನಿನ್ನ ಯೋಚನೆಯು ಯುಕ್ತವಾಗಿರಲಿ ; ನಾನೆಂದಿಗೂ ಮಾತು ತಪ್ಪತಕ್ಕವಳಲ್ಲ. ನನ್ನ ಅಭಿಪ್ರಾಯದ ಒಂದು ಬಿಂದುವೂ ವಿಫಲವಾಗುವುದಕ್ಕೆ ನಾನು ಆಸ್ಪದಕೊಡತಕ್ಕವಳಲ್ಲ.

ಇವಾದಿಯಾಗಿ ಜುಮೆಲಿಯು ಹೇಳಿ, ಅಲ್ಲಿಂದೆದ್ದು ದೇವೇಂದ್ರನ ಹತ್ತಿರಕ್ಕೆ ಬಂದು, ಬಾಡಿದ ಮುಖವುಳ್ಳವಳಾಗಿ, ಕಣ್ಣುಗಳಿಂದ ನೀರನ್ನು ಸುರಿಸುತ್ತಾ ಥರಥರ ನಡುಗಲಾರಂಭಿಸಿದಳು.

ದೇವೇಂದ್ರನು ಮೊದಲಿನ ಸ್ಥೈರ್ಯದಿಂದಲೇ ಅಲುಗಾಡದೆ ನಿಂತಿದ್ದನು. ಅವನ ಹೃದಯದಲ್ಲಿನ ಅತ್ಯಧಿಕವಾದ ಅಧೀರತೆಯು ಮುಖದಲ್ಲಿ ಕಿಂಚಿತ್ತಾದರೂ ಕಾಣಿಸಿಕೊಳ್ಳಲಿಲ್ಲ.

ಜುಮೆಲಿ ಕೇಳಿದಳು,—ಹೇಳು, ದೇವೇಂದ್ರ, ನಿನಗೆ ಸಮ್ಮತವೋ ?

ದೇವೇಂದ್ರ ಹೇಳಿದನು,—ರೇವತಿಯೆಲ್ಲಿ ?

ಜು—ಇಲ್ಲಿಯೇ ಇರುವಳು.

ದೇ—ನನ್ನನ್ನು ಅವಳ ಹತ್ತಿರ ಕರೆದುಕೊಂಡು ಹೋಗು.

ಜು—ಏತಕೆ ?

ದೇ—ಆಕೆಯನ್ನು ನೋಡಿದ ಮೇಲೆ, ನಿನಗೇನುತ್ತರ ಕೊಡಬೇಕೆಂಬುದನ್ನು ಆಲೋಚಿಸುವೆನು.

ಜು—ಹಾಗಾದರೆ ನಿನ್ನನ್ನೀಗಲೇ ಅವಳ ಹತ್ತಿರ ಕರೆದುಕೊಂಡು ಹೋಗುವೆನು.

ದೇ—ಕರೆದುಕೊಂಡು ಹೋಗು.

ಜು—ಆಮೇಲೆಯಾದರೂ ನನ್ನ ಪ್ರಶ್ನೆಗೆ ಉತ್ತರ ಕೊಡಬಲ್ಲೆಯು ?

ದೇ—ಆಗಲಿ.

ಜು—ಹಾಗಾದರೆ ನನ್ನ ಜತೆಯಲ್ಲಿಬಾ. ನೀನು ನಿಜವಾಗಿಯೂ ಒಪ್ಪಿಕೊಳ್ಳುವೆ ; ನೀನು ಅವಳನ್ನು ಪ್ರೀತಿಸುವುದರಿಂದ ಅವಳ ಮುಖವು ಕಂಡಕೂಡಲೆ ನೀನೆಂದಿಗೂ ನನ್ನ ಪ್ರಾರ್ಥನೆಯನ್ನು ತಿರಸ್ಕರಿಸಲಾರೆ—ಬಾ.

* * *

ಜುಮೆಲೆಯು ದೇವೇಂದ್ರನನ್ನು ಕರೆದುಕೊಂಡು ಪಕ್ಕದ ಕೋಣೆಯೊಳಗೆ ಪ್ರವೇಶಮಾಡಿದಳು. ಅಲ್ಲಿದ್ದ ಒಂದು ಮರದ ಮಂಚದಮೇಲೆ, ರೇವತಿಯು ಮೃತಪ್ರಾಯಳಾಗಿ ಬಿದ್ದಿದ್ದಳು.

ರೇವತಿಯ ಮುಖಮಂಡಲವು ಹೆಣದ ಮುಖದಂತೆ ಕೇವಲ ಕುಂದಿಹೋಗಿ ವಿವರ್ಣವಾಗಿರುವುದು. ಆಕೆಯನ್ನು ನೋಡಿದಾಕ್ಷಣವೇ ದೇವೇಂದ್ರನ ಹೃದಯದಲ್ಲಿ, ಹಿಂದೆ

ಎಂದೂ ಅನುಭವಿಸದ ಅನಿರ್ವಚನೀಯವಾದ ಶೈತ್ಯವುಂಟಾಗಿ, ಆತನ ಶರೀರವೆಲ್ಲವೂ ಅರಳಿಯ ಎಲೆಯಂತೆ ನಡುಗಲಾರಂಭಿಸಿತು. ಇಂತಹ ಭಯಂಕರವಾದ ಅವಸ್ಥೆಯನ್ನು ಆತನೆಂದಿಗೂ ನೋಡಿರಲಿಲ್ಲ. ದೇವೇಂದ್ರನ ಆ ಕಾಲದ ಭಾವವನ್ನು ಕುರಿತು ವರ್ಣಿಸಲು ಆದಿಶೇಷನಿಗೂ ಅಸದಳವು. ಆದರೆ, ಅತನ ಬಹಿರ್ಭಾವಗಳೆಲ್ಲವೂ ಸ್ಥಿರವಾಗಿದ್ದುವು. ದೇವೇಂದ್ರನು ಈ ದೃಶ್ಯವನ್ನು ನೋಡಿದ ಬಳಿಕ, ಅತಿ ತೀವ್ರವಾದ ದೃಷ್ಟಿಯಿಂದ ಜುವೆಲೆಯನ್ನೊಂದುಸಲ ನೋಡಿ, ಕರ್ಕಶವಾದ ಸ್ವರದಿಂದ, "ಜುವೆಲೆ! ನಾನು ಸಮ್ಮತಿಸಲಾರೆನು," ಎಂದು ಉತ್ತರವಿತ್ತನು.

ಆರನೆಯ ಸಂಧಿ.

(ಸತ್ತೋಗಾಯುವಳು)

'ನಾನು ಸಮ್ಮತಿಸಲಾರೆನು, ದೇವೇಂದ್ರನು ಹೀಗೆ ಹೇಳಿದ ಮಾತನ್ನು ಕೇಳಿದೊಡನೆಯೇ ಜುವೆಲೆಯ ಸರ್ವಾಂಗವೂ ನಡುಗಿಬಿಟ್ಟಿತು. ಹೃದಯದ ಆವೇಗವು ತನ್ನನ್ನು ಧ್ವಂಸಮಾಡುತಿದ್ದರೂ, ಅದನ್ನು ಅತಿಪ್ರಯಾಸದಿಂದ ಹೃದಯದಲ್ಲಿಯೇ ಅಡಗಿಸಿಕೊಂಡು, ಜುವೆಲೆಯು ಸಹುನಗುತ ದುಡುಕಬೇಡ, ದೇವೇಂದ್ರ, ಚೆನ್ನಾಗಿಯೂ ಯೋಚಿಸಿ ನೋಡು, ಎಂದು ಮೃದುಮಧುರ ಸ್ವರದಿಂದ ಹೇಳಿ ತ್ರಿಭುವನ ಮನೋಮೋಹಕವಾದ ತನ್ನ ತೀಕ್ಷ್ಣವಾದ ಕಟಾಕ್ಷವನ್ನು ದೇವೇಂದ್ರನ ಮೇಲೆ ಬೀರಿದಳು.

ಯೋಚಿಸಿ ನೋಡಿದೆನು- ನಾನು ಸಮ್ಮತಿಸಲಾರೆನು?

ಹಾಗಾದರ ನೀನು ನನ್ನ ಮಾತಿಗೆ ಒಪ್ಪುವುದಿಲ್ಲವೊ ?

ಒಪ್ಪುವುದಿಲ್ಲ.

ದೇವೇಂದ್ರ, ನೀನು ಅಷ್ಟೇನೂ ಬುದ್ಧಿವಂತನಾಗಿ ಕಾಣಲಿಲ್ಲ. ನಿನ್ನ ಹೆಂಡತಿಯು ಈ ಅವಸ್ಥೆಯನ್ನು ನೋಡಿಯೂ ನಿನಗೆ ಸರಿಯಾದ ಉತ್ತರಕೊಡಲು ಮನಸ್ಸು ಬರಲಿಲ್ಲವೇ ಇದೇ ನೀನು ಕೊಡುವ ಉತ್ತರ ?

ಅಹುದು.

ನೀನು ಏನುಕಂಡು ಈರೀತಿ ಉತ್ತರವಿತ್ತೆ ?

ನನ್ನ ಹೆಂಡತಿಗೆ ಏನೂ ಆಗಿಲ್ಲ. ಮುಖಮಂಡಲವು ಬಾಡಿರುವುದೇನೋ ನಿಜ, ಆದರೆ ಅದು ತೇಜೋಹೀನವಾಗಿಯೂ, ಭಯಂಕರವಾಗಿಯೂ ಇಲ್ಲ. ಜಾಮಿಲೆ! ನಿನ್ನಿಂದ ಎಷ್ಟು ಅನರ್ಥವು ಸಾಧ್ಯವೋ, ಅಷ್ಟು ನೀನುಮಾಡಿರುವೆ. ನೀನು ಯಾವ ಪಾಪದಿಂದ ತಾನೇ ಲಿಪ್ತಳಾಗಿಲ್ಲ. ಪವಿತ್ರ ಯೆಂಬುದು ಸಾಮಾನ್ಯವಾದುದೇ ! ಅದು ನಿನಗೆ ತಿಳಿಯುದೇ ಇಲ್ಲ. ಹೀಗಿರುವುದಾಗಿದ್ದರೂ, „ನೀನು ನನ್ನನ್ನು ಪ್ರೀತಿಸುವೆಯ ?,, ಎಂದು ಕೇಳುವೆಯಲ್ಲ ?

ಅಹುದು, ಈಗಲೂ ಕೇಳುವೆ, ನಾನು ನಿನಗಾಗಿ ಉನ್ಮಾದಿನಿಯಾಗಿರುವೆನು.

ನೀನು ಆದರೆ ಆಗು, ನಾನು ಮಾತ್ರ ನಿನ್ನನ್ನು ಅಂತಃಕರಣಪೂರ್ವಕವಾಗಿ ದ್ವೇಷಿಸುವೆನು.

ದೇವೇಂದ್ರ ! ಕೊನೆಗೂ ಇದೇ ಉತ್ತರವೆ ! ನಿರ್ದಯ !

ನಾನು ಅನ್ಯಾಯವಾದುದನ್ನೇನೂ ಹೇಳಿಲ್ಲ. ನನ್ನ

ಅಭಿಪ್ರಾಯವು ನಿನಗೆ ಚೆನ್ನಾಗಿಯೂ ತಿಳಿಯಿತೋ ಇಲ್ಲ ವೋ, ನನಗೆ ಗೊತ್ತಿಲ್ಲ. ನೀನು ಹೆಂಗಸಾಗಿದ್ದಲ್ಲಿ ನನ್ನ ಅಭಿಪ್ರಾಯವು ನಿನಗೆ ಅರ್ಥವಾಗದೆಂದರೇನು ? ಬಹುಶಃ ವಿಶ್ವವಿಧಾತನು ನಿನ್ನನ್ನು ಹೆಂಗಸಾಗಿ ನಿರ್ಮಾಣ ಮಾಡಿದ ನಾದರೂ, ಹೆಂಗಸಿನ ಹೃದಯವನ್ನು ಮಾತ್ರ ನಿನ್ನಲ್ಲಿ ನಿರ್ಮಾಣಮಾಡುವುದಕ್ಕೆ ಮರತೇ ಹೋದನು. ಒಳ್ಳೆಯದು ನೀನೇ ಯೋಚಿಸಿನೋಡು. ನೀನೇ ರೇವತಿಯಾಗಿದ್ದಿದ್ದರೆ--

ಹೇಳು, ಹೇಳು, ದೇವೇಂದ್ರ ! ನಿನ್ನ ಮುಖದಲ್ಲಿ ಪುಷ್ಪಚಂದನವು ವರ್ಷಿಸಲಿ, ನಿನ್ನ ಬಾಯಿಂದ ಈ ಮಾತನ್ನು ಕೇಳಿ, ನನ್ನ ಆನಂದವು ಹೃದಯದೊಳಗೆ ಅಡಗಿರಲಾರದು.

ದೇವೇಂದ್ರನು ಹೇಳತೊಡಗಿದನು—

ನೀನು ರೇವತಿಯಾಗಿದ್ದಿದ್ದರೆ, ನಿನ್ನ ಸ್ವಾಮಿಯು ನಿನ್ನನ್ನು ಬಹಳವಾಗಿ ಪ್ರೀತಿಸುತಿದ್ದನು ; ನೀನು ಕಾರಣಾಂತರದಿಂದ ಇಲ್ಲಿ ಮೃತಪ್ರಾಯಳಾಗಿ ಬಿದ್ದಿರುವೆಯೆಂದು ಯೋಚಿಸಿನೋಡು, ಇಂತಹ ಸಮಯದಲ್ಲಿ ಮತ್ತೊಬ್ಬ ಹೆಂಗಸು ನಿನ್ನ ಸ್ವಾಮಿಯ ಹತ್ತಿರ ಈ ರೀತಿಯಾದ ನೀಚಾಭಿಪ್ರಾಯವನ್ನು ತಿಳಿಯ ಪಡಿಸುವುದಾದರೆ, ನಿನ್ನ ಹೃದಯದಲ್ಲಿ ಎಂತಹ ಭಾವವು ಆವಿರ್ಭವಿಸುವುದು, ಅದು ನಿನಗೆ ಗೊತ್ತಾಗುವುದೋ ? ಆಗ ನೀನು ನಿನ್ನ ಪ್ರಾಣದ ಸಂರಕ್ಷಣೆಗೋಸ್ಕರ ನಿನ್ನ ಸ್ವಾಮಿಯನ್ನು ಪರಸ್ತ್ರೀಯ ಕೈಯಲ್ಲಿಟ್ಟು ಬರುವೆಯೋ ? ಜುಮೆಲಿ !

ಇಲ್ಲ ! ಇಲ್ಲ!! ಇಲ್ಲ!!! ಇಲ್ಲ!!!! ಯಾವಾಗಲೂ ಇಲ್ಲ ! ಸಾವಿರ ಸಲಕ್ಕೂ ಇಲ್ಲ !!

ಹಾಗಾದರೆ, ಜುವೆಲೆ! ನೀನು ನಿನ್ನ ಪ್ರಶ್ನೆಗೆ ಉತ್ತರವನ್ನು ನಿನ್ನ ಬಾಯಿಂದಲೇ ಹೊಂದಲಿಲ್ಲವೇ? ನೀನು ಯಾವಳ ಪ್ರಾಣವನ್ನಾದರೂ ಹಾಳುಮಾಡಿ, ನನ್ನನ್ನು ಹೊಂದಬೇಕೆಂದು ಯತ್ನಿಸಿರುವೆಯೋ, ಅವಳಿಗೆ ನಾನು ಹೆಚ್ಚೇ ಹೊರತು, ಅವಳ ಪ್ರಾಣವು ಅವಳಿಗೆ ಹೆಚ್ಚಲ್ಲ. ಮತ್ತು, ನಾನು ನನ್ನ ಹೆಂಡತಿಯನ್ನು ನಿಜವಾಗಿಯೂ ಪ್ರೀತಿಸುವೆನು. ಹೀಗಿರುವಲ್ಲಿ ನಾನು ಆಕೆಗೆ ಅಸಮ್ಮತವಾದ ಕೆಲಸದಲ್ಲಿ ಕೈಹಾಕುವುದು ಧರ್ಮವಾಗಿ ಕಂಡುಬರುವುದಿಲ್ಲ.

ಹಾಗಾದರೆ ನನ್ನ ಪ್ರಶ್ನೆಗೆ ‹ಇಲ್ಲ, ಎಂಬುದೇ ಉತ್ತರ? ಇರಲಿ, ನಿನ್ನ ಹೆಂಡತಿಯು ಮರಣಕ್ಕೆ ನೀನೇ ಕಾರಣನೆಂದುತಿಳಿ.

ನೀನು ಯಾವ ಕಾರಣದಿಂದಲೂ ನಿನ್ನ ಅಭಿಪ್ರಾಯವನ್ನು ಬದಲಾಯಿಸಲಾರೆ?

ಹಾಗಾದರೆ ನೀನು ನನ್ನನ್ನು ದ್ವೇಷಿಸುವೆಯೋ?

ಚೆನ್ನಾಗಿಯೂ ದ್ವೇಷಿಸುವೆನು.

ಹಾಗಾದರೆ ರೇವತಿಯು ಚೆನ್ನಾಗಿಯೂಸಾಯುವಳು.

ಅವಳೊಬ್ಬಳೇ ಸಾಯುವುದಿಲ್ಲವೆಂಬುದೂ ನಿಜ.

ಹೊ! ಹೊ!! ಹೊ!!! (ಹಾಸ್ಯ) ನೀನು ನನ್ನನ್ನು ಹೆದರಿಸುವಂತಿದೆ.

ಅಹುದು.

ಜುವೆಲೆಯು ಮತ್ತೆ ನಕ್ಕಳು. ಆವಳ ಅಮಂಗಳ ಜನಕವಾದ ಪೈಶಾಚಿಕಾಟ್ಟಹಾಸವು, ಮೇಘವಿಲ್ಲದ ಗಗನ ಮಂಡಲದಲ್ಲಿ ಗಂಭೀರವಾದ ಗುಡುಗಿನಂತೆ ದಿಗಂತವನ್ನು

ವ್ಯಾಪಿಸಿತು. ಬಳಿಕ ಜುಮೇಲೆಯು,--ನಿನಗೆ ನಾನು ಹೆದರುವುದಿಲ್ಲ. ಹೆದರುವುದನ್ನು ನಾನೆಂದಿಗೂ ಕಲಿತವಳೇ ಅಲ್ಲ, ಎಂದಳು.

ದೇ—ಹಿಂದೆ ಕಲಿಯದಿದ್ದರೆ, ಇಂದು ಕಲಿಯುವೆ.

ಜು—ಅದೇನು ?

ದೇ—ನೀನೀಗ ಕಲಿಯದಿದ್ದರೆ, ನನ್ನ ಕೆಲಸವು ಸಫಲವಾಗುವ ಬಗೆ ಹೇಗೆ ?

ಜು—ನಿನ್ನ ಕೆಲಸ ?

ದೇ—ಹೌದು, ನನ್ನ ಕೆಲಸ.

ಜು—ಅದೆಂತಹ ಕೆಲಸ.

ದೇ—ನೀನು ಏನು ಮಾಡುವೆಯೆಂದು ಹೇಳಿದ್ದೆಯೋ, ಅದೇ ಕೆಲಸ.

ಜು—ನಾನು ಏನು ಕೆಲಸ ಮಾಡುವೆನೆಂದು ನಿನಗೆ ಹೇಳಿದ್ದೆನು ? ಹೇಳು. ನೀನು ಹೇಳುವುದು ನನಗೆ ಗೊತ್ತಾಗಲಿಲ್ಲ.

ದೇ—ನೀನು ನನಗೆ ಯಾವಯಾವ ಹಿಂಸೆಯನ್ನುಂಟುಮಾಡಬೇಕೆಂದು ಸಂಕಲ್ಪಮಾಡಿರುವೆಯೋ, ಅವೆಲ್ಲವನ್ನೂ ನೀನೇ ಅನುಭವಿಸುವಂತೆಮಾಡುವೆನು. ಪಿಶಾಚಿಯಾದ ನಿನ್ನ ಕೆಲಸಕ್ಕೆ ಪೈಶಾಚವೃತ್ತಿಯಿಂದಲೇ ಪ್ರತಿಫಲವನ್ನುಂಟುಮಾಡಬೇಕೇ ಹೊರತು ಮನುಷ್ಯಸಾಮಾನ್ಯವಾದ ಕೆಲಸವು ನಿನಗೆ ಸಲ್ಲದು. ಆದುದರಿಂದ ನಾನೂ ಪ್ರಕೃತ ಪಿಶಾಚನಾಗುವೆನು. ನಿನ್ನ ತಲೆಯ ಕೂದಲುಗಳೆಲ್ಲವನ್ನೂ ಹಿರಿದು, ಮಹಾ ಪಾತಕಗಳಿಗೆ ಆಕರವಾದ ನಿನ್ನ ತಲೆಯನ್ನು ನುಣ್ಣಗೆ ಮಾಡುವೆನು, ಇದಲ್ಲದೆ ನಿನ್ನ ಎರಡು ಕಣ್ಣುಗಳ

ನ್ನೂ ಕಿತ್ತು ಬಿಸುಡುವೆನು.

ಜುಮೆಲೆಯು ನಗುವುದಕ್ಕೆ ಯತ್ನಮಾಡಿದಳು; ಆದರೆ ಸಾಧ್ಯವಾಗಲಿಲ್ಲ.

ದೇವೇಂದ್ರನು ಮತ್ತಿಂತೆಂದನು.

ನಿನ್ನ ಸಮೀಪದಲ್ಲಿ ಯಾವ ಪ್ರಕಾರವಾದ ವಿಷವಿರುವುದೋ, ಅದನ್ನು ಮೊದಲು ನಿನ್ನಿಂದ ಕಿತ್ತು, ಅನಂತರ ನಿನ್ನ ತಲೆಯನ್ನು ಬೋಳಿಸಿ, ಕಣ್ಣುಗಳನ್ನು ಕೀಳಿಸಿ ನಿನ್ನನ್ನು ಕುರೂಪಿಣಿಯನ್ನಾಗಿ ಮಾಡಿ ಹೊಟ್ಟೆಗೆ ಹಾಕದೆ ಬೀದಿ ಬೀದಿಗಳಲ್ಲಿಯೂ ನಿನ್ನನ್ನು ಮೆರವಣಿಗೆ ಮಾಡುವೆನು.

ಜು—(ರೋಷದಿಂದ) ನೀನು ! ನೀನು ಇದೆಲ್ಲವನ್ನೂ ಮಾಡಬಲ್ಲೆಯು ?

ದೇ—ಅಹುದು, ನಾನೇ ಇದೆಲ್ಲವನ್ನೂ ಮಾಡುವೆನು.

ಜು—ನೀನು ! ದೇವೇಂದ್ರ ವಿಜಯು !

ಆ—ಆಃ, ಜುಮೆಲೆ ! ಮರೆತು ಬಿಟ್ಟೆಯು ? ದೇವೇಂದ್ರ ವಿಜಯನು ಸತ್ತುಹೋಗಿ, ಅವನ ಶರೀರದಲ್ಲಿ ಪಿಶಾಚವೊಂದು ಆವರಿಸಿಕೊಂಡಿರುವುದು. ಆ ಪಿಶಾಚವು, ನೀನು ಎಲ್ಲಿನವರೆಗೂ ಸಾಯುವುದಿಲ್ಲವೋ, ಅಲ್ಲಿನವರೆಗೂ ನಿನ್ನನ್ನು ಎಡೆಬಿಡದೆ ಬಂದೇ ಸಮನಾಗಿ ನರಕ ಯಾತನೆಯನ್ನುಂಟು ಮಾಡದೇ ಬಿಡದು. ಜುಮೆಲೆ ! ಮೇಲೆ ಮೇಲೆ ಹೊಸ ಹೊಸ ಯಾತನೆ, ಮರೆಯದಿರು ಕಂಡೆಯಾ.

ಜು—(ರೋಷದಿಂದ) ಮುಟ್ಠಾಳ ! ನೀನು ಕೊಡುವ ಯಾತನೆಗಳೆಲ್ಲವನ್ನೂ ಕುರಿಯಂತೆ ಸಹಿಸುವುದಕ್ಕಾಗಿ ನಿನ್ನಿದಿರಿಗೆ ನಾನು ನಿಂತಿರುವೆನೆಂದು ನೀನು ತಿಳಿದೆಯಲ್ಲವೇ?

ದೇ—ನೀನು ಏನುಮಾಡಬಲ್ಲೆ ? ಸಾಯುವೆಯು?

ಆಗಲಾರದು. ನೀನು ಆತ್ಮಹತ್ಯೆಯನ್ನು ಮಾಡಿಕೊಳ್ಳುವು ದಕ್ಕಾಗಿ ವಿಷವನ್ನೇನಾದರೂ ಹೊರಗೆ ತೆಗೆಯುವುದಾದರೆ ಆ ಕ್ಷಣವೇ ಬಂದೂಕಿನಿಂದ ನಿನ್ನ ಕೈಗಳನ್ನು ಸುಟ್ಟು ಬೂದಿಮಾಡಿ ಬಿಡುವೆನು; ಬಂದು ವೇಳೆ ಇಲ್ಲಿಂದ ಓಡಿ ಹೋಗಲು ಯತ್ನವಮಾಡುವುದಾದರೂ ನಿನ್ನ ಕಾಲುಗಳನ್ನು ಕತ್ತರಿಸಿ ಹಾಕುವೆನು.

ಜುಮೆಲೆಯು ತಿರಸ್ಕಾರ ಸೂಚಕವಾದ ಭಯಂಕ ರವಾದ ನಗೆಯನ್ನು ನಕ್ಕಳು.

ದೇವೇಂದ್ರನು ಹಲ್ಲುಗಳನ್ನು ಕಟಕಟ ಕಡಿಯು ತ್ತಾ, ‹ಜುಮೆಲೆ! ನಗುವೆಯಲ್ಲವೇ ! ನಾನು ಹೇಳುವುದು ಎಂದಿಗೂ ಸುಳ್ಳಲ್ಲ. ಅದಕ್ಕೆ ಪ್ರಮಾಣವನ್ನು ಈಗಲೆ ಹೊಂದುವೆ, ಎಂದನು.

ಜು—ಎಲ್ಲಿ ಪ್ರಮಾಣವನ್ನು ತೋರಿಸು.

ದೇ—ತೋರಿಸುವೆನು, ನಿನ್ನ ಕಿವಿಯಲ್ಲಿ ಜೋಲಾ ಡುತ್ತಿರುವ ನೀಲದ ಬಾವಲಿಯಲ್ಲಿ, ನೀನು ಚಮತ್ಕಾರ ದಿಂದ ವಿಷವನ್ನು ಸಂಚಯಮಾಡಿಟ್ಟಿರುವೆ. ಅದರ ಕಟ್ಟಡ ವನ್ನು ನೋಡಿದರೇ ಗೊತ್ತಾಗುವುದು. ಮೊದಲು ಅದನ್ನು ಧ್ವಂಸಮಾಡುವುದೇ ಒಳ್ಳೆಯದು.

ಹೀಗೆ ಹೇಳುತ ಹೇಳುತ ದೇವೇಂದ್ರನು ತನ್ನ ಪಿಸ್ತೂ ಲನ್ನು ಹೊರಗೆ ತೆಗೆದು, ಮೇಲೆ ಮೇಲೆ ಎರಡು ಸಲ ಹಾರಿಸಿದನು. ಆ ಕ್ಷಣವೇ ಜುಮೆಲೆಯ ಕಿವಿಯಲ್ಲಿದ್ದ ಬಾ ವಲಿಗಳೆರಡೂ ಪುಡಿಪುಡಿಯಾಗಿ ಚೆದರಿಹೋದುವು. ಹೊಗೆ ಯಿಂದ ಕೊಠಡಿಯೆಲ್ಲವೂ ತುಂಬಿಹೋಗಿ, ಯಾರಿಗೂ ದಿಕ್ಕುಕಾಣದೇ ಹೋಯಿತು. ದೇವೇಂದ್ರನು ತನ್ನ ಪಿಸ್ತೂ

ಲನ್ನು ಮತ್ತೆ ಒಳಗೆ ಮುಚ್ಚಿಟ್ಟನು.

ಜುಮೆಲೆಯು ಭಯದಿಂದ ಚೀತ್ಕಾರಮಾಡುತ್ತಾ ಹತ್ತು ಹೆಜ್ಜೆ ಹಿಂದಕ್ಕೆ ಸರಿದು ಬಂದು ಮೂಲೆಯಲ್ಲಿ ಅವಿತುಕೊಂಡು ದೇವೇಂದ್ರನ ಮೇಲೆ ಕೈಮಾಡುವುದಕ್ಕೆ ಯತ್ನಮಾಡಲು, ದೇವೇಂದ್ರನು, ‹ಎಚ್ಚರಿಕೆ! ಕೈಯೆತ್ತಬೇಡ, ಎತ್ತಿದರೆ ನಿನ್ನ ಕೈಗಳನ್ನು ಸುಟ್ಟುಬಿಡುವೆನು. ಜುಮೆಲೆ! ಇದು ಹಾಸ್ಯೋದ್ದೀಪಕವಾದ ಪ್ರಹಸನವಲ್ಲ; ಇದು ಪೈಶಾಚಿಕ ಘಟನಾವಳಿಗಳಿಂದ ಪರಿಪೂರ್ಣವಾಗಿ ಅತಿಭಯಂಕರವಾದ ವಿಯೋಗಾಂತ ನಾಟಕ (Tragedy)

ಏಳನೆಯ ಸಂಧಿ.

(ಸಿಕ್ಕಿಬಿದ್ದಳು)

ದೇವೇಂದ್ರ ವಿಜಯನು, ಎರಡುಸಲ ಪಿಸ್ತೂಲಿನ ಶಬ್ದವನ್ನು ಮೇಲೆ ಮೇಲೆ ಮಾಡಿದ ಕೂಡಲೆ, ಶಚೀಂದ್ರನು ತಾನಿದ್ದಲ್ಲಿಗೆ ಬರುವುದಾಗಿ ತಿಳಿದುಕೊಂಡನು. ಎರಡಾವೃತ್ತಿ ಪಿಸ್ತೂಲಿನ ಶಬ್ದವನ್ನು ಮಾಡಿದರೆ, ಶಚೀಂದ್ರನು ತಾನಿದ್ದಲ್ಲಿಗೆ ಬರಬೇಕೆಂದು ಮೊದಲೇ ಸಂಕೇತವಾಗಿದ್ದ ಕಾರಣ, ಶಚೀಂದ್ರನು ತಡಮಾಡದೆ ನಿಶ್ಶಬ್ದವಾಗಿ ಬಂದು ಜುಮೆಲೆಯ ಹಿಂಭಾಗದಲ್ಲಿ ನಿಂತುಕೊಂಡನು. ಶಚೀಂದ್ರನು ಬಂದುದು ದೇವೇಂದ್ರನಿಗೆ ತಿಳಿಯಿತು; ಜುಮೆಲೆಗೆ ಮಾತ್ರ ಗೊತ್ತಾಗಲಿಲ್ಲ. ಶಚೀಂದ್ರನು ತನ್ನ ಭಿಕ್ಷುಕ ವೇಷವನ್ನು ಬದಲಾಯಿಸಿ, ಪೋಲೀಸಿನವರ ವೇಷವನ್ನು-ಅಂದರೆ ಯೂನಿಫಾರಮನ್ನು ಧರಿಸಿಕೊಂಡು ಬಂದು ನಿಂತಿದ್ದನು.

ದೇವೇಂದ್ರನು ಮಾತನಾಡಿದನು— ಜುಮೆಲೆ! ನೀನು

ಸತ್ತರೂ ನನ್ನನ್ನು ಹಿಂಬಾಲಿಸುವುದಾಗಿ ಹಿಂದೊಂದು ದಿನ ನನಗೆ ತಿಳಿಸಿಲ್ಲವೇ ? ನಾನೊಂದು ವೇಳೆ ಸತ್ತರೂ, ನಾನೂ ನಿನ್ನನ್ನು ಹಿಂಬಾಲಿಸದೇ ಬಿಡೆನು. ನಾನು ಪಿಶಾಚದಂತೆ ಕಣ್ಣಿಗೆ ಕಾಣಿಸದಂತೆ ನಿನ್ನ ಹಿಂದೆಯೇ ಇರುವೆನು, ನಿನಗೆ ಮಾತ್ರ ಅದು ಖಂಡಿತವಾಗಿಯೂ ಗೊತ್ತಾಗುವುದಿಲ್ಲ. ಆ ಬಳಿಕ ನಾನು ನಿನ್ನ ಎರಡು ಕೈಗಳನ್ನೂ ಜೋಡಿಸಿ ಕಟ್ಟಿ ಹಾಕುವೆನು. ಅದರಿಂದ ನಿನಗೆ ಅಲುಗಾಡುವುದಕ್ಕೂ ಶಕ್ತಿಯಿರುವುದಿಲ್ಲ. ಇದೆಲ್ಲವೂ ನಿನಗೆ ತಿಳಿಯಿತೋ ?

ಜು—ಇಲ್ಲ.

ದೇ—ಈಗಲೇ ತಿಳಿಸುವೆನು.

ಆಗ ಶಚೀಂದ್ರನು ಜುಮೆಲೆಯ ಎರಡು ಕೈಗಳನ್ನೂ ಹಿಂದಕ್ಕೆ ಎಳೆದು ಜೋಡಿಸಿ ಬಲವಾಗಿ ಹಿಡಿದುಕೊಂಡನು. ಜುಮೆಲೆಯು ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಎಷ್ಟೆಷ್ಟೋ ಯತ್ನ ಮಾಡಿದಳು, ಅರಚಿಕೊಂಡಳು. ಏನು ಮಾಡಿದರೂ ಶಚೀಂದ್ರನ ಹಿಡಿತದಿಂದ ತಪ್ಪಿಸಿ ಕೊಳ್ಳುವುದಕ್ಕೆ ಜುಮೆಲೆಗೆ ಸಾಧ್ಯವಾಗಲಿಲ್ಲ. ಇದನ್ನು ನೋಡಿ ದೇವೇಂದ್ರನು, ಜುಮೆಲೆ, ಈಗ ನೀನು ಅಸಹಾಯಳು-ಓಡಿಹೋಗಲು ಉಪಾಯವಿಲ್ಲ ; ನಾನೀಗಲೇ ನಿನ್ನ ಕೈಗಳಿಗೆ ಹಾತ್ ಬೇಡಿಯನ್ನೂ ಕಾಲುಗಳಿಗೆ ಕಾಲುಬೇಡಿಯನ್ನೂ ತೊಡಿಸುವೆನು. ಅನಂತರ ನಾನು ಮೊದಲು ಹೇಳಿದ ಯಾತನೆ ಯೆಲ್ಲವನ್ನೂ ನಿನ್ನಲ್ಲಿ ಪ್ರಯೋಗಿಸುವೆನು, ಎಂದು ಹೇಳಿದನು.

ಆ ಕೂಡಲೆ ಜುಮೆಲೆಯ ಕೈಕಾಲುಗಳಿಗೆ ಬೇಡಿಗಳು ತೊಡಿಸಲ್ಪಟ್ಟುವು. ಬಳಿಕ ದೇವೇಂದ್ರನು ಆಕೆಯನ್ನು ಒಂದು ಕುರ್ಚಿಯ ಮೇಲೆ ಕುಳ್ಳಿರಿಸಿ, ಒಂದು ಸರಪಳಿ

ಯಿಂದ ಆಕೆಯನ್ನು ಆ ಕುರ್ಚಿಗೆ ಬಿಗಿದು ಕಟ್ಟಿದನು. ಆ ಸಂದರ್ಭದಲ್ಲಿ ಜುಮೇಲೆಯು ಶಚೀಂದ್ರನನ್ನು ನೋಡಿದಳೇ ಹೊರತು, ಅದಕ್ಕೆ ಮೊದಲು ನೋಡಲಿಲ್ಲ. 'ಸುಟ್ಟ ಮೋರೆಯುವಳಾದ ನನಗೆ ಇದಾವುದೂ ಮೊದಲೇ ಗೊತ್ತಾಗಲಿಲ್ಲವಲ್ಲ.', ಎಂದು ಜುಮೇಲೆಯು ಗೊಣಗುಟ್ಟಿಕೊಂಡಳು.

ಶಚೀಂದ್ರನು ಮಾತನಾಡಿದನು-ನೀನು ಯಾವನನ್ನು ಬಾಗಿಲು ಕಾಯುವುದಕ್ಕೆ ಇಟ್ಟದ್ದಿಯೋ, ಆತನನ್ನು ನಾನು ಕಟ್ಟಿಹಾಕಿ, ಬಂದು ಗಿಡದ ಕೆಳಗೆ ಉರುಳಿಸದೆ ಹೋಗಿದ್ದಿದ್ದರೆ ನಾನು ಬಂದಿದ್ದುದನ್ನು ನೀನು ತಿಳಿಯುತಿದ್ದೆ. ಜುಮೇಲಿಯಾ! ಈಗ ನಮ್ಮಗಳ ದಯೆಯಿಂದ ನಿನ್ನ ಪ್ರಾಣವು ಉಳಿದುಕೊಂಡಿರುವುದು.

ದೇವೇಂದ್ರನು ಹೇಳಿದನು-ಸರಿ ಸರಿ, ಜುಮೆಲೆ ! ನೀನು ಯಾರನ್ನು ಪ್ರೀತಿಸುವೆಯೋ, ಆತನ ದಯೆಯಿಂದಲೇ ನಿನ್ನ ಪ್ರಾಣವು ಉಳಿದುಕೊಂಡಿರುವುದು.

ಜು—ದೇವೇಂದ್ರ, ಹಾಗಾದರೆ ನನ್ನೊಡನೆ ನೀನು ಕರಾರು ಮಾಡಿಕೊಳ್ಳಲು ಒಪ್ಪುವುದಿಲ್ಲ.

ದೇ—ಕರಾರು ! ಇಲ್ಲ, ಏತಕೆ ಕರಾರು ಮಾಡಿಕೊಳ್ಳಬೇಕು ?

ಜು—ರೇವತಿಯನ್ನು ಕಾಪಾಡಿಕೊಳ್ಳುವುದಕ್ಕೆ ನಿನಗೆ ಇಷ್ಟವಿಲ್ಲವೋ ?

ದೇ---ಸಾಧ್ಯವಾದರೆ ಮಾಡಿಕೊಳ್ಳುವೆನು.

ಜು— ಸಾಧ್ಯವಾಗುವುದಕ್ಕೆ ಕುಂದನ್ನುಂಟುಮಾಡಿಕೊಂಡಿರುವೆಯಲ್ಲ ?

ದೇ—ಅದು ಹೇಗೆ?

ಜು—ನನ್ನೊಡನೆ ನೀನು ಸಂಧಿಯನ್ನು ಮಾಡಿಕೊಳ್ಳಲಿಲ್ಲ.

ದೇ—ಅವಳನ್ನು ರಕ್ಷಿಸುವುದಿಲ್ಲವೆಂದು ನೀನು ಮೊದಲೇ ಹೇಳಿದ್ದೆಯಲ್ಲ.

ಜು—ಆಗ ನಾನು ನಿನ್ನ ಕೈಗೆ ಸಿಕ್ಕಿಬಿದ್ದಿರಲಿಲ್ಲ.

ದೇ—ಈಮಾತು ನಿಜ—ನಾನು ಮರತೇ ಹೋಗಿದ್ದೆ. ಯಾತರ ಪ್ರಯೋಗದಿಂದ ಜ್ಞಾನವುಂಟಾಗುವುದೋ, ಆ ಔಷಧವನ್ನು ನನ್ನ ಕೈಗೆ ಕೊಡಬಲ್ಲೆಯು?

ಜು—ನನ್ನನ್ನು ಬಿಡುಗಡೆ ಮಾಡಿದರೆ, ನಾನು ಕೊಡುವೆನು. ನಾನು ಹೋಗಿ ಔಷಧವನ್ನು ಸಂಪಾದಿಸಿಕೊಂಡು ಬರುವುದಕ್ಕೆ ನನಗೆ ೪೮ ಗಂಟೆಗಳು ಕಾಲವಿರಾಮವನ್ನು ಕೊಡುವುದಾದರೆ, ನಾನು ತಂದುಕೊಡುವೆನು.

ದೇ—ಈ ನಿನ್ನ ಆಶೆಯು ನೆರವೇರಲಾರದು.

ಜು—ಹಾಗಾದರೆ ನಿನ್ನ ಹೆಂಡತಿಯನ್ನು ಸಂರಕ್ಷಿಸಿಕೊಳ್ಳುವುದರಲ್ಲಿ ನಿನಗೆ ಇಷ್ಟವಿಲ್ಲ?

ದೇ—ಅವಳು ಬದುಕುವುದಿಲ್ಲವೆಂದು ನನಗೆ ನಂಬುಗೆ ಇಲ್ಲ. ಈಗಿನಿಂದಲೇ ನಾನು ನಿನಗೆ ಯಾತನೆಯನ್ನುಂಟುಮಾಡುವುದಕ್ಕೆ ಪ್ರಾರಂಭಿಸುವೆನು. (ಶಚೀಂದ್ರನ ಕಡೆ ನೋಡಿ) ಶಚಿ! ಈಗಲೇ ಈ ಚೂರಿಯಿಂದ ಈ ಜುಮೆಲೆಯ ಎರಡು ಕಿವಿಗಳನ್ನೂ ಕತ್ತರಿಸಿ ಹಾಕು.

ಜು—(ಚೀತ್ಕಾರಮಾಡುತ್ತಾ) ನನ್ನನ್ನು ಬದುಕಿಸಿ! ನನ್ನಲ್ಲಿ ದಯೆ ತೋರಿಸಿ!

ದೇ—ಯಾತರ ದಯೆ?

ಜು—ನಾನು ರೇವತಿಯನ್ನು ಬದುಕಿಸುವೆನು. ನನ್ನನ್ನು ಬದುಕಿಸಿ! ಬದುಕಿಸಿ!

ದೇ—ಹಾಗಾದರೆ ಅವಳನ್ನು ಬದುಕಿಸು.

ಜು—ನನ್ನ ಬಂಧನವನ್ನು ಬಿಡಿಸು.

ದೇ—ಆ ಆಶೆಯನ್ನು ಇಟ್ಟುಕೊಳ್ಳಬೇಡ.

ಜು—ನೀನು ನನ್ನ ಮಾತುಗಳಿಗೆಲ್ಲ ಸಮ್ಮತಿಸಿದೆಯ?

ದೇ—ನಾನು ಕೊಂಚವೂ ಸಮ್ಮತಿಸಲಿಲ್ಲ.

ಜು—ಹಾಗಾದರೆ ನಾನೆಂದಿಗೂ ಆಕೆಯನ್ನು ಬದುಕಿಸಲೊಲ್ಲೆನು. ಅವಳು ಸಾಯಲಿ; ಅವಳು ಬೂದಿಯಾಗಿ ಹೋಗಲಿ.

ದೇ—ಜುಮೇಲಿ! ಅವಳನ್ನು ಬದುಕಿಸು. ಅವಳು ನಿನ್ನನ್ನು ಬಿಟ್ಟುಬಿಡುವುದಾಗಿ ಹೇಳಿದರೆ, ನಾನು ಖಂಡಿತವಾಗಿಯೂ ನಿನ್ನನ್ನು ಬಿಟ್ಟುಬಿಡುವೆನು. ನಿನ್ನ ಭವಿಷ್ಯತ್ತು ಆಕೆಯ ಕೈಯಲ್ಲಿರುವುದೆಂದು ತಿಳಿ.

ಜು—ರೇವತಿಯ ಕೈಯಲ್ಲಿಯೋ? ಒಳ್ಳೆಯದು, ಆಕೆಯು ಒಪ್ಪಿದರೆ, ನೀನು ನನ್ನನ್ನು ಬಿಟ್ಟುಬಿಡುವೆಯಲ್ಲವೆ? ಹಾಗಾದರೆ ನಾನೀಗಲೇ ಆಕೆಯನ್ನು ಬದುಕಿಸಿ ಕೊಡುವೆನು. ನನ್ನನ್ನು ಬಿಡು; ನಾನು ಸುಳ್ಳುಹೇಳುವುದಿಲ್ಲ.

ದೇ—ಬಿಡಲಾಗುವುದಿಲ್ಲ.

ಜು—ಹಾಗಾದರೆ ನಾನು ಆಕೆಯನ್ನು ಹೇಗೆ ಬದುಕಿಸಲಿ?

ದೇ—ಏನು ಮಾಡಿದರೆ, ಆಕೆಗೆ ಜ್ಞಾನವುಂಟಾಗುವು

ದೋ, ಅದನ್ನು ನನಗೆ ಹೇಳಿಕೊಡು. ಆ ಕೆಲಸವನ್ನು ನಾನೇ ಮಾಡುವೆನು—ನೀನು ಬೇಡ. ನೀನು ಹೇಳಿದ್ದು ಫಲಿಸದೇ ಹೋದರೆ, ನೀನು ನರಕ ಯಾತನೆಯನ್ನು ಇಲ್ಲಿ ಯೇ ಅನುಭವಿಸುವೆ.

ಜು—ಅವಳು ಬದುಕಿದರೆ, ನನ್ನನ್ನು ನೀನು ಬಿ ಡುವೆಯಾ ?

ದೇ—ರೇವತಿಯು ಬಪ್ಪುವುದಾದರೆ ಬಿಡುವೆನು.

ಜು—ನೀನು ಮೊದಲು ನೋಡಿದ ಕೋಣೆಯಲ್ಲಿ ಒಂದು ಮೇಜಿನ ಮೇಲೆ ಕೈಪೆಟ್ಟಿಗೆಯೊಂದು ಇರುವು ದು. ಅದನ್ನು ತೆಗೆದುಕೊಂಡು ಬಾ. ಅದು ಹೇಗಿದೆ ಯೋ ಹಾಗೆಯೇ ತೆಗೆದುಕೊಂಡು ಬರಬೇಕು. ಎಚ್ಚ ರಿಕೆ! ಅದರ ಮುಚ್ಚಳ ಗಿಚ್ಚಳ ತೆಗೆದೀಯೆ !

ದೇವೇಂದ್ರನು ಆ ಕೂಡಲೆ ಹೋಗಿ ಕೈಪೆಟ್ಟಿಗೆಯ ನ್ನು ತಂದನು.

ಜು—ಈ ಪೆಟ್ಟಿಗೆಯಲ್ಲಿ ೧೩ನೆಯ ನಂಬರು ಸೀ ಸೆಯನ್ನು ಹೊರಗೆ ತೆಗದು ೫ ತೊಟ್ಟು ಔಷಧವನ್ನು ಆಕೆಗೆ ಕೊಡು.

ದೇ—ರೇವತಿಗೆ ಜ್ಞಾನ ತಪ್ಪಿಸಿದ ಔಷಧವಾವುದು? ಅದರ ನಂಬರೇನು ?

ಜು—ಅದರಿಂದ ನಿನಗೆ ಪ್ರಯೋಜನವೇನು ?

ದೇ—ಪ್ರಯೋಜನವಿದೆ.

ಜು—೩ನೆಯ ನಂಬರು.

ದೇ—ಒಳ್ಳೆಯದು, ೧೩ನೆಯ ನಂಬರಿನ ಔಷಧ ದಿಂದ ಪ್ರಯೋಜನವಾಗದಿದ್ದರೆ, ೩ನೇ ನಂಬರು ಔಷ

ಧವನ್ನು ನಿನಗೇ ತಿಂಡಿಸುವೆನು.

ಜು—ಫಲವಾಗುವುದು.

ದೇವೇಂದ್ರ ವಿಜಯನು ರೇವತಿಯು ಮೃತಪ್ರಾಯು ವಾದ ಕಪ್ಪೇರಿದ ದೇಹವನ್ನು ತನ್ನ ತೊಡೆಯ ಮೇಲೆ ಮೆಲ್ಲನೆ ಇಟ್ಟುಕೊಳ್ಳುವಾಗ, ಅವನ ಹೃದಯದಲ್ಲಿ ಎಂತಹ ಯಾತನೆಯುಂಟಾಗಿರಬಹುದೋ, ಅದನ್ನು ಸಂಸಾರದ ಸುಖದುಃಖಗಳೇನೆಂಬುದನ್ನೇ ಅರಿಯದ ಗ್ರಂಥಕಾರರಾದ ನಮ್ಮಿಂದ ವರ್ಣಿಸಲಸದಳವು. ಹೃದಯದಲ್ಲಿ ಅಪರಿಮಿತವಾದ ಸಂಕಟವು ಅಧಿಕಾರಮಾಡುತಿದ್ದರೂ, ದೇವೇಂದ್ರನ ಮುಖದಲ್ಲಿ ಮಾತ್ರ ಯಾತನೆಯ ಯಾವ ಚಿಹ್ನೆಯೂ ಕಂಡುಬರುತಿರಲಿಲ್ಲ. ದೇವೇಂದ್ರನು ಕಾಲಹರಣವನ್ನು ಸಹಿಸಲಾರದೆ, ಔಷಧವನ್ನು ತೊಟ್ಟು ತೊಟ್ಟಾಗಿ ರೇವತಿಯ ಬಾಯಲ್ಲಿ ಹಾಕಿದನು. ಆತನ ಕಣ್ಣೀರೂ ಆಕೆಯ ಬಾಯಲ್ಲಿ ಒಂದು ತೊಟ್ಟು ಜಾರಿಬಿದ್ದಿದ್ದರೂ ಬಿದ್ದಿರಬಹುದು.

ನಿಮಿಷಗಳ ಮೇಲೆ ನಿಮಿಷಗಳು ಕಳೆದುಹೋಗುತಿದ್ದುವು. ಮನೆಯಲ್ಲಿ ಯಾವ ವಿಧವಾದ ಶಬ್ದವೂ ಕೇಳಬರುತಿರಲಿಲ್ಲ.

ದೇವೇಂದ್ರನು ರಪ್ಪೆಹಾಕದೆ ರೇವತಿಯ ಮುಖವನ್ನೇ ನಿರೀಕ್ಷಿಸಿಕೊಂಡಿದ್ದನು. ಸ್ವಲ್ಪ ಹೊತ್ತಿನೊಳಗಾಗಿಯೇ, ರೇವತಿಯು ಎಚ್ಚೆತ್ತವಳಾಗಿ, ಮೆಲ್ಲನೆ ಕಣ್ಣುಗಳನ್ನು ಬಿಡಲಾರಂಭಿಸಿದಳು. ರೇವತಿಯು ಕಣ್ಣುಗಳನ್ನು ತೆರೆದ ಕೂಡಲೆ, ಕೋಣೆಯ ನಾಲ್ಕು ದಿಕ್ಕುಗಳನ್ನೂ ಆಶ್ಚರ್ಯದಿಂದ ನೋಡಿದಳು

ಎಂಟನೆಯ ಸಂಧಿ.

(ಇದೇನು ಇಂದ್ರಜಾಲವೋ.)

ರೇವತಿಯು ಕಣ್ಣುಗಳನ್ನು ತೆರೆದು ಸುತ್ತಲೂ ಏ ನಾವುದನ್ನು ನೋಡಿದಳೋ, ಅವುಗಳೆಲ್ಲವೂ ಆಕೆಗೆ ತುದಿ ಮೊದಲಿಲ್ಲದ ಆಶ್ಚರ್ಯವನ್ನುಂಟುಮಾಡುತ್ತಿದ್ದುವು.

ಜುಮೆಲೆಯು ರೇವತಿಗೆ ಕ್ಲೋರೋಫಾರಂ (ಜ್ಞಾನಾಂ ಕುಶರಸಾಯನ) ಕೊಟ್ಟು ಜ್ಞಾನ ತಪ್ಪಿಸಿ ತಾನಿದ್ದಲ್ಲಿಗೆ ಕರೆದುಕೊಂಡು ಬಂದಿದ್ದಳು. ಔಷಧದ ವೇಗವು ಕಡಿ ಮೆಯಾದ ಹಾಗೆಲ್ಲ, ಔಷಧವನ್ನು ಮತ್ತೆ ಪ್ರಯೋಗಿಸು ವಳು, ಮತ್ತೆ ರೇವತಿಯು ಜ್ಞಾನಹೀನಳಾಗುವಳು. ಈಸ ಲ ಮಾತ್ರ ರೇವತಿಯು ಚೈತನ್ಯವನ್ನು ಹೊಂದಿದವಳಾಗಿ, ತಾನು ಮಲಗಿದ್ದ ಕೊಠಡಿಯನ್ನು ಸುತ್ತಲೂ ನೋಡಿದಳು. ಅದು ಅವಳಿಗೆ ಅಪರಿಚಿತವಾಗಿದ್ದಿತು. ಅವಳ ಮುಂದುಗ ಡೆ ದೇವೇಂದ್ರವಿಜಯನು ಕುಳಿತಿರುವನು. ಆತನ ಪಕ್ಕದಲ್ಲಿ ಬಾಡಿದ ಮುಖವುಳ್ಳ ಶಚೀಂದ್ರನೂ, ಕೊಂಚದೂರದಲ್ಲಿ ಕುರ್ಚಿಗೆ ಬಿಗಿಯಲ್ಪಟ್ಟಿದ್ದ ಜುಮೆಲೆಯೂ ತಲೆಯನ್ನು ಬಗ್ಗಿಸಿಕೊಂಡು ಕುಳಿತಿದ್ದಳು.

ದೇವೇಂದ್ರನು ರೇವತಿಯನ್ನು ನೋಡಿ,- ಹೇಗಿದೆ? ಎಂದು ಕೇಳಿದನು.

ರೇ—ಸರಿಯಾಗಿದೆ.

ದೇ—ಏಳಬಲ್ಲೆಯಾ?

ರೇ—ಬಲ್ಲೆನು. (ಎದ್ದು ನಿಂತಳು)

ದೇ—ನಡೆಯಬಲ್ಲೆಯು?

ರೇ—ಬಲ್ಲೆನು, ಆದರೆ ತಲೆಮಾತ್ರ ಸ್ವಲ್ಪ ಭಾರವಾಗಿರುವುದು.

ಇಷ್ಟು ಮಾತು ನಡೆದ ಮೇಲೆ, ದೇವೇಂದ್ರನು ಹಿಂದೆ ನಡೆದ ಕೆಲಸಗಳೆಲ್ಲವನ್ನೂ ಒಂದೆರಡು ಮಾತುಗಳಲ್ಲಿ ಸಂಕ್ಷೇಪವಾಗಿ ಹೇಳಿದನು. ಆದರೆ ಜುಮೆಲೆಯು ನಿಂದ್ಯವಾದ ಪ್ರೇಮದ ವಿಷಯವನ್ನು ಮಾತ್ರ ರೇವತಿಗೆ ತಿಳಿಸಲಿಲ್ಲ. ಜುಮೆಲೆಯು ಇದನ್ನು ಕಂಡು ಸಂತೋಷಪಟ್ಟವಳಾಗಿ, ದೇವೇಂದ್ರನನ್ನು ಒಂದು ಸಲ ಕಣ್ಣೆತ್ತಿ ನೋಡಿ ಮತ್ತೆ ತಲೆಯನ್ನು ತಗ್ಗಿಸಿಕೊಂಡಳು.

ದೇವೇಂದ್ರನು ರೇವತಿಯೊಡನೆ ಪುನಃ ಮಾತನಾಡಿದನು-ಜುಮೆಲೆಯ ಭವಿಷ್ಯಜ್ಜೀವನವು ನಿನ್ನ ಅಧೀನದಲ್ಲಿರುವುದಾಗಿ ನಿಶ್ಚಯಿಸಲ್ಪಟ್ಟಿರುವುದು. ನಿನ್ನ ಮಾತಿನಂತೆ ನಡೆವುದಾಗಿ, ನಾನು ಜುಮೆಲೆಯಲ್ಲಿ ಪ್ರತಿಜ್ಞೆಕೊಟ್ಟಿರುವೆನು. ಆಕೆಯನ್ನು ಬಿಡಬೇಕೆಂದಿದ್ದರೆ ಬಿಡು- ಇಲ್ಲವಾದರೆ ಬೇಡ, ನಿನ್ನ ಇಷ್ಟವು ಹೇಗೋ ಹಾಗೆ ಮಾಡಬಹುದು. ಜುಮೆಲೆಯು ನಿನ್ನನ್ನು ಮೃತ್ಯುವಿನಿಂದ ಉದ್ಧಾರಮಾಡಿರುವಳು. ಅದೇ ಜುಮೆಲೆಯೇ ಮೊದಲು ನಿನ್ನನ್ನು ಮೃತ್ಯುವಿಗೆ ತುತ್ತಾಗಿ ಮಾಡುವುದರಲ್ಲಿದ್ದಳು. ನಾನೀಗ ಕೊಂಚಹೊತ್ತು ಹೊರಗೆ ಹೋಗಿರುವೆನು-ಈಗ ನಾನು ಇಲ್ಲಿರುವುದು ಸರಿಯಲ್ಲ, ನಾನಿದ್ದರೆ ಜುಮೆಲೆಯು ನಾಚುಗೆಯಿಂದ ನಿನ್ನಲ್ಲಿ ಯಾವ ಪ್ರಾರ್ಥನೆಯನ್ನೂ ಬಹಿರಂಗಪಡಿಸಲಾರಳು, ಆದುದರಿಂದ ನಾನು ಹೊರಗೆ ಹೊರಡುವೆನು, ನೀನು ಮಾತ್ರ ಜುಮೆಲೆಯನ್ನು ಮುಟ್ಟಲೂ ಕೂಡದು, ಅವಳ ಹತ್ತಿರಕ್ಕೂ ಹೋಗಕೂಡದು.

ಹೀಗೆ ಹೇಳಿ ದೇವೇಂದ್ರನು ಶಚೀಂದ್ರನನ್ನು ಕರೆದುಕೊಂಡು ಹೊರಗೆ ಹೋಗಿ ಮತ್ತೊಂದುಕಡೆ ಕಾಲವನ್ನು ನಿರೀಕ್ಷಿಸಿಕೊಂಡಿದ್ದನು.

ಹತ್ತು ಹದಿನೈದು ನಿಮಿಷಗಳು ಕಳೆದು ಹೋದುವು, ಯಾವ ವರ್ತಮಾನವೂ ಇಲ್ಲ. ಮತ್ತೆ ಹತ್ತು ನಿಮಿಷಗಳು ಕಳೆದುವು, ಆದರೂ ಯಾವ ವರ್ತಮಾನವೂ ಇಲ್ಲ. ದೇವೇಂದ್ರನಿಗೆ ಯೋಚನೆಗಿಟ್ಟಿತು. ಅವನು ಹೊರಗಿನಿಂದಲೇ-ನಾನು ಬಹಳ ಹೊತ್ತು ಕಾದಿರಲಾರೆ, ಇನ್ನು ಐದು ನಿಮಿಷಮಾತ್ರ ನಿರೀಕ್ಷಿಸುವೆನು. ಅಷ್ಟರಲ್ಲಿಯೇ ಎಲ್ಲವೂ ಇತ್ಯರ್ಥವಾಗಬೇಕು, ಎಂದು ಗಟ್ಟಿಯಾಗಿ ಕೂಗಿ ಹೇಳಿದನು. ಅದೇ ರೀತಿಯಲ್ಲಿಯೇ ಇನ್ನೂ ಐದು ನಿಮಿಷಗಳು ಕಳೆದು ಹೋದುವು.

ಐದು ನಿಮಿಷವಾದರೂ ಯಾವ ಉತ್ತರವೂ ಬಾರದಿರಲು, ದೇವೇಂದ್ರನು ಕೋಪದಿಂದ ಬಾಗಿಲನ್ನು ತೆಗೆದುಕೊಂಡು ಕೋಣೆಯೊಳಗೆ ಪ್ರವೇಶಮಾಡಿದನು. ಅಲ್ಲಿನ ವಿದ್ಯಮಾನವನ್ನು ನೋಡಿದಾಕ್ಷಣವೇ, ದೇವೇಂದ್ರನ ಶರೀರವೆಲ್ಲವೂ ಥರಥರ ನಡುಗಿತು. ತಲೆಯು ತಿರುಗಿ ಬಾಯಿಯು ಬಣಗಿ ಹೋಗಿ ಮಾತೇ ಹೊರಡದೇ ಹೋಯಿತು.

ಯಾವ ಕೋಣೆಯಲ್ಲಿ ದೇವೇಂದ್ರನು, ರೇವತಿಯನ್ನೂ, ಜಾಮೊಳೆಯನ್ನೂ ಬಿಟ್ಟು ಹೊರಗೆ ಬಂದಿದ್ದನೋ, ಆ ಕೋಣೆಯು ಈಗ ಶೂನ್ಯವಾಗಿಬಿಟ್ಟದ್ದಿತು

ರೇವತಿ ಯಿಲ್ಲ.

ಜಾಮೊಳೆಯೂ ಇಲ್ಲ.

ಅಲ್ಲಿ ಅವರಿದ್ದದ್ದಕ್ಕೆ ಯಾವ ಚಿಹ್ನೆಯೂ ಇರಲಿಲ್ಲ.

ಮೊದಲು ಮೊದಲು ದೇವೇಂದ್ರನಿಗೆ ಭ್ರಮವುಂಟಾಗಿ ತನ್ನನ್ನು ತಾನೇ ನಂಬದೆ, ತನ್ನ ಕಣ್ಣುಗಳನ್ನು ಚನ್ನಾಗಿ ಉಜ್ಜಿಕೊಂಡು ನೋಡಿದನು. ಎಷ್ಟು ನೋಡಿದರೂ, ಆ ಕೋಣೆಯಲ್ಲಿ ಯಾರೂ ಇರಲಿಲ್ಲ. ದೇವೇಂದ್ರನಿಗೆ ಯೋಚನೆಗಿಟ್ಟಿತು.

ಇದೇನು ಸ್ವಪ್ನವೇ ! ಅಥವಾ ಇಂದ್ರಜಾಲವೇ! ಈ ಮಾಯೆ ಯೇನಿರಬಹುದು! ಎಂದು ಯೋಚಿಸುತ್ತಾ, ಜೂಮೆಲೆಯು ಕುಳಿತಿದ್ದ ಕುರ್ಚಿಯ ಹತ್ತಿರಕ್ಕೆ ಹೋದನು. ಅಲ್ಲಿ ಸರಪಳಿ, ಕೈಬೇಡಿ ಕಾಲ್ಬೇಡಿಗಳು ಕುರ್ಚಿಯ ಕೆಳಗೆ ಬಿದ್ದಿದ್ದವು. ಕುರ್ಚಿಯ ಮೇಲೆ ಬರೆಯಲ್ಪಟ್ಟಿದ್ದ ಕಾಗದವೊಂದು ಇಡಲ್ಪಟ್ಟಿದ್ದಿತು. ಅದನ್ನು ದೇವೇಂದ್ರನು ತಗೆದು ಓದಿನೋಡಿದನು:— ' ಎಂತಹ ಚಮತ್ಕಾರ ! ಏನಾಗಿಹೋಯಿತು. ನಾನು ನಾನೇ ; ನೀನು ಮಾತ್ರ ಎಂದಿನಂತೆ ಪತ್ತೇದಾರನೇ. ನಾನಾದರೋ ಸ್ವತಂತ್ರಳು; ರೇವತಿಯು ಮಾತ್ರ ನನ್ನ ಅಧೀನದಲ್ಲಿರುವಳು. ಶಕ್ತಿಯಿದ್ದರೆ ಬಂದು ಕೈ ನೋಡು. ಬೇಕಾದರೆ ರೇವತಿಯನ್ನು ಉಳಿಸಿಕೋ.

ಅದೇ ಜೂಮೇಲಿಯಾ.

ದೇವೇಂದ್ರನು ಲುಪ್ತವಾಗಿದ್ದ ಧೈರ್ಯವನ್ನು ಒಟ್ಟುಗೂಡಿಸಿ, ಇಂತೆಂದನು.—ಹೇಗೆ ಓಡಿಹೋದಳು ! ಜೂಮೆಲೆಯು ಬಂಧಿಸಲ್ಪಟ್ಟಿರಲಿಲ್ಲವೆ ? ಅಷ್ಟೇ ಅಲ್ಲ ; ಅವಳ ಇದಿರಿಗೆ ರೇವತಿಯೂ ಇದ್ದಳು. ಇದೆಂತಹ ವ್ಯಾಪಾರ. ಶಚೀ, ನೀನು ಯಾರನ್ನು ಹೊರಗೆ ಕಟ್ಟಿಹಾಕಿ ಬಂದಿದ್ದೆಯೋ, ಆತನು ಇಲ್ಲಿಗೆ ಬಂದಿಲ್ಲವಷ್ಟೆ ?

ಶಚೀಂದ್ರನು ತಪ್ಪಿಸಿಕೊಂಡವನ ಸಂಗತಿಯನ್ನು ತಿಳಿಯಲು ಮನೆಯೆಲ್ಲವನ್ನೂ ಹುಡುಕುವುದಕ್ಕೆ ಹೊರಟ ಕೂಡಲೆ, ಒಂದು ತೀವ್ರವಾದ ತೇಜೋರಾಶಿಯು ಮುಖದ ಹತ್ತಿರ ಕಾಣಿಸಿತು. ಶಚೀಂದ್ರನು ತಕ್ಷಣವೇ ಒಂದು ಹಜ್ಜೆ ಹಿಂದಾದನು. ಆ ತೇಜಸ್ಸಿನ ಉತ್ತರ ಕ್ಷಣದಲ್ಲಿಯೇ, ಢಂ, ಢಂ, ಢಂ ಎಂದು ಪಿಸ್ತೂಲಿನ ಶಬ್ದವು ಕೇಳಿಸಿತು. ಶಚೀಂದ್ರನು ಬಹಳವಾಗಿ ಬೆದರಿದವನಾಗಿ, ದೇವೇಂದ್ರನ ಪಾದ ಮೂಲದಲ್ಲಿ ಹೋಗಿ ಬಿದ್ದನು. ಆಗ ದೇವೇಂದ್ರನು ತಾನೇ ಏನುಮಾಡಬಲ್ಲನು? ಆಗ ಸಾವಧಾನವಾಗಿ ಯೋಚನೆಗೆ ಕಾಲವಾಗಿರಲಿಲ್ಲ; ಆಕ್ಷಣವೇ ದೇವೇಂದ್ರನೂ ತನ್ನ ಪಿಸ್ತೂಲನ್ನು ಹೊರಗೆ ತೆಗೆದು; ಯಾವ ಕಡೆಯಲ್ಲಿ ಬೆಳಕು ಕಾಣಿಸಿತೋ, ಆ ಕಡೆಗೆ ಗುರಿಯಿಟ್ಟು ಹೊಡೆದನು. ಆಗ ಯಾವುದೋ ಒಂದು ಭಾರವಾಗ ವಸ್ತುವು ಕೆಳಗೆ ಬಿದ್ದಂತಾಗಿ, ರೋದನ ಧ್ವನಿಯೊಂದು ಕೇಳಿಸಿತು. ಅಂತೂ ದೇವೇಂದ್ರನ ಪಿಸ್ತೂಲಿನ ತೋಟವು (cartridge) ವ್ಯರ್ಥವಾಗಲಿಲ್ಲ.

ದೇವೇಂದ್ರನು, ಶಚೀಂದ್ರನನ್ನು ಅಲ್ಲಿಯೇ ಬಿಟ್ಟು ಹೊರಗೆ ಬಂದು ಶಬ್ದಕೇಳಿಸಿ ಬಂದ ಸ್ಥಳಕ್ಕೆ ನಾಲ್ಕಾರು ಹಜ್ಜೆ ಮುಂದೆಹೋಗಿ ನೋಡಲಾಗಿ, ದಾರಿಯಲ್ಲಿ ಯಾವನೋ ಒಬ್ಬನು ಸತ್ತಂತೆ ಬಿದ್ದಿದ್ದನು. ಆದರೆ, ಆತನ ದೇಹದಲ್ಲಿ ಪ್ರಾಣವಾಯುವು ಕೊಂಚ ಕೊಂಚವಾಗಿ ಸಂಚಾರಮಾಡುತ್ತಿತ್ತು. ದೇವೇಂದ್ರನು ನಿಶ್ಶಬ್ದವಾಗಿ ಅಲ್ಲಿಯೇ ನಿಂತುಬಿಟ್ಟನು.

—೦—

ಒಂಭತ್ತನೆಯ ಸಂಧಿ.

—೦—

(ಕೊನೆಯ ಪ್ರಯತ್ನ)

ಸತ್ತಂತಿದ್ದ ಮನುಷ್ಯನಿಗೆ ಕ್ರಮ ಕ್ರಮವಾಗಿ ಚೈತನ್ಯವುಂಟಾದುದನ್ನು ನೋಡಿ, ದೇವೇಂದ್ರನು— ಅಯ್ಯಾ! ನಾನು ಕೇಳುವ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡಬಲ್ಲೆಯ? ನೀನು ಕೊಡದೇ ಹೋದಲ್ಲಿ, ನನ್ನ ಕೈಯಿಂದ ನಿನಗೆ ವಿಮೋಚನೆಯೇ ಇಲ್ಲ, ಇದು ಅಲ್ಲದೆ ನಿನ್ನ ನಾಲಗೆಯನ್ನು ಸೀಳಿಬಿಡುವೆನು, ಎಂದನು.

ಅಪರಿಚಿತನು ಭಯದಿಂದ,—ತಾವು ಏನನ್ನು ಕೇಳಬೇಕೆಂದಿರುವಿರಿ ? ಎಂದನು.

ದೇ—ಜಾಮೆಳೆಯು ತಪ್ಪಿಸಿಕೊಂಡುದು ಹೇಗೆ ?

ಅಪರಿಚಿತ—ನಾನು ಆಕೆಯನ್ನು ಬಿಡಿಸಿದೆನು.

ದೇ—ಅಲ್ಲಿ ಮತ್ತೊಬ್ಬ ಹೆಂಗಸು ಇದ್ದಳಲ್ಲ, ಅವಳೇನೂ ಹೇಳಲಿಲ್ಲವೆ?

ಅಪ— ಮೊಟ್ಟಮೊದಲು ಆಕೆಗೆ ತಿಳಿಯದಹಾಗೆ ಕ್ಲೋರೋಫಾರಮನ್ನು ಕೊಟ್ಟು ಆಕೆಯನ್ನು ಗಾಡಿಯಲ್ಲಿ ಹಾಕಿಕೊಂಡು ಬೇರೇ ಸ್ಥಳದಲ್ಲಿ ಇಟ್ಟುಬಂದೆನು.

ದೇ—ಗಾಡಿ ! ಯಾವ ಗಾಡಿ ?

ಅಪ—ಪೂರ್ವದಿಕ್ಕಿನ ಕಡೆಯ ದಾರಿಯಲ್ಲಿ ಮೊದಲೇ ಈ ಉದ್ದೇಶದಿಂದ ಒಂದು ಗಾಡಿಯು ಸಿದ್ಧಮಾಡಲ್ಪಟ್ಟದ್ದಿತು.

ದೇ—ಯಾರ ಅಪ್ಪಣೆ ಮೇರೆ ?

ಅವ—ಜುವೆಲೆಯ ಅಪ್ಪಣೆ.

ದೇ—ಗಾಡಿಯನ್ನು ತರಿಸಲು ಕಾರಣವೇನು ?

ಅ—ಆಕೆಯು ತವ್ಮೊಡನೆ ಎಲ್ಲಿಯೋ ಹೋಗಬೇಕೆಂದು ಅಪ್ಪಣೆಯಾಗಿದ್ದಿತು.

ದೇ—ಆ ಗಾಡಿಯಲ್ಲಿ ಯಾರ್ಯಾರಿದ್ದರು ?

ಗಿರಿಧಾರಿಯೆಂಬ ನನ್ನ ಸ್ನೇಹಿತನೊಬ್ಬನು. ಅವನನ್ನೇ ನಿನ್ನ ಜತೆಗಾರನು ಕೆಳಗೆ ಬಂಧಿಸಿದ್ದನು. ನಾನು ಹೋಗಿ ಆತನನ್ನು ಬಿಡಿಸಿದೆನು, ಅಲ್ಲಿಂದ ನಿವ್ಮಗಳ ಕೆಲಸಗಳನ್ನುತಿಳಿಯಲೋಸುಗ ಗುಟ್ಟಾಗಿ ಇಲ್ಲಿಗೆಬಂದು ನೋಡಿದೆನು. ಕೊಠಡಿಯಲ್ಲಿ ನೀವು ಇಲ್ಲದಿರುವುದನ್ನುಕಂಡು, ನಾನು ಮಾಡಬೇಕಾದುದನ್ನು ಮಾಡಿದೆನು. ಅವರೆಲ್ಲರೂ ಈಗ ಎಲ್ಲಿಯೋ ಹೊರಟುಹೋದರು.

ದೇ—ನೀನೇತಕೆ ಹೋಗಲಿಲ್ಲ ?

ಅ—ನಿನ್ನನ್ನು ಕೊಲ್ಲುವುದಕ್ಕಾಗಿ.

ದೇ—ನನ್ನನ್ನು ಕೊಂದುದರಿಂದ ನಿನಗೆ ಬಂದ ಭಾಗ್ಯವೇನು ?

ಅ—ಜುವೆಲೆಗೆ ಮಹಾ ಲಾಭ.

ದೇ—ಅದರಿಂದ ನಿನಗಾದುದೇನು ?

ಅ—ಜುವೆಲೆಯ ಲಾಭವೇ ನನ್ನ ಲಾಭ.

ದೇ—ಗಾಡಿಯು ಎಲ್ಲಿಗೆ ಹೋಯಿತು ?

ಅ—ದಂದಾ ಪಟ್ಟನದ ಕಡೆಗೆ.

ದೇ—ದಂದಂ ಪಟ್ಟನದಲ್ಲಿ ಎಲ್ಲಿ-ಯಾವಸ್ಥಳದಲ್ಲಿ ?

ಅ—ನನಗೆ ಸ್ಥಳಗಳ ಚೆನ್ನಾಗಿಗೊತ್ತಿಲ್ಲ-ಈಗಅವರು ಬಹಳದೂರವೇನೂ ಹೋಗಿಲ್ಲ. ಈ ಮನೆಗೆ ಸೇರಿದ ಹಾಗಿ

ರುವ ತೋಟದಲ್ಲಿಯೋ ಅವರಿನ್ನೂ ಹೋಗುತ್ತಿರಬಹುದು.

ದೇ— ಗೊತ್ತಾಯಿತು. ಹರೇಕರಾಮನ ತೋಟದಲ್ಲೇನು ?

ಅ—ಅಹುದು ಅಹುದು, ಅಲ್ಲಿಯೆ.

ದೇ— ಹಾಗಾಗದೆ ಅದು ಸುಳ್ಳಾಗಿದ್ದರೆ, ನಾನು ನಿನ್ನನ್ನು-

ಮಾತು ಮುಗಿಯುವುದರೊಳಗಾಗಿಯೇ, ಆ ಅಪರಿಚಿತ ವ್ಯಕ್ತಿಯು- ನಾನು ಸುಳ್ಳು ಹೇಳಿಲ್ಲ, ಎಂದು ಹೇಳಿದ್ದನ್ನು ಕೇಳಿ, ದೇವೇಂದ್ರನು ನಿನಗೂ ನಿನ್ನ ಸ್ನೇಹಿತನಿಗೂ ಜುವೆಲೆಯೊಡನೆ ಪರಿಚಯವಾಗಿ ಎಷ್ಟು ದಿನಗಳಾದುವು ? ಎಂದು ಪ್ರಶ್ನೆಮಾಡಿದನು.

ಒಂದು ವಾರವಾಯಿತು.

ಆ ತೋಟದಲ್ಲಿ ಮತ್ತಾರಿರುವರು ?

ಒಬ್ಬ ಊಳಿಗದವನಿರುವನು- ಅವನ ಹೆಸರು ಅಚಲಸಿಂಹ.

ಜುವೇಲಿಯು ಮತ್ತು ನಿನ್ನ ಸ್ನೇಹಿತ ಗಿರಿಧಾರಿಯೂ ಹೊರಟು ಹೋಗಿ ಎಷ್ಟು ಹೊತ್ತಾಯಿತು ?

ನಾನು ನಿನ್ನ ಜತೆಗಾರನಿಗೆ ಪಿಸ್ತೂಲಿನಿಂದ ಹೊಡೆಯುವುದಕ್ಕೆ ಕೊಂಚ ಮುಂಚೆ.

ನಮ್ಮನ್ನು ಖೂನ್ ಮಾಡಲು ಕಾರಣವೇನು ? ಇದರಿಂದ ಜುವೆಲಗೆ ಲಾಭವೇನು ?

ನಿಮ್ಮನ್ನು ಖೂನ್ ಮಾಡುವುದಾದರೆ, ಜುವೆಲೆಯು ನನ್ನನ್ನು ಮದುವೆಮಾಡಿಕೊಳ್ಳುವುದಾಗಿ ಹೇಳಿದ್ದಳು.

ಅದನ್ನು ನೀನು ನಂಬಿದೆಯಾ ?

ಮೊದಲು ನಂಬಿದ್ದನು.

ಈ ರೀತಿಯಾಗಿ ಮಾತು ಕಥೆಗಳು ನಡೆಯುತ್ತಿರುವ ಲ್ಲಿ ಶಚೀಂದ್ರನಿಗೆ ಭಯವು ದೂರ ತೊಲಗಿ ಪೂರ್ವಾವಸ್ಥೆಯುಂಟಾಯಿತು. ಆಮೇಲೆ ಅವನು ಎದ್ದು ಕುಳಿತುಕೊಂಡನು. ದೇವೇಂದ್ರನು ಅವನನ್ನು ನೋಡಿ, ಶಚೀ, ನಿನಗೆ ನಡೆಯುವುದಕ್ಕೆ ಶಕ್ತಿಯಿರುವುದೇ ? ಎಂದು ಕೇಳಿದ್ದಕ್ಕೆ ಶಚೀಂದ್ರನು -ಇರುವುದು- ಎಂದು ಉತ್ತರಕೊಟ್ಟನು.

ದೇ-- ಜುಮೇಲಿಯು ಎಲ್ಲಿಗೆ ಹೋಗಿರುವಳೆಂಬುದನ್ನು ನಾನು ತಿಳಿದುಕೊಂಡಿರುವೆನು. ನಾನು ಈಗಲೇ ಆಕೆಯನ್ನು ಹುಡುಕಲು ಹೊರಡುವೆನು, ನೀನು ಇಲ್ಲಿಯೇ ಇರು. ನಾನು ಹಿಂತಿರುಗಿ ಬರುವವರೆಗೂ, ನೀನು ನನ್ನನ್ನು ನಿರೀಕ್ಷಿಸಿಕೊಂಡಿರು. ಸಾಧ್ಯವಾದರೆ, ಒಬ್ಬ ಪೋಲೀಸಿನವನನ್ನು ನಿನ್ನ ಸಹಾಯಕ್ಕಾಗಿ ಇಲ್ಲಿಗೆ ಕಳುಹಿಸಿಕೊಡುವೆನು.

ದೇವೇಂದ್ರನು ಹೀಗೆ ಹೇಳಿ ಬೇಗಬೇಗನೆ ಹೊರಟುಹೋದನು.

ದೇವೇಂದ್ರನು ಕೊಂಚಹೊತ್ತಿನೊಳಗಾಗಿಯೇ ಜಗುಬಾಬುವಿನ ಬೀದಿಗೆ ಬಂದು, ಅಲ್ಲಿ ಬಾಡು ಗಾಡಿಯನ್ನು ಬಾಡಿಗೆಗೆ ತೆಗೆದು ಅದರಲ್ಲಿ ಕುಳಿತುಕೊಂಡು, ಕುದುರೆಯ ಲಗಾಮನ್ನು ಎಳೆದು ಚಂಚಿಯನ್ನು ಕೈಗೆ ತೆಗೆದ ಕೂಡಲೆ ಗಾಡಿಯು ಮನೋವೇಗದಲ್ಲಿ ತೆರಳಿತು. ಗಾಡಿಯವನು ಯಾರೂ ಮಾಡದ ಈ ಸಂಭ್ರಮವನ್ನು ನೋಡಿ, ದೇವೇಂದ್ರವಿಜಯ ! ನಿನಗೇನಾದರೂ ಹುಚ್ಚುಗಿಚ್ಚು ಹಿಡಿದಿದೆಯೋ ? ಎಂದು ಬೆರಗಾಗಿ ನಿಂತನು.

ದೇವೇಂದ್ರನು ಅವನನ್ನು ನೋಡಿ ಗಾಡಿಯು ದಂದಂ ಕಡೆಗೆ ಹೋಗುವುದು, ಕೆಲಸವಾದರೊ ಗುರುತರವಾಗಿರು

ವುದು, ತೊಂದರೆಮಾಡದೆ ಸುಮ್ಮನೆ ಕುಳಿತುಕೊ. ತೊಂದರೆಮಾಡುವುದಾದರೆ, ನಿನ್ನನ್ನು ಗಾಡಿಯಿಂದ ತಳ್ಳಿಬಿಡವೆನು. ನಿನಗೆ ಹತ್ತುರೂಪಾಯಿಗಳ ಬಾಡಿಗೆ ಬೇಕಾಗಿದ್ದರೆ, ಬಾಯಿಮುಚ್ಚಿಕೊಂಡು ಸುಮ್ಮನೆ ಕುಳಿತುಕೊಂಡು ಬಾ, ಎಂದು ಹೇಳಿದನು.

ಗಾಡಿಯುವನು, ಹಣೆಯಲ್ಲಿ ಬರದಂತಾಗಲಿ ಎಂದು ಸುಮ್ಮನೆ ಇದ್ದುಬಿಟ್ಟನು. ಒಂದೇ ಗಂಟನಲ್ಲಿ ಎಂದೂ ಹತ್ತು ರೂಪಾಯಿಗಳ ಬಾಡಿಗೆ ಬಂದದ್ದೇ ಇಲ್ಲವಾದ್ದರಿಂದ, ಅವನು ಯಾವ ಗೋಣಗಾಟವೂ ಇಲ್ಲದೆ,ಗಾಡಿಯಲ್ಲಿ ಕುಳಿತುಕೊಂಡು ಹೊರಟನು.

ಗಾಡಿಯು ಸರ್ ಎಂದು ಹೊರಟೇ ಹೋಯಿತು.

—o—

ಹತ್ತನೆಯ ಸಂಧಿ

—o—

(ಪ್ರಯತ್ನದ ಶೇಷಾಂಶ)

ನೋಡುತಿದ್ದ ಹಾಗೆಯೇ ಗಾಡಿಯು ಶಾಮಬಜಾರನ್ನು ದಾಟಿ ಬಂದು ಕ್ಷಣಮಾತ್ರದಲ್ಲಿಯೇ ದಂದಂ ಕಡೆಗೆ ಬಂದೇರೀತಿಯಲ್ಲಿ ಓಡುತಿದ್ದಿತು. ಹರೇಕರಾಮನ ತೋಟದ ಹತ್ತಿರಕ್ಕೆ ಬರುವುದರೊಳಗಾಗಿಯೇ ಗಾಡಿಯ ಒಂದು ಚಕ್ರವು ಕಳಚಿಕೊಂಡು, ಗಾಡಿಯು ತಟ್ಟೆಂದು ಅಲ್ಲಿಯೇ ನಿಂತಿತು. ದೇವೇಂದ್ರನು ದಾಯತಪ್ಪಿ ಧುಪ್ಪೆಂದು, ಗಾಡಿಯಿಂದ ಕೆಳಕ್ಕೆಬಿದ್ದು ಚೇತರಿಸಿಕೊಂಡು, ಗಾಡಿಯುವನ ಕೈಗೆ ಹತ್ತುರೂಪಾಯಿಗಳ ನೋಟನ್ನು ಬಿ

ಸುಟು, ಒಂದೇ ಉಸಿರಿನಿಂದ ಮುಂದಕ್ಕೆ ಓಡಲಾರಂಭಿಸಿದನು.

ಒಂದು ಕ್ಷಣಕಾಲವೆನ್ನುವುದರೊಳಗಾಗಿ, ದೇವೇಂದ್ರನು, ಹರೇಕೆರಾಮನ ತೋಟದ ಮುಂದುಗಡೆಗೆ ಬಂದು ಸೇರಿದನು. ಅವನು ತೋಟದೊಳಗೆ ಪ್ರವೇಶಮಾಡಿ ಪಶ್ಚಿಮದ ಕಡೆಗೆ ಹೊರಟನು; ಅಲ್ಲಿ ಎರಡಂತಸ್ತಿನ ಮನೆಯೊಂದು ಕಾಣಿಸಿತು. ದೇವೇಂದ್ರನು ಅದರ ಎಡಭಾಗದಲ್ಲಿದ್ದ ಮೆಟ್ಟಲುಗಳನ್ನು ಹತ್ತಿ ಮೇಲಕ್ಕೆ ಹೋದನು. ಅಚಲಸಿಂಹನು ನಿಶ್ಚಿಂತನಾಗಿ ತಂಬಾಕುಸೇವನೆಯನ್ನು ಮಾಡುತ್ತಾ ಹೊರಗಿನ ಕೈಸಾಲೆಯಲ್ಲಿ ಕುಳಿತಿದ್ದನು. ದೇವೇಂದ್ರನು ನಿಶ್ಶಬ್ದವಾಗಿ ಹೋಗಿ ಅವನ ಹಿಂದೆ ನಿಂತನು. ಅಚಲನು ತಂಬಾಕನ್ನು ಸೇವಿಸುತ್ತಾ ಪ್ರಪಂಚವನ್ನೇ ಮರೆತು ಕುಳಿತಿರುವಲ್ಲಿ, ದೇವೇಂದ್ರನು ಹಿಂದಿನಿಂದ ಅವನ ಗಂಟಲನ್ನು ಬಲವಾಗಿ ಅದಿಮಿ ಹಿಡಿದನು. ಅಚಲನ ಶ್ವಾಸವು ರುದ್ಧವಾಗಿ, ಅವನ ಗಂಟಲಿನಲ್ಲಿ ಗುರ ಗುರ ಎಂದು ಶಬ್ದವು ತಲೆದೋರಿತು; ಎರಡು ಕಣ್ಣುಗುಡ್ಡೆಗಳೂ ಮೇಲಕ್ಕೆ ಸಿಕ್ಕಿಕೊಂಡು, ಅಚಲನು ಜ್ಞಾನವಿಲ್ಲದೆ ನೆಲದಮೇಲೆ ಬಿದ್ದುಬಿಟ್ಟನು. ದೇವೇಂದ್ರನು ಅನಂತರ ಅವನ ಕೈಕಾಲುಗಳನ್ನು ಬಲವಾಗಿ ಕಟ್ಟಿಹಾಕಿ, ಅವನ ಬಾಯಿಯಲ್ಲಿಯೂ ಬಟ್ಟೆಯನ್ನು ತುರುಕಿ, ಮೇಲಿನಿಂದ ಕೆಳಗೆ ಇಳಿದು ಬಂದುಬಿಟ್ಟನು.

—o—

ಹನ್ನೊಂದನೆಯ ಸಂಧಿ

—o—

(ಉಪಸಂಹಾರ)

ದೇವೇಂದ್ರನು ಅಲ್ಲಿಂದ ಬೈಠಕ್‌ಖಾನೆಯೊಳಗೆ ಪ್ರವೇಶಮಾಡಿ ನೋಡಿದನು. ಅಲ್ಲಿಯೂ ಯಾರೂ ಇರಲಿಲ್ಲ. ಅಲ್ಲಿ ಒಂದು ಮಲಿನವಾದ ಹಾಸಿಗೆ ಹಾಸಿದ್ದಿತು. ಬಹಳ ಬಳಲಿದ್ದ ದೇವೇಂದ್ರನು, ಅದರ ಮೇಲೆಹೋಗಿ ಕುಳಿತುಕೊಂಡನು. ಕೊಂಚ ಹೊತ್ತಿನಮೇಲೆ, ಒಂದು ಗಾಡಿಯ ಘರ್ಘರಧ್ವನಿಯು ಕೇಳಬಂದಿತು. ದೇವೇಂದ್ರನು ಕಿಟಕಿಯಿಂದ ನೋಡಿದನು. ಬೆಳ್ದಿಂಗಳಲ್ಲಿ ಒಂದು ಗಾಡಿಯು ತಾನಿದ್ದ ಬಂಗಲಿಯ ಕಡೆಗೆ ಬರುತಿದ್ದಿತು. ಈ ಗಾಡಿಯಲ್ಲಿ ಜುಮೆಲ, ರೇವತಿಯರಿಬ್ಬರೂ ಕುಳಿತಿರುವರು, ಗಾಡಿ ಹೊಡೆಯುವವನೇ ಗಿರಿಧಾರಿಯಾಗಿರಬೇಕೆಂದು ಅವನು ನಿರ್ಧರಮಾಡಿಕೊಂಡನು.

ಸ್ವಲ್ಪಹೊತ್ತಿನೊಳಗಾಗಿಯೇ ಗಾಡಿಯು ಬಂಗಲಿಯ ಮುಂದೆ ಬಂದು ನಿಂತಿತು, ಕೂಡಲೆ ಗಿರಿಧಾರಿಯು ಗಾಡಿಯಿಂದಿಳಿದನು.

ಅಚಲಸಿಂಹ ! ಅಚಲಸಿಂಹ ! ಎಂದು ಜುಮೆಲೆಯು ಕೂಗಿದಳು. ಅಚಲಸಿಂಹನು ಮಾತನಾಡಲಿಲ್ಲ- ಉತ್ತರ ಕೊಡುವವರಾರು ?

ಗಿರಿಧಾರಿ ಮಾತನಾಡಿದನು-ಅವನು ಸಾಯಲಿ- ನೀಚ! ಹಾಳಾದವನು ಎಲ್ಲಿಗೆಹೋದನೊ.

ಜುಮೆಲೆ--ಅವನು ಭಂಗಿ ಗಿಂಗಿ ಏನಾದರೂ ಸೇವಿ

ಸಿ ಜ್ಞಾನತಪ್ಪಿ ಎಲ್ಲಿಯಾದರೂ ಬಿದ್ದಿರಬಹುದು. ಅವನು ಎಲ್ಲಿಗಾದರೂ ಹಾಳಾಗಿಹೋಗಲಿ. ಗಿರಿಧಾರಿ, ನೀನು ನನ್ನ ತಂಗಿಯನ್ನು ಒಳಗೆ ಕರೆದುಕೊಂಡುಹೋಗು.

ಪತ್ತೇದಾರನು--- ಜುಮೇಲೆಯ ತಂಗಿ ! ಇದೇನಿರಬಹುದು ? ಎಂದು ತನ್ನಲ್ಲಿ ತಾನೇ ಯೋಚಿಸುತ್ತಿರುವಲ್ಲಿ, ಅವನ ಸರ್ವಾಂಗವೆಲ್ಲವೂ ನಡುಗಿತು.

ಗಿರಿ---ಅವನು ಇನ್ನೂ ಸತ್ತಿಲ್ಲವಷ್ಟೆ, ಎಂದನು.

ಜುಮೇಲೆ--- (ಮಂದಹಾಸದೊಡನೆ) ಸತ್ತನೆ ? ಇಲ್ಲ. ಅವನಿನ್ನೂ ಸತ್ತಿಲ್ಲ. ಹೋಗು, ಈಕೆಯನ್ನು ಎತ್ತಿಕೊಂಡುಹೋಗು.

ಗಿರಿ---ಎಲ್ಲಿಗೆ ಕರೆದುಕೊಂಡು ಹೋಗಲಿ.

ಜುಮೇಲೆ---ಬೈಠಕ್‌ಖಾನೆಗೆ.

ಬೈಠಕ್‌ಖಾನೆಯಲ್ಲಿಯೇ ದೇವೇಂದ್ರನು ಅವರನ್ನು ನಿರೀಕ್ಷಿಸಿಕೊಂಡಿದ್ದನು. ಗಿರಿಧಾರಿಯು ಅಲ್ಲಿಗೆ ಬರುವುದಾಗಿ ತಿಳಿದು ದೇವೇಂದ್ರನು ಬಾಗಿಲಹಿಂದೆ ಅವಿತುಕೊಂಡನು. ಬಳಿಕ ಗಿರಿಧಾರಿಯು ರೇವತಿಯನ್ನು ಎತ್ತಿಕೊಂಡು ಆ ಕೋಣೆಯೊಳಗೆ ಪ್ರವೇಶಮಾಡಿದನು. ಅಲ್ಲಿ ದೀಪವಿಲ್ಲದ್ದರಿಂದ ಗಿರಿಧಾರಿಯು ದೇವೇಂದ್ರನನ್ನು ನೋಡಲು ಅವಕಾಶವಾಗಲಿಲ್ಲ. ಪಶ್ಚಿಮದಿಕ್ಕಿನಲ್ಲಿದ್ದ ಕಿಟಕಿಯಮೂಲಕ ಪ್ರವೇಶಮಾಡಿದ ಬೆಳ್ದಿಂಗಳ ಪ್ರಕಾಶದಿಂದ ಗಿರಿಧಾರಿಯು ಹಾಸಿಗೆಯು ಇದ್ದ ಸ್ಥಳವನ್ನು ಕಂಡುಹಿಡಿದು ಅದರ ಮೇಲೆ ರೇವತಿಯನ್ನು ಮಲಗಿಸಿ ಹೊರಗೆ ಹೊರಡಲು ಯತ್ನಮಾಡಿದನು

ಈ ಸಮಯದಲ್ಲಿ ದೇವೇಂದ್ರವಿಜಯನು ನಿಶ್ಶಬ್ದ

ವಾಗಿ ಗಿರಿಧಾರಿಯನ್ನು ಆಕ್ರಮಣಮಾಡಿದನು. ಅವನು ಯಾವರೀತಿಯಲ್ಲಿ ಅಚಲಸಿಂಹನನ್ನು ಬಂದಿಯನ್ನಾಗಿ ಮಾಡಿ ನೆಲದಮೇಲೆ ಕೆಡಹಿದ್ದನೊ, ಅದೇ ರೀತಿಯಲ್ಲಿಯೇ ಗಿರಿಧಾರಿಯನ್ನೂ ಬಂದಿಯನ್ನಾಗಿಮಾಡಿ ಕೆಡಹಿದನು. ಈ ಆಕ್ರಮಣದಿಂದ ಯಾವ ಶಬ್ದವೂ ಆಗಲಿಲ್ಲ. ಆದುದರಿಂದಲೇ ದೇವೇಂದ್ರನ ಕಾರ್ಯಸಿದ್ಧಿಯು ಸುಮುಖವಾಗಿ ನೆರವೇರಿತು. ಗಿರಿಧಾರಿಯ ಮೃತಪ್ರಾಯವಾದ ದೇಹವನ್ನು ಮಂಚದ ಕೆಳಗೆ ಒತ್ತರಿಸಿದನು.

ಆಬಳಿಕ ದೇವೇಂದ್ರನು ರೇವತಿಯಿದ್ದಲ್ಲಿಗೆ ಹೋಗಿ, ಅವಳ ಮುಖದಲ್ಲಿ ಮುಖವಿಟ್ಟು ನೋಡಿ, ರೇವತಿಯು ಪೂರ್ವದಂತೆಯೇ ಕ್ಲೋರೋ ಫಾರಮಿನ ಆವೇಗದಿಂದ ಅಚೇತನಳಾಗಿರುವಳೇ ಹೊರತು, ಮೃತಳಾಗಿಲ್ಲವೆಂದು ತಿಳಿದುಕೊಂಡನು. ಹೆಚ್ಚಾದ ವ್ಯಸನಕ್ಕೆ ಆತನಿಗೇನೂ ಕಾರಣವಿರಲಿಲ್ಲ. ಹತಭಾಗ್ಯೆ! ನಿನ್ನ ದುರ್ದಿನವು ಇಂದಿಗೆ ಪೂರೈಸುವುದು; ಎಂದು ಮನದಲ್ಲಿಯೇ ಯೋಚಿಸಿಕೊಂಡನು.

ಆಗ ಹೊರಗಿನಿಂದ ಜುಮೆಲೆಯು ಗಿರಿಧಾರಿ, ಗಿರಿಧಾರಿ ಎಂದು ಕೂಗಿದಳು.

ದೇವೇಂದ್ರನು ಗಿರಿಧಾರಿಯ ಕಂಠಸ್ವರವನ್ನು ಅನುಕರಣಮಾಡುತ್ತಾ, ಮತ್ತೇನಾಗಿರುವುದು ? ನೀನೇ ಇಲ್ಲಿಗೆ ಬರಬಾರದೆ? ಎಂದನು.

ಜುಮೆಲೆಯು ಹೊರಗಿನಿಂದಲೆ ಇಲ್ಲಿಂದ-ಔಷಧದ ಪೆಟ್ಟಗೆಯನ್ನೂ ಬಟ್ಟೆಬರೆಗಳನ್ನೂ ಒಳಗೆ ತೆಗೆದುಕೊಂಡು ಹೋಗು, ಎಂದು ಹೇಳಿದ್ದನ್ನು ಕೇಳಿ, ದೇವೇಂದ್ರನು ಮೊದಲಿನಂತೆಯೇ ನಿನ್ನ ಬಟ್ಟೆ, ಪೆಟ್ಟಗೆ, ನೀನೇ ತೆಗೆದಿಡು,

ನಾನು ನಿನ್ನ ತಂಗಿಯನ್ನು ಕತ್ತಲಿನಲ್ಲಿ ಹೊತ್ತುಕೊಂಡು ಹೋಗುವಾಗ ಕಾಲೆಡವಿ ಬಿದ್ದೆನು, ಎಂದನು. ಅದನ್ನು ಕೇಳಿ ಜುಮೆಲೆಯು ನಗುತ, ತಾನೇ ಬೈಠಕಖಾನೆಯೊಳಗೆ ಬರಲಾರಂಭಿಸಿದಳು. ದೇವೇಂದ್ರನು, ಅವಳು ಒಳಗೆ ಬಂದುದನ್ನು ನೋಡಿದನು. ಜುಮೆಲೆಯು ಕೋಟಡಿಯನ್ನು ಪ್ರವೇಶಮಾಡಿದ ಕೂಡಲೆ, ಗಿರಿಧಾರಿ !, ಎಂದು ಮತ್ತೆ ಕೂಗಿದಳು. ಆಗ ದೇವೇಂದ್ರನು ತನ್ನ ಕೈಲಾಂದ್ರವನ್ನು ಹೊರಗೆ ತೆಗೆದನು. ಅತಿತೀವ್ರವಾದ ಪ್ರಕಾಶವು ಜುಮೆಲೆಯ ಮುಖದಮೇಲೆ ಬಿದ್ದಿತು.

ದೇವೇಂದ್ರನು ಕರ್ಕಶವಾದ ಸ್ವರದಿಂದ- ಗಿರಿಧಾರಿಯು ಇಲ್ಲಿಲ್ಲ. ಜುಮೆಲೆ ! ನಿನ್ನನ್ನು ನಿರೀಕ್ಷಿಸಿಕೊಂಡೇ ನಾನಿರುವೆನು.

ದೇ-ವೇಂ-ದ್ರ-ವಿ-ಜ-ಯ ! ಎಂದು ಜುಮೆಲೆಯು ಆಶ್ಚರ್ಯದಿಂದ ಹೇಳಿದಳು.

ಅಹುದು,ದೇವೇಂದ್ರ ವಿಜಯ, ನಿನ್ನ ಯಮ, ನಿನ್ನ ಶತ್ರು-ಪರಮಶತ್ರು, ಒಂದು ಹೆಜ್ಜೆ ಹಿಂದಾಗಲಿ, ಮುಂದಾಗಲಿ ತೆಗೆದಿಡುವುದಾದರೆ ನಿನ್ನನ್ನು ನಾನು ಗೋಲಿಯಿಂದ ಸುಟ್ಟು ಬಿಡುವೆನು. ಇಷ್ಟು ದಿವಸವೂ ನೀನು ನನ್ನನ್ನು ಕೈಲಾಗದವನನ್ನಾಗಿ ಮಾಡಿ ಕುಳ್ಳಿರಿಸಿದ್ದೆ, ನಿನಗಾಗಿ ನಾನು ಎಷ್ಟೋ ದಿನಗಳು ಹೊಟ್ಟೆಗಿಲ್ಲದೇ ಸತ್ತಿರುವೆನು. ಇದು ಅಲ್ಲದೆ, ಇಲ್ಲಿನವರೆಗೂ ನೀನು ನನಗೆ ಇಲ್ಲದ ಕ್ಲೇಶವನ್ನುಂಟುಮಾಡಿರುವೆ. ಇಂದು ನಿನಗೆ ಉದ್ಧಾರವೆಂಬುದಿಲ್ಲ-ಅದರಲ್ಲಿಯೂ ದೇವೇಂದ್ರನ ಕೈಯಿಂದ ನಿನಗೆ ಉದ್ಧಾರವೆಂಬುದೇ ಇಲ್ಲ. ಕೊಂಚ ಅಲುಗಾಡುವುದಾದರೂ ನಿನ್ನನ್ನು ನಾನು ಸು

ಟ್ಟುಬೂದಿಮಾಡುವೆನು, ಎಂದು ದೇವೇಂದ್ರವಿಜಯನು ಕೋ ಪದಿಂದ ಉನ್ಮತ್ತನಂತಾಗಿ, ಕಣ್ಣುಗಳಿಂದ ಬೆಂಕಿಯ ಕಿಡಿ ಗಳನ್ನು ಕಾರಲಾರಂಭಿಸಿದನು.

ಜಾಮೇಲೆಯು ಇದರಿಂದ ಕಿಂಚಿತ್ತೂ ಹೆದರಲಿಲ್ಲ. ಅವ ಳು ತನ್ನ ಅಖಂಡವಾದ ಪ್ರತಾಪವನ್ನು ಒಳಗೆ ಅಡಗಿಸಿ ಕೊಂಡು ನಗುತನಗುತ ಇಂತೆಂದಳು,—

ಅಮ್ಮಮ್ಮ ! ನೀನು ಜಾಮೇಲೆಯನ್ನು ಗುಂಡಿನಿಂದ ಸುಟ್ಟುಬಿಡುವೆಯು ? ದೇವೇಂದ್ರ ! ಆಗಲಾರದು, ನಿನ್ನಿಂದ ಸಾಧ್ಯವಲ್ಲ-ನಿನ್ನ ಕೈಯಿಂದ ಸಾಯುವುದಾದರೂ ಜಾಮೇಲೆ ಗೆ ಕಳಂಕವೆಂಬುದು ಉಂಟೇ ಉಂಟು. ದೇವೇಂದ್ರ ! ನಿ ನ್ನ ಕೈಯಿಂದ ನನಗೆ ಮರಣವೇ ? ಅಯ್ಯೋ ! ನಾನೇತಕೆ ಸಾಯಲಿಲ್ಲ ! ಮಾತೃಸ್ತನ್ಯವು ನನಗೆ ವಿಷವಾಗಿ ಪರಿಣಮಿಸ ಲಿಲ್ಲವೇತಕೆ ? ಯಾರನ್ನು ನಾನು ಪ್ರೀತಿಸುವೆನೋ, ಅವನ ಕೈಯಿಂದಲೇ ನನಗ ಮರಣ ! ಕಷ್ಟ ! ಕಷ್ಟ!! ಕಷ್ಟ!!! ಅಂತಹ ಮರಣವು ಬಹಳ ಕಷ್ಟತರವಾದುದು.

ದೇವೇಂದ್ರ! ನಾನು ನಿನ್ನನ್ನು ಪ್ರೀತಿಸುವೆನೆಂದು ಈ ಗಲೂ ಹೇಳುವೆನು. ನಾನು ಮೊದಲಿನಿಂದಲೂ ನಿನ್ನನ್ನು ಪ್ರೀತಿಸುತಲಿದ್ದೆನು- ಈಗಲೂ ಪ್ರೀತಿಸುವೆನು. ಮುಂದೆ ಯೂ ನಾನು ನಿನ್ನನ್ನು ಪ್ರೀತಿಸುವೆನು. ಏಳೇಳುಜನ್ಮ ಕ್ಕೂ ನಿನ್ನನ್ನು ಪ್ರೀತಿಸಿಯೇ ಪ್ರೀತಿಸುವೆನು. ಅದರಲ್ಲಿ ಯಾವ ಸಂದೇಹವೂ ಇರುವುದಿಲ್ಲ.

ಹೀಗೆ ಹೇಳುತ ಹೇಳುತ ಜುವೇಲಿಯು ದೇವೇಂದ್ರನ ಪಾದಮೂಲದಲ್ಲಿ ಬಿದ್ದಳು. ಬಿದ್ದವಳು ಮತ್ತೆ ಏಳಲೇ ಇಲ್ಲ. ದೇವೇಂದ್ರನ ಕೋಪವು ಶಾಂತವಾಗಿ, ಅವನ ಕಣ್ಣುಗಳಿಂದಲೂ ಎರಡು ತೊಟ್ಟು ಕಣ್ಣೀರು ಕೆಳಗೆ ಜಾರಿ ಬಿದ್ದಿತು.

—ಸಂಪೂರ್ಣಂ—